ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 24 ಶನಿವಾರ 2024

ಸಂಪುಟ: 44 | ಸಂಚಿಕೆ: 307 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೃಷಿ ಮಾಡುವವರಿಗೆ ಮಾತ್ರ
ನೀರು ಒದಗಿಸುವ ಹೊಸ ಯೋಜನೆ

● ಜಲ ಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಘೋಷಣೆ ● ಮಧ್ಯಪ್ರದೇಶ, ರಾಜಸ್ತಾನ ಮಾದರಿ ನದಿ, ಕೆರೆ–ಕಟ್ಟೆಗಳಿಂದ ಪೈಪ್‌ಲೈನ್ ಮೂಲಕ ಕೃಷಿಗೆ ನೀರು ಹರಿಸುವ ಸೌಕರ್ಯ ● ಏನೂ ಬೆಳೆ ಬೆಳೆಯದಿದ್ದಾಗ ಪೈಪ್ ಬಂದ್ ಮಾಡಲು ನಿರ್ಧಾರ






ಬೆಂಗಳೂರು, ಫೆ.23(ಕೆಎಂಶಿ)– ಜಮೀನಿದ್ದು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವವರಿಗೆ ಮಾತ್ರ ನೀರು ಒದಗಿಸುವ ಹೊಸ ಯೋಜನೆಯನ್ನು ಜಾರಿಗೊಳಿಸುವುದಾಗಿ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ವಿಧಾನ ಪರಿಷತ್‌ನಲ್ಲಿಂದು ಘೋಷಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಹಲವು ಸದಸ್ಯರ ಪ್ರಸ್ತಾವಗಳಿಗೆ ಉತ್ತರಿಸಿದ ಸಚಿವರು, ಮಧ್ಯಪ್ರದೇಶ ಸರ್ಕಾರ ಜಾರಿಗೆ ತಂದಿರುವ ಹನಿ ನೀರಾವರಿ ಯೋಜನೆಯನ್ನು ಕರ್ನಾಟಕದಲ್ಲೂ ಅನುಷ್ಠಾನಗೊಳಿಸಲಾಗುವುದು ಎಂದರು. ನದಿ, ಕೆರೆ ಮೂಲಗಳಿಂದ ಜಮೀನುಗಳಿಗೆ ನೀರು ಹರಿಸಲಾಗುತ್ತದೆ. ಕೃಷಿಕರು ಇದನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳದ್ದರಿಂದ ನೀರು ಪೋಲಾಗುತ್ತಿದೆ. ಇದನ್ನು ತಪ್ಪಿಸಲು ರೈತರ ಜಮೀನುಗಳಿಗೆ ನೇರವಾಗಿ ಕೊಳವೆಗಳನ್ನು ಅಳವಡಿಸಿ, ನೀರು ಪೂರೈಸಲಾಗುವುದು. ಇಲಾಖೆ ಕೇವಲ ಜಮೀನಿನ ಒಂದು ಭಾಗಕ್ಕೆ ಕೊಳವೆ ಅಳವಡಿಕೆ ಮಾಡಲಿದೆ, ಕೃಷಿ ಮಾಡುವ ರೈತರು ಅಲ್ಲಿಂದ ತಮ್ಮ ಹೊಲಕ್ಕೆ ಡ್ರಿಪ್ ಯೋಜನೆ ಮೂಲಕ ಅಥವಾ ಕೊಳವೆಗಳನ್ನು ವಿಸ್ತರಿಸಿಕೊಂಡು ನೀರು ಪಡೆಯಬೇಕು ಎಂದು ಅವರು ತಿಳಿಸಿದರು. ಒಂದು ವೇಳೆ ರೈತ ತನ್ನ ಭೂಮಿಯಲ್ಲಿ ಆ ಸಾಲಿನಲ್ಲಿ ಬೆಳೆ ತೆಗೆಯದಿದ್ದರೆ ನೀರಿನ ಕೊಳವೆಯನ್ನು ಸ್ಥಗಿತಗೊಳಿಸಬೇಕು. ಎಲ್ಲ ತೆರನಾದ ಕೃಷಿ ಚಟುವಟಿಕೆಗೆ ರೈತರು ಡ್ರಿಪ್ ವ್ಯವಸ್ಥೆ ಮಾಡಿಕೊಂಡರೆ ಬಳಕೆಯಲ್ಲಿ ಶೇಕಡ 50ರಷ್ಟು ನೀರನ್ನು ಉಳಿಸಲು ಸಾಧ್ಯ. ಮಧ್ಯ ಪ್ರದೇಶ ಹಾಗೂ ರಾಜಸ್ತಾನದ ಕೆಲವು ಭಾಗಗಳಲ್ಲಿ ಈ ಯೋಜನೆ ಯಶಸ್ವಿಯಾಗಿದ್ದು, ತಾವೇ ಖುದ್ದಾಗಿ ಅಲ್ಲಿ ಅಧ್ಯಯನ ನಡೆಸಿ, ಕರ್ನಾಟಕದಲ್ಲೂ ಯೋಜನೆ ಜಾರಿ ಮಾಡುವುದಾಗಿ ತಿಳಿಸಿದರು.

ಮುಂದಿನ ದಿನಗಳಲ್ಲಿ ನದಿ ಪಾತ್ರದಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಹೆಚ್ಚು ಒತ್ತು ನೀಡಲಾಗುವುದು. ಮಳೆಗಾಲದಲ್ಲೇ ಇಂತಹ ಕಾರ್ಯಕ್ರಮ ಕೈಗೆತ್ತಿಕೊಂಡರೆ, ಹೆಚ್ಚುವರಿಯಾಗಿ ನೀರು ಸಮುದ್ರಕ್ಕೆ ● 7ನೇ ಪುಟಕ್ಕೆ

ಕಾಫಿ ಬೆಳೆಗಾರರು ಮತ್ತು ಬಗರ್ ಹುಕುಂ ರೈತರೊಂದಿಗೆ ಪ್ರಾಮಾಣಿಕವಾಗಿ ವ್ಯವಹರಿಸಿ


ಎ.ಎಸ್.ಪೊನ್ನಣ್ಣ


ಎ.ಮಂಜು


ಮಂತರ್‌ಗೌಡ

ಡಾ.ಕೆ.ಬಿ.ಗಣಪತಿ
ಹಿರಿಯ ಪತ್ರಕರ್ತರು

ಮೈಸೂರು, ಫೆ.23–ರಾಜ್ಯ ವಿಧಾನ ಸಭೆಯಲ್ಲಿ ಗುರುವಾರ ಕಾಫಿ ಬೆಳೆಗಾರರು ಮತ್ತು ಬಗರ್ ಹುಕುಂ ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಗೌರವಾನ್ವಿತ ಸದಸ್ಯರು 1991, 1999 ಮತ್ತು 2018ನೇ ವರ್ಷಗಳಿಗೆ ಸಂಬಂಧಿಸಿದಂತೆ ಫಾರಂ 50, 53 ಮತ್ತು 57ರ ಬಗ್ಗೆ ಪ್ರಸ್ತಾಪ ಮಾಡಿದರು.

ಈ ಚರ್ಚೆಯನ್ನು ಆಲಿಸುತ್ತ ಕುಳಿತಿದ್ದ ಹೆಚ್ಚಿನ ಸಂಖ್ಯೆಯ ಸದಸ್ಯರಿಗೆ, ಅಕ್ಷರಸ್ಥ ಮತ್ತು ಅನಕ್ಷರಸ್ಥ ರೈತರು, ವೃತ್ತ ಪತ್ರಿಕೆಗಳಲ್ಲಿ ಓದಿಯೋ ಇಲ್ಲವೇ ಬೇರೆಯವರ ಮೂಲಕವೋ ತಿಳಿದುಕೊಂಡವರ ಹಾಗೋ, ಸದರಿ ಚರ್ಚೆಯ ತಳಬುಡ ತಿಳಿಯದವರ ಹಾಗೋ ಇದ್ದದ್ದನ್ನು ಸ್ಪಷ್ಟವಾಗಿ ಕಾಣಬಹುದಾಗಿತ್ತು.

ರಾಜಕಾರಣಿಗಳು ತಮ್ಮ ಸಾರ್ವಜನಿಕ ಭಾಷಣಗಳು ಮತ್ತು ಚರ್ಚೆಗಳಲ್ಲಿ ಪೊಳ್ಳು ಭರವಸೆ ನೀಡುತ್ತಾರೆ. ಭ್ರಷ್ಟಾಚಾರದ ಜಾಲದಲ್ಲಿ ಸಿಲುಕಿರುವ ಬಡ ರೈತರಿಗೆ ತಮ್ಮ ಆಸ್ತಿ ದಾಖಲೆಗಳನ್ನು ಮತ್ತು ಹಕ್ಕು ಪತ್ರಗಳನ್ನು ನ್ಯಾಯಯುತವಾಗಿ ಕಾನೂನು ಮಾರ್ಗದಲ್ಲಿ ಪಡೆಯಲು, ಸಾಲದ ಸುಳಿಯಿಂದ ಪಾರಾಗಲು ಬರೀ ಬಾಯಿ ಉಪಚಾರದ ಮಾತುಗಳನ್ನು ಆಡುತ್ತಾರೆ. ಈ ದಾಖಲೆಗಳು ತುಂಬಾ ಮುಖ್ಯವಾದದ್ದು. ಏಕೆಂದರೆ, ಕಾನೂನು ಬದ್ಧ ದಾಖಲೆಗಳ ಮೂಲಕ ಮಾತ್ರ ತಮ್ಮ ವೈಯಕ್ತಿಕ ಇಲ್ಲವೆ ಕೌಟುಂಬಿಕ ಅಗತ್ಯಗಳಿಗೋಸ್ಕರ ಹಣಕ್ಕಾಗಿ ತಮ್ಮ ಆಸ್ತಿಯನ್ನು ಅಡಮಾನ ಇಡಲು ಅಥವಾ ಬೇರೆಯವರಿಗೆ ಮಾರಾಟ ಮಾಡಲು ಸಾಧ್ಯವಾಗುತ್ತದೆ.

ದುರದೃಷ್ಟವಶಾತ್, ಸದನದಲ್ಲಿ ನಡೆದ ಚರ್ಚೆಯಿಂದ ಸ್ಪಷ್ಟವಾಗಿ ತಿಳಿದುಬಂದ ವಿಚಾರವೆಂದರೆ, ಇಷ್ಟು ಸುದೀರ್ಘ ಕಾಲ ನಮ್ಮನ್ನು ಆಳಿದ ರಾಜಕಾರಣಿಗಳು ಒತ್ತುವರಿ ಮತ್ತು ಬಗರ್ ಹುಕುಂ ಸಮಸ್ಯೆಗಳ ಬಗ್ಗೆ ಈಗ ತಿಳಿದುಕೊಂಡು, ಅವುಗಳ ಪರಿಹಾರಕ್ಕಾಗಿ ಚರ್ಚೆ ನಡೆಸುತ್ತಿದ್ದಾರೆ. ಅಂತಹ ಚರ್ಚೆಗಳಿಗೆ ಕೊನೆ, ಮೊದಲೇ ಇಲ್ಲ. ಆದರೆ ಅದರಿಂದ ಯಾವುದೇ ರೀತಿಯ ಪ್ರಯೋಜನ ಹಾಗೂ ಪರಿಹಾರವೂ ಇಲ್ಲ.

ಆದರೆ ಈ ಬಾರಿ ಎ.ಎಸ್.ಪೊನ್ನಣ್ಣ ಮತ್ತು ಡಾ.ಮಂತರ್‌ಗೌಡರಂತಹ ಯುವ ಹಾಗೂ ಉತ್ಸಾಹಿ ಶಾಸಕರು, ಅನುಭವಶಾಲಿ ಶಾಸಕ ಎ.ಮಂಜು ಅವರೊಂದಿಗೆ ಕೈಜೋಡಿಸಿ ಸಾಂಪ್ರದಾಯಿಕ ರೀತಿ ಹೊರತಾಗಿ ಅಲೆಕ್ಸಾಂಡರ್ ಗ್ರೇಟ್ ಮಾದರಿಯಲ್ಲಿ ಈ ಸಂಕೀರ್ಣ ಸಮಸ್ಯೆಯನ್ನು ಬಗೆಹರಿಸುತ್ತಾರೆ ಎಂದು ಆಶಿಸುತ್ತೇನೆ.

ಗ್ರೇಟ್ ಅಲೆಕ್ಸಾಂಡರ್ ಸ್ಫೂರ್ತಿಯೊಂದಿಗೆ ಈ ಮೂವರು ಶಾಸಕರು ಕರ್ನಾಟಕ ರೈತರ ಈ ಸುದೀರ್ಘ ಕಾಲದ ಸಮಸ್ಯೆಗೆ ಒಮ್ಮೆಗೆ ಪರಿಹಾರ ಕಲ್ಪಿಸುವ ದಿನವನ್ನು ನಾನು ಎದುರು ನೋಡುತ್ತಿದ್ದೇನೆ.

ಲೋಕಸಭೆಗೆ ನನ್ನ ಸ್ಪರ್ಧೆ ಖಚಿತ
ಕ್ಷೇತ್ರ ಮಂಡ್ಯನಾ...: ಸುಮಲತಾ ನಗುವೇ ಉತ್ತರ

ಮಂಡ್ಯ,ಫೆ.23– ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ನನ್ನ ಸ್ಪರ್ಧೆ ಖಚಿತ ಎಂದು ಸ್ಪಷ್ಟಪಡಿಸಿರುವ ಮಂಡ್ಯ ಸಂಸದೆ ಸುಮಲತಾ, ತಮ್ಮ ಸ್ಪರ್ಧೆ ಮಂಡ್ಯದಿಂದಲಾ...? ಪ್ರಶ್ನೆಗೆ ನಗುತ್ತಲೇ ಮುಂದೆ ಸಾಗಿದರು.

ನಗರದ ಜಿಲ್ಲಾ ಪಂಚಾಯತ್ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಡಿಎಸ್‌ಗೆ ಮಂಡ್ಯ ಕ್ಷೇತ್ರ ಕೊಡುವ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ, ಅಂತೆ–ಕಂತೆ ಮೊದಲಿನಿಂದಲೂ ಇದೆ ಅಧಿಕೃತ ನಿರ್ಧಾರ ಬರೋವರೆಗೂ ಕಾಯೋಣ. ನನಗೆ ವಿಶ್ವಾಸ ಇದ್ದು, ಮಂಡ್ಯ ಬಿಜೆಪಿಗೆ ಸಿಗಲಿದೆ ಎಂದರು.



ನಾನು ನನ್ನ ಟಿಕೆಟ್‌ಗಾಗಿ ಹೋರಾಟ ಮಾಡುತ್ತಿಲ್ಲ. ಏನಿದ್ದರೂ ನನ್ನ ಹೋರಾಟ ಮಂಡ್ಯಕ್ಕೋಸ್ಕರ ಮಾತ್ರ ಮಂಡ್ಯದಲ್ಲಿ ಬಿಜೆಪಿ ಸಂಘಟಿಸಲು ನನ್ನ ಹೋರಾಟವಿದೆ. ನನಗೆ ಟಿಕೆಟ್ ಪಡೆಯುವ ಉದ್ದೇಶ ಇದ್ದಿದ್ದರೆ ಎಲ್ಲಾದರೂ ಅವಕಾಶ ● 7ನೇ ಪುಟಕ್ಕೆ

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಲೋಕನಾಥ್ ನೇಮಕಾತಿ ಊರ್ಜಿತ
ಹೈಕೋರ್ಟ್ ದ್ವಿಸದಸ್ಯ ಪೀಠದ ತೀರ್ಪು

ಮೈಸೂರು, ಫೆ.23(ಬಿಎಲ್‌ಯು)– ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ನೇಮಕಾತಿಯನ್ನು ಮುಖ್ಯ ನ್ಯಾಯಮೂರ್ತಿ ದಿನೇಶ್‌ಕುಮಾರ್ ನೇತೃತ್ವದ ಹೈಕೋರ್ಟ್ ದ್ವಿಸದಸ್ಯ ಪೀಠ ಇಂದು ಊರ್ಜಿತಗೊಳಿಸಿದೆ. ಈ ಮೂಲಕ ಪ್ರೊ.ಲೋಕನಾಥ್ ಕುಲಪತಿಯಾಗಿ ಮುಂದುವರೆಯಲು ಎದುರಾಗಿದ್ದ ಎಲ್ಲಾ ಅಡೆತಡೆಗಳು ಸದ್ಯಕ್ಕೆ ದೂರವಾಗಿವೆ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಲೋಕನಾಥ್ ಅವರ ನೇಮಕಾತಿ ಅಕ್ರಮ ಎಂದು ಆರೋಪಿಸಿ ಕುಲಪತಿ ಸ್ಥಾನದ ಆಕಾಂಕ್ಷಿ ಪ್ರೊ.ಶರತ್ ಅನಂತಮೂರ್ತಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ನ್ಯಾಯಮೂರ್ತಿ ಎನ್.ಎಸ್.ಸಂಜಯ್‌ಗೌಡ ನೇತೃತ್ವದ ಏಕಸದಸ್ಯ ಪೀಠ ಪ್ರೊ.ಲೋಕನಾಥ್ ನೇಮಕಾತಿಗೆ ತಡೆಯಾಜ್ಞೆ ನೀಡಿತ್ತು. ● 7ನೇ ಪುಟಕ್ಕೆ


ಪ್ರೊ.ಲೋಕನಾಥ್

ಸುಪ್ರಿಂಕೋರ್ಟ್ ಮೊರೆ ಚಿಂತನೆ

"ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಪ್ರೊ.ಲೋಕನಾಥ್ ನೇಮಕಾತಿಯನ್ನು ಹೈಕೋರ್ಟ್ ಊರ್ಜಿತಗೊಳಿಸಿ ತೀರ್ಪು ನೀಡಿದೆ. ಆದರೆ ಈ ತೀರ್ಪನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನೆ ಮಾಡುವ ಬಗ್ಗೆ ಚಿಂತನೆ ನಡೆಸಿದ್ದೇನೆ. ಈ ಪ್ರಕರಣದಲ್ಲಿ ನನಗೆ ಸದ್ಯಕ್ಕೆ ಹಿನ್ನಡೆಯಾಗಿದೆ.–ಪ್ರೊ.ಶರತ್ ಅನಂತಮೂರ್ತಿ

ಸಂಸದ ಪ್ರತಾಪ್ ಸಿಂಹ ಪ್ರಯತ್ನದ ಫಲ
ಮೈಸೂರು–ರಾಮೇಶ್ವರಂ ರೈಲಿಗೆ ಅನುಮೋದನೆ

ರಾಮೇಶ್ವರಂನಲ್ಲಿ ರೈಲ್ವೆ ಕಾಮಗಾರಿ ನಿಮಿತ್ತ ಸದ್ಯಕ್ಕೆ ಏಪ್ರಿಲ್ 1 ರಿಂದ ಮಾನಾ ಮಧುರೈವರೆಗೆ ಸದರಿ ರೈಲು ಸಂಚಾರ

ಮೈಸೂರು, ಫೆ. 23(ಬಿಎಲ್‌ಯು)– ಮೈಸೂರಿನಿಂದ ರಾಮೇಶ್ವರಂಗೆ ರೈಲು ಸಂಚಾರಕ್ಕೆ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರಕಿದ್ದು, ಈ ರೈಲು ಏಪ್ರಿಲ್ 1 ರಿಂದ ಸಂಚರಿಸಲಿದೆ ಎಂದು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ. ಇದರೊಂದಿಗೆ ಮೈಸೂರು ಜನರ ಬಹು ವರ್ಷಗಳ ಕನಸು ನನಸಾಗುತ್ತಿದೆ.




ಈ ಕುರಿತು "ಚುಕು ಬುಕು ಚುಕು ಬುಕು ರೈಲೇ... ಮೈಸೂರಿನಿಂದ ರಾಮೇಶ್ವರಂಗೆ ಹೋಗೋಣ ರೆಡಿಯಾಗಿ" ಶೀರ್ಷಿಕೆಯಡಿ ಸಾಮಾಜಿಕ ಜಾಲತಾಣದಲ್ಲಿ ರೈಲ್ವೆ ವೇಳಾಪಟ್ಟಿಯೊಂದಿಗೆ ಸಂಸದ ಪ್ರತಾಪ್ ಸಿಂಹ ಪೋಸ್ಟ್ ಮಾಡಿದ್ದಾರೆ.

ಸದ್ಯ ರೈಲ್ವೆ ವೇಳಾಪಟ್ಟಿಯಂತೆ ಈ ರೈಲು ಏಪ್ರಿಲ್ 1 ರಿಂದ ಜುಲೈ 23ರವರೆಗೆ ಸಂಚರಿಸಲಿದೆ. ಸೋಮವಾರ ಸಂಜೆ 6.35ಕ್ಕೆ ಮೈಸೂರಿನಿಂದ ಹೊರಟು ರೈಲು ಜೋಲಾರ್ ಪೇಟೈ, ತಿರುಪತೂರ್, ಸೇಲಂ, ನಾಮಾಕಲ್, ಕರೂರ್, ತಿರುಚ್ಚಿರಾಪಲ್ಲಿ, ದಿಂಡಿಗಲ್, ಮಧುರೈ ಮೂಲಕ ಮಂಗಳವಾರ ಬೆಳಿಗ್ಗೆ 9.10ಕ್ಕೆ ಮಾನಾಮಧುರೈ ತಲುಪಲಿದ್ದು, ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಮಾನಾ ಮಧುರೈಯಿಂದ ಇದೇ ಮಾರ್ಗವಾಗಿ ಮೈಸೂರಿಗೆ ರೈಲು ಹೊರಡುತ್ತದೆ. ಒಟ್ಟಾರೆ ಈ ರೈಲು ಮೈಸೂರು ಮತ್ತು ಮಾನ ಮಧುರೈ ನಡುವೆ ತಲಾ 17 ಟ್ರಿಪ್‌ಗಳು ಸಂಚರಿಸುತ್ತದೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಸಂಸದ ಪ್ರತಾಪ್ ಸಿಂಹ, ರಾಮೇಶ್ವರಂ ರೈಲು ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ನಡೆಯುತ್ತಿರುವುದರಿಂದ ಸದ್ಯಕ್ಕೆ ಈ ರೈಲು ಮಾನಾಮಧುರೈವರೆಗೆ ಸಂಚರಿಸುತ್ತದೆ. ರಾಮೇಶ್ವರಂ ರೈಲು ನಿಲ್ದಾಣದ ಕಾಮಗಾರಿ ಮುಗಿದ ನಂತರ ಈ ರೈಲು ರಾಮೇಶ್ವರಂವರೆಗೂ ಸಂಚರಿಸುತ್ತದೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಆರೋಗ್ಯ ಸಮಸ್ಯೆ: ಅಧಿವೇಶನ ಒಂದು ದಿನ ವಿಸ್ತರಣೆ
ಸೋಮವಾರ ಮುಖ್ಯಮಂತ್ರಿಗಳಿಂದ ಬಜೆಟ್ ಮೇಲಿನ ಚರ್ಚೆಗೆ ಉತ್ತರ



ಬೆಂಗಳೂರು, ಫೆ.23(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆರೋಗ್ಯ ಸಮಸ್ಯೆಯಿಂದ ವಿಧಾನ ಮಂಡಲದ ಇಂದಿನ ಪ್ರಮುಖ ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಗಿದೆ. ವಿಧಾನಮಂಡಲದ ಅಧಿಕೃತ ಕಾರ್ಯಕ್ರಮಗಳ ಪ್ರಕಾರ ಮುಖ್ಯಮಂತ್ರಿ ಅವರಿಂದು ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿ 2024–25ನೇ ಸಾಲಿನ ಮುಂಗಡ ಪತ್ರಕ್ಕೆ ಅನುಮೋದನೆ ಪಡೆದ ನಂತರ ಸದನಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಬೇಕಿತ್ತು. ಮುಖ್ಯಮಂತ್ರಿಗಳಿಗೆ ಆರೋಗ್ಯ ಸರಿಯಿಲ್ಲದ ಕಾರಣ ಅವರ ಸಚಿವಾಲಯ ಉಭಯ ಸದನಗಳ ಪೀಠಾಸೀನಾಧಿಕಾರಿಗಳಿಗೆ ಪತ್ರ ಬರೆದು, ಇಂದು ಮುಖ್ಯಮಂತ್ರಿ ಅವರಿಂದ ಸದನಕ್ಕೆ ಉತ್ತರ ನೀಡಲು ಸಾಧ್ಯವಿಲ್ಲ, ಸೋಮವಾರಕ್ಕೆ ಮುಂದೂಡಿ, ಅಂದು ಬಜೆಟ್ ಅನುಮೋದನೆಗೆ ಅವಕಾಶ ನೀಡಬೇಕೆಂದು ಮನವಿ ಮಾಡಿತ್ತು. ಮನವಿ ಹಿನ್ನೆಲೆಯಲ್ಲಿ ಸಭಾಧ್ಯಕ್ಷರು ಸಣ್ಣ ಪುಟ್ಟ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ಮುಗಿಸಿ, ನಂತರ ಸದನದ ಕಲಾಪವನ್ನು ಸೋಮವಾರಕ್ಕೆ ಮುಂದೂಡಿದರು. ಮುಖ್ಯಮಂತ್ರಿಗಳು, ಸೋಮವಾರ ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿ ಅನುಮೋದನೆ ಪಡೆದು, ನಂತರ ತಮ್ಮ ಪಕ್ಷದ ಶಾಸಕರ ಜೊತೆಗೂಡಿ ನಗರದ ಹೊರವಲಯದ ರೆಸಾರ್ಟ್‌ಗೆ ತೆರಳಲಿದ್ದಾರೆ.

ಮಂಗಳವಾರ ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ತಮ್ಮ ಪಕ್ಷದ ಮೂವರು ಅಭ್ಯರ್ಥಿಗಳ ಗೆಲುವಿಗೆ ರೆಸಾರ್ಟ್‌ನಲ್ಲಿ ತಮ್ಮ ಶಾಸಕರೊಂದಿಗೆ ಚರ್ಚೆ ನಡೆಸಿ, ಅಂದು ನೇರವಾಗಿ ಎಲ್ಲರೂ ಮತಗಟ್ಟೆಗೆ ಧಾವಿಸಿ, ಮತದಾನ ಮಾಡಲಿದ್ದಾರೆ.

ಮೈಸೂರು ಮಿತ್ರ

ಭಾಪಾ ಕಾಗದ ದರ ಪರಿಷ್ಕರಣೆಗೆ ಸಿಎಂ ಸಿದ್ದರಾಮಯ್ಯಗೆ ಮನವಿ



ಮೈಸೂರು, ಫೆ. 23– ಬಡವರ ಮೇಲೆ ಹೊರೆಯಾಗಿರುವ ಭಾಪಾ ಕಾಗದ (ಬಾಂಡ್ ಪೇಪರ್) ದರ ಹೆಚ್ಚಳ ಮಾಡಿದ್ದು, ಸರ್ಕಾರ ಕೂಡಲೇ ಹಿಂಪಡೆದು, ಹಳೆ ದರ ಮುಂದುವರೆಸುವಂತೆ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷರಾದ ಸಿ.ಎಸ್. ಚಂದ್ರಶೇಖರ್ ಮನವಿ ಮಾಡಿದ್ದಾರೆ.

ನಗರದ ಚಾಮುಂಡಿಪುರಂನಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ನಡೆದ ಗ್ರಾಹಕರ ಹಿತರಕ್ಷಣಾ ಸಭೆಯಲ್ಲಿ ಭಾಪಾ ಕಾಗದದ ಪರಿಷ್ಕೃತ ದರವನ್ನು ಹಿಂಪಡೆಯುವಂತೆ ಒತ್ತಾಯಿಸಲು ತೀರ್ಮಾನಿಸಲಾಯಿತು. ಬಳಿಕ ಮಾತನಾಡಿದ, ಸಿ.ಎಸ್.ಚಂದ್ರಶೇಖರ್ ರೈತರು, ಶಾಲಾ ಮಕ್ಕಳು, ಜನ ಸಾಮಾನ್ಯರು, ಕೂಲಿ ಕಾರ್ಮಿಕರು, ವ್ಯಾಪಾರಸ್ಥರು ಸೇರಿದಂತೆ ಎಲ್ಲರೂ ಕರಾರು ಪತ್ರ, ಕೋರ್ಟ್ ಅಫಿಡವಿಟ್, ಜಾತಿ ಪ್ರಮಾಣ ಪತ್ರ, ಸಣ್ಣ ಹಿಡುವಳಿದಾರರ ಪ್ರಮಾಣ ಪತ್ರ ಹೀಗೆ ಹಲವು ಕೆಲಸಗಳಿಗೆ 20, 50, 100 ರೂಪಾಯಿ ದರದಲ್ಲಿ ಭಾಪಾ ಕಾಗದ ಪತ್ರ (ಬಾಂಡ್ ಪೇಪರ್) ಸಿಗುತ್ತಿದ್ದವು. ಬಡವರಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಈಗ ಹೆಚ್ಚಳ ಮಾಡಿರುವ ನೂತನ ದರ 100, 500 ರೂ. ಜನಸಾಮಾನ್ಯರಿಗೆ ಹೊರೆಯಾಗಿದೆ. ಹಳೆಯ ದರ ಪದ್ಧತಿಯನ್ನು ಮುಂದುವರೆಸಬೇಕು ಎಂದು ಗ್ರಾಹಕರ ಹಿತ ದೃಷ್ಟಿಯಿಂದ ಸರ್ಕಾರಕ್ಕೆ ಮನವಿ ಮಾಡಲಾಯಿತು.

ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಸಂಚಾಲಕರಾದ ದಂಯಾನಂದ್, ಅಪೂರ್ವ ಸುರೇಶ್ ,ಅಜಯ್ ಶಾಸ್ತ್ರಿ, ಸತೀಶ್, ಮೈಲಾ ವಿಜಯ್ ಕುಮಾರ್, ನಂಜುಂಡ, ಸರ್ವಮಂಗಳ, ಭಾಗ್ಯಶ್ರೀ ಇನ್ನಿತರರು ಸಭೆಯಲ್ಲಿ ಭಾಗವಹಿಸಿದ್ದರು.

ಫೆ.28ರಂದು ರಕ್ತದಾನ ಶಿಬಿರ

ಮೈಸೂರು, ಫೆ. 23– ಮೈಸೂರಿನ ಐರಿಸ್ ಗ್ಲೋಬಲ್ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್, ಲಯನ್ಸ್ ರಕ್ತಧಾನ ಕೇಂದ್ರ ಜೀವಧಾರ ಸಂಸ್ಥೆ ಸಹಯೋಗದಲ್ಲಿ ಫೆ. 28 ರಂದು ಬೆಳಗ್ಗೆ 10ರಿಂದ ಸಂಜೆ 4 ರವರೆಗೆ ಹೆಬ್ಬಾಳಿನಲ್ಲಿರುವ ಸಿಲ್ವರ್ ಸ್ಪಿರಿಟ್ ಟೆಕ್‌ಪಾರ್ಕ್ ಐರಿಸ್ ಗ್ಲೋಬಲ್ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಸ್ವಯಂ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಆರ್. ನಕುಲ್, ಮೊ.9945356082, ಸುರೇಶ್ 9902579444 ಸಂಪರ್ಕಿಸಬಹುದು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್‌ನಿಂದ ವೈದ್ಯಕೀಯ ಉಪಕರಣಗಳ ಹಸ್ತಾಂತರ



ಮೈಸೂರು, ಫೆ.23– ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಚಾರಿಟಬಲ್ ಫೌಂಡೇಷನ್, ಬೆಂಗಳೂರು ವತಿಯಿಂದ ಶುಕ್ರವಾರ ನಗರದ ಕೆ.ಆರ್.ಆಸ್ಪತ್ರೆಗೆ ಸುಮಾರು 15 ಲಕ್ಷ ರೂ. ಮೌಲ್ಯದ ವೈದ್ಯಕೀಯ ಉಪಕರಣಗಳು, ವಿದ್ಯುತ್‌ಚಾಲಿತ ಇ–ವಾಹನ ಮತ್ತು ಶುದ್ಧ ಕುಡಿಯುವ ನೀರಿನ ಘಟಕ (ಆರ್.ಓ.ಪ್ಲಾಂಟ್) ಗಳನ್ನು ಹಸ್ತಾಂತರಿಸಲಾಯಿತು.

ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಉಪಾಧ್ಯಕ್ಷರಾದ ಮೊಯಿದ್ದೀನ್ ವೈದ್ಯಕೀಯ ಉಪಕರಣಗಳನ್ನು ಹಸ್ತಾಂತರಿಸಿ ಮಾತನಾಡಿ, ಕೆ.ಆರ್. ಆಸ್ಪತ್ರೆ ಮೈಸೂರಿನಲ್ಲಿ ಹಳೆಯ ಆಸ್ಪತ್ರೆಗಳಲ್ಲಿ ಒಂದಾಗಿದ್ದು, ಇಲ್ಲಿಗೆ ದಿನನಿತ್ಯ ಬರುವ ಸಾವಿರಾರು ರೋಗಿಗಳಿಗೆ ತುಂಬಾ ಅವಶ್ಯಕತೆ ಇರುವ ಈ ಉಪಕರಣಗಳನ್ನು ಹಸ್ತಾಂತರಿಸಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಇದನ್ನು ರೋಗಿಗಳು ವ್ಯವಸ್ಥಿತ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳಬೇಕೆಂದು ಆಶಿಸಿದರು. ಮೈಸೂರು ಮೆಡಿಕಲ್ ಕಾಲೇಜು ಹಾಗೂ ರಿಸರ್ಚ್ ಇನ್ಸ್‌ಟಿಟ್ಯೂಟ್‌ನ ಡೀನ್ ಅಂಡ್ ಡೈರೆಕ್ಟರ್ ಡಾ.ದಾಕ್ಷಾಯಿಣಿ ಅಧ್ಯಕ್ಷತೆ ವಹಿಸಿ, ಮಾತನಾಡಿ, ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಕಂಪನಿಯವರು ನಮಗೆ ಈ ಕೊಡುಗೆ ನೀಡಿ, ಸಮಾಜ ಸೇವೆ ಮಾಡುತ್ತಿರುವುದು ನಿಜಕ್ಕೂ ಅವಿಸ್ಮರಣೀಯ. ಇದರ ಅವಶ್ಯಕತೆ ನಮಗೆ ಬಹಳ ದಿನಗಳಿಂದ ಇತ್ತು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಆಪರೇಷನ್ ವಿಭಾಗದ ಉಪಾಧ್ಯಕ್ಷ ವಿ.ರಮೇಶ್, ಡಿಜಿಎಂ ಇಹೆಚ್‌ಎಸ್ ಮಹಾಂತೇಶ್ ಬಂಗಾರಿ, ಮಾನವ ಸಂಪನ್ಮೂಲ ವಿಭಾಗದ ಹಿರಿಯ ವ್ಯವಸ್ಥಾಪಕರಾದ ಮಲ್ಲಿಕಾರ್ಜುನ ಎಸ್.ವಿ., ಮೈಸೂರಿನ ಶಾಖೆಯ ಸೀನಿಯರ್ ಹೆಚ್‌ಆರ್ ಮ್ಯಾನೇಜರ್ ಶಂಕರ್, ಸಿಬ್ಬಂದಿ ಕೆ.ಎನ್.ಭಾಸ್ಕರ್, ಜನರಲ್ ಮ್ಯಾನೇಜರ್ ಸಿದ್ದೇಶ್ವರಗೌಡ, ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಶೋಭಾ ಕೆ.ಆರ್. ಆಸ್ಪತ್ರೆಯ ಆರ್‌ಎಂಓ ಡಾ.ನಯಾಜ್ ಪಾಷಾ ಮತ್ತಿತರರು ಉಪಸ್ಥಿತರಿದ್ದರು.

ಸಮಾಜ ರಕ್ಷಣಾ ಸೇನೆ ರಾಜ್ಯಾಧ್ಯಕ್ಷರಾಗಿ ಕೆ.ಎಚ್.ಹನುಮಂತರಾಜು ಆಯ್ಕೆ




ಮೈಸೂರು, ಫೆ. 23–ಸಮಾಜ ರಕ್ಷಣಾ ಸೇನೆ ರಾಜ್ಯ ಅಧ್ಯಕ್ಷರಾಗಿ ಕೆ.ಎಚ್. ಹನುಮಂತರಾಜು ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಸಮಾಜ ರಕ್ಷಣಾ ಸೇನೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದ ಆನಂದ್ ಎಂ. ಕಲ್ಕಿ ಅವರು ವೈಯಕ್ತಿಕ ಕಾರಣಗಳಿಂದ ಸಂಘದ ರಾಜ್ಯಾಧ್ಯಕ್ಷರ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಈ ತೆರವಾದ ರಾಜ್ಯ ಅಧ್ಯಕ್ಷರ ಸ್ಥಾನಕ್ಕೆ ಸರ್ವಾನು ಮತದಿಂದ ನೂತನವಾಗಿ ಕೆ.ಎಚ್. ಹನುಮಂತರಾಜು ಅವರನ್ನು ಆಯ್ಕೆ ಮಾಡಲಾಗಿದೆ.

ಇದೇ ಸಂದರ್ಭದಲ್ಲಿ ನವೀನ್ ಸಿ.ಆರ್. ಗೌಡ, ರಾಜ್ಯ ಸಂಘಟನಾ ಕಾರ್ಯದರ್ಶಿ, ಭರತ್ ಕುಮಾರ್ ಕಾನೂನು ಸಲಹೆಗಾರರು, ಎನ್.ಟಿ. ಜವರೇಗೌಡ, ಹೆಚ್ ಡಿ ಕೋಟೆ ತಾಲೂಕು ಅಧ್ಯಕ್ಷ ಆರ್. ಸುರೇಶ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ಎಂ. ಪ್ರದೀಪ್, ಕೆಆರ್ ಕ್ಷೇತ್ರದ ವೈಕುಂಠ ನಾಯಕ, ಸರಗೂರು ತಾಲೂಕು ಘಟಕದ ಅಧ್ಯಕ್ಷ ಅಂಬರೀಶ್, ನರಸೀಪುರ ತಾಲೂಕು ಘಟಕದ ಅಧ್ಯಕ್ಷ ಸುಂದರ್, ರಾಜ್ಯ ನಿರ್ದೇಶಕರಾದ ಜಗದೀಶ್, ಗೋಪಾಲ್, ರಾಜ್ಯ ಕಾನೂನು ಸಲಹೆಗಾರರು, ನಾಗೇಂದ್ರ, ಹರ್ಷ ಗೌಡ, ಸಂಜು ಮತ್ತಿತರರು ಹಾಜರಿದ್ದರು.


ನಿಧನ



ಜಿ.ವಿ.ರಾಜು

ಮೈಸೂರು, ಫೆ. 23– ಮೈಸೂರಿನ ಹೆಬ್ಬಾಳು 2ನೇ ಹಂತದ ನಿವಾಸಿ ಹಾಗೂ ನಿವೃತ್ತ ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಜಿ.ವಿ. ರಾಜು (70) ಗುರುವಾರ ನಿಧನರಾದರು. ಮೃತರು ಪತ್ನಿ ಕೆ. ಶಾರದಾ, ಪುತ್ರರಾದ ಜಿ.ಆರ್. ಪ್ರದೀಪ್ ಮತ್ತು ಜಿ.ಆರ್. ಸಂದೀಪ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುಂಡ್ಲುಪೇಟೆಯಲ್ಲಿ ನಾಳೆ (ಫೆ.24) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಾಸೇಗೌಡ



ಮೈಸೂರು, ಫೆ. 23– ಮೈಸೂರು ತಾಲೂಕು ಪಾಲಹಳ್ಳಿ ಗ್ರಾಮದ ನಿವಾಸಿ ದಾಸೇಗೌಡ (90) ಗುರುವಾರ ನಿಧನರಾದರು. ಮೃತರು ಪತ್ನಿ ಶಂಕರಮ್ಮ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಾಲಹಳ್ಳಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಕಾರ್ಯಾಗಾರ

ವ್ಯಾಸಂಗ ವೇಳೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವುದು ಉತ್ತಮ

- ಅಕ್ಕ ಐಎಎಸ್ ಅಕಾಡೆಮಿ ಸಂಸ್ಥಾಪಕ ಡಾ। ಶಿವಕುಮಾರ್ ಅಭಿಮತ
- ಓದುವ ಅವಕಾಶ ಸಮಯ ವ್ಯರ್ಥ ಮಾಡಿಕೊಳ್ಳದಂತೆ ಕಿವಿಮಾತು

ಮೈಸೂರು,ಫೆ.23(ಎಂಟಿವೈ)– ಪದವಿ ಶಿಕ್ಷಣ ಪಡೆಯುವ ಹಂತದಲ್ಲಿಯೇ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳಲಾರಂಭಿಸಿದರೆ, ಸುಲಭವಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸುಗಳಿಸಬಹುದು ಎಂದು ಅಕ್ಕ ಐಎಎಸ್ ಅಕಾಡೆಮಿಯ ಸಂಸ್ಥಾಪಕ ಡಾ. ಶಿವಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಇತಿಹಾಸ ವಿಭಾಗ, ಎಂಟ್ರಿಟು ಸರ್ವಿಸ್, ಐಕ್ಯೂಎಸಿ ಹಾಗೂ ಅಕ್ಕ ಐಎಎಸ್ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ 'ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲುಗಳು ಮತ್ತು ಅವಕಾಶಗಳು' ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕೆಂದು ಉದ್ದೇಶಿಸಿರುವ ವಿದ್ಯಾರ್ಥಿಗಳು ಪೂರ್ವ ತಯಾರಿಯೊಂದಿಗೆ ನಿರ್ದಿಷ್ಟ ಮನೋ ಭಾವ, ದೃಢಸಂಕಲ್ಪ, ಸಮಯ ಪ್ರಜ್ಞೆ ಹಾಗೂ ಕಠಿಣ ಪರಿಶ್ರಮ ಪಡಬೇಕು. ಪದವಿ ಕಾಲೇಜುಗಳಲ್ಲಿ ಶಿಕ್ಷಣ ಪಡೆದು ಪರೀಕ್ಷೆ ಬರೆಯುವುದಕ್ಕೂ, ಸ್ಪರ್ಧಾತ್ಮಕ ಪರೀಕ್ಷೆ ಬರೆಯುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಶುಕ್ರವಾರ ಆಯೋಜಿಸಿದ್ದ 'ಸ್ಪರ್ಧಾತ್ಮಕ ಪರೀಕ್ಷೆಗಳ ಸವಾಲುಗಳು ಮತ್ತು ಅವಕಾಶಗಳು' ಕುರಿತ ಒಂದು ದಿನದ ಕಾರ್ಯಾಗಾರವನ್ನು ಅಕ್ಕ ಐಎಎಸ್ ಅಕಾಡೆಮಿಯ ಸಂಸ್ಥಾಪಕ ಡಾ.ಶಿವಕುಮಾರ್ ಉದ್ಘಾಟಿಸಿದರು.

ಕಾಲೇಜಿನಲ್ಲಿ ಪರೀಕ್ಷೆ ಬರೆದು, ಉತ್ತೀರ್ಣರಾಗಿ ಅಂಕಪಟ್ಟಿ ಪಡೆದುಕೊಳ್ಳಬಹುದು. ಆದರೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಂಕಪಟ್ಟಿ ಸಿಗುವುದಿಲ್ಲ. ಉತ್ತೀರ್ಣರಾದರೆ ಸರ್ಕಾರಿ ಉದ್ಯೋಗ ಸಿಗುತ್ತದೆ. ಅನುತ್ತೀರ್ಣರಾದರೆ ಮತ್ತೊಮ್ಮೆ ಪರೀಕ್ಷೆ ಬರೆಯಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಸ್ಪಷ್ಟತೆ ಇರಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಪದವಿ ಶಿಕ್ಷಣ ಪಡೆಯುತ್ತಿರುವಾಗಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳಬೇಕು. ದಿನದ 24 ಗಂಟೆಗಳಲ್ಲಿ ಕನಿಷ್ಠ 3 ಗಂಟೆಗಳಾದರೂ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಅಭ್ಯಾಸ ಮಾಡಬೇಕು. ಅದಕ್ಕಾಗಿ ದಿನಚರಿ ರೂಪಿಸಿಕೊಂಡು ಅಧ್ಯಯನ ಮಾಡಬೇಕು. ವಿದ್ಯಾರ್ಥಿದೆಸೆಯಲ್ಲಿದ್ದಾಗ ಮಾತ್ರ ಓದಲು ಸಾಧ್ಯ. 15 ರಿಂದ 25 ವರ್ಷದವರೆಗೆ ಓದುವ ಆಸಕ್ತಿ ಕ್ಷಿಪ್ರವಾಗಿರುತ್ತದೆ. ಆ ವಯಸ್ಸಿನಲ್ಲಿ ನಾವು ಶ್ರಮವಹಿಸಿದ್ದಲ್ಲಿ ಮಾತ್ರ ಮುಂದಿನ 50–60 ವರ್ಷಗಳು ನೆಮ್ಮದಿಯ ಜೀವನವನ್ನು ಸಾಗಿಸಬಹುದು. ಆದ್ದರಿಂದ ಓದುವ ಅವಕಾಶ ಮತ್ತು ಸಮಯ ಎರಡನ್ನು ವ್ಯರ್ಥ ಮಾಡಬಾರದು. ನಮಗಿರುವ ಸಾಮರ್ಥ್ಯದ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು. ನಮ್ಮ ಸಾಮರ್ಥ್ಯದ ಬಗ್ಗೆ ನಮಗೆ ಸಂಪೂರ್ಣ ನಂಬಿಕೆ ಇರಬೇಕು. ಆಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಶೈಕ್ಷಣಿಕ ಸಲಹೆಗಾರರಾದ ಡಾ.ಎಸ್.ಆರ್.ರಮೇಶ್, ಇತಿಹಾಸ ವಿಭಾಗದ ಮುಖ್ಯಸ್ಥರೂ ಆದ ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಐಕ್ಯೂಎಸಿ ಸಂಚಾಲಕರಾದ ಗೀತಾ ಡಿ, ಸಂಪನ್ಮೂಲ ವ್ಯಕ್ತಿಗಳಾದ ಮುನಿರಾಜು ಎಂ., ಕನ್ನಡ ವಿಭಾಗದ ಮುಖ್ಯಸ್ಥ ಡಾ. ಹೆಚ್.ಆರ್.ತಿಮ್ಮೇಗೌಡ, ಇತಿಹಾಸ ಸಹಾಯಕ ಪ್ರಾಧ್ಯಾಪಕರಾದ ನಂದೀಶ ಎ.ಆರ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.2.2024 ಶನಿವಾರ, ಮಳೆ ನಕ್ಷತ್ರ: ಶತಭಿಷ 20.2.2024 ರಿಂದ 03.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮ ಸಂಸ್ಥೆ ಟ್ರಸ್ಟ್ :** 77ನೇ ಜಾತ್ರಾ ಮಹೋತ್ಸವ, ಬೆಳಗ್ಗೆ ಗಣಪತಿ, ನವಗ್ರಹ, ಶ್ರೀ ಪರಶುರಾಮ, ಶ್ರೀ ದೇವಿಯರಿಗೆ ಪಂಚಾಮೃತಾಭಿಷೇಕ, ನೂತನ ವಸ್ತ್ರಾಲಂಕಾರ, ಶ್ರೀ ಗಣಪತಿಗೆ ನವನೀತಲಂಕಾರ, ಅಷ್ಟೋತ್ತರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಅನ್ನ ಸಂತರ್ಪಣೆ, ಸಂಜೆ 6ಕ್ಕೆ ಶ್ರೀದೇವಿಯವರ ಉತ್ಸವ, ರಾತ್ರಿ 8.30ಕ್ಕೆ ಉಯ್ಯಾಲೋತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ದೇವಸ್ಥಾನ, ಮಂಡಿ ಮೊಹಲ್ಲಾ.

■ **ಶಾರದಾ ವಿಲಾಸ ಕಾಲೇಜು :** ನ್ಯೂರೋ ಡಿಜನರೇಟಿವ್ ಡಿಸಾರ್ಡರ್ಸ್ ಮತ್ತು ಇನ್‌ಫ್ಲಮೇಷನ್ ಕುರಿತು ಅಂತಾರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಪ್ರಾಸ್ತಾವಿಕ ಭಾಷಣ : ಪ್ರೊ. ಕೆ. ಸಂದೀಪ್ ಪ್ರಭು, ಗೌರವ ಅತಿಥಿಗಳು : ಎಸ್‌ವಿಇಐ ಕಾರ್ಯದರ್ಶಿ ಎನ್. ಚಂದ್ರಶೇಖರ, ವಿಶ್ರಾಂತ ಕುಲಪತಿ ಡಾ. ಟಿ.ಕೆ. ಉಮೇಶ್, ಅಧ್ಯಕ್ಷತೆ : ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಸ್ಥಳ: ವೆಂಕಟಕೃಷ್ಣಯ್ಯ ಸಭಾಂಗಣ, ಬೆಳಗ್ಗೆ 9ಕ್ಕೆ.

■ **ಜಂಬೋ ಕಿಡ್ಸ್ :** ಸಂಚಾರ ಸುರಕ್ಷತೆಯ ಅಂಗವಾಗಿ ವಾಕಥಾನ್, ಸ್ಥಳ: ರಾಮಕೃಷ್ಣನಗರ ವೃತ್ತ, ಬೆಳಗ್ಗೆ 9.30 ರಿಂದ.

■ **ಶ್ರೀ ಕೃಷ್ಣ ಗಾನಸಭಾ :** ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ, ಗೋಷ್ಠಿ ಗಾಯನ, ಸಂಗೀತ ಕಛೇರಿ, ವಿದುಷಿ ಮೇದಾ ಮಂಜುನಾಥ್–ಗಾಯನ, ವಿದುಷಿ ಸಿ.ವಿ. ಶ್ರುತಿ–ವಯೋಲಿನ್, ವಿದ್ವಾನ್ ಎಂ.ಎಸ್. ಜಯರಾಮ–ಮೃದಂಗ, ವಿದ್ವಾನ್ ಎಂ.ಜೆ. ಕಿರಣ್‌ಕುಮಾರ್–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಗೋಕುಲಂ 3ನೇ ಹಂತ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಚಾಮರಾಜ ಕ್ಷೇತ್ರ ಜೆಡಿಎಸ್ :** ಲೋಕಸಭಾ ಚುನಾವಣೆ, ಮಹಾನಗರ ಪಾಲಿಕೆ ಚುನಾವಣೆ ಹಿನ್ನೆಲೆಯಲ್ಲಿ ವಿಶೇಷ ಸಭೆ, ಅಧ್ಯಕ್ಷತೆ : ಚಾಮರಾಜ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಪಿ. ಮಂಜುನಾಥ್, ಉಪಸ್ಥಿತರು : ನಗರಾಧ್ಯಕ್ಷ ಕೆ.ಟಿ. ಚಲುವೇಗೌಡ, ಹೆಚ್.ಕೆ. ರಮೇಶ್, ಕೆ. ಉಮಾಶಂಕರ್, ಮಾಜಿ ಮೇಯರ್ ಶ್ರೀಮತಿ ರಾಜೇಶ್ವರಿ ಸೋಮು, ಆರ್. ಲಿಂಗಪ್ಪ, ಎಂ.ಜೆ. ರವಿಕುಮಾರ್, ಸ್ಥಳ: ಜೆಡಿಎಸ್ ಕಚೇರಿ ಆವರಣ, ಶೇಷಾದ್ರಿ ಅಯ್ಯರ್ ರಸ್ತೆ, ಬೆಳಗ್ಗೆ 10ಕ್ಕೆ.

■ **ಕರುನಾಡ ರಕ್ಷಣಾ ವೇದಿಕೆ, ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನ, ಬೆಟರ್‌ಲೈಫ್ ಚಾರಿಟೆಬಲ್ ಟ್ರಸ್ಟ್ :** ಮತ ಜಾಗೃತಿ ಕಾರ್ಯಕ್ರಮ, ಉಪಸ್ಥಿತರು : ಶಾಸಕ ಟಿ.ಎಸ್ ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ಮಾಜಿ ಉಪ ಮೇಯರ್ ಶ್ರೀಮತಿ ರೂಪ ಯೋಗೇಶ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮಾಜಿ ಮೇಯರ್ ನಾರಾಯಣ, ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಡಾ.ಎನ್. ಕೃಷ್ಣೇಗೌಡ, ಚಾಲನೆ : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಸ್ಥಳ: ತಲಕಾಡು ರಾಮಚಂದ್ರರಾವ್ ಪಾರ್ಕ್, ಚಾಮುಂಡಿಪುರಂ ಸರ್ಕಲ್, ಬೆಳಗ್ಗೆ 10ಕ್ಕೆ.

■ **ತಾರಾ ಪ್ರಕಾಶನ, ಶಫರ್ಡ್ ಇಂಡಿಯಾ ಇಂಟರ್‌ನ್ಯಾಷನಲ್ :**ಡಾ. ಎನ್. ವಾಸಯ್ಯ ಅವರಹಳ್ಳಿ ಹಕ್ಕಿ ಅಡಗೂರು ವಿಶ್ವನಾಥ್ ಅವರ ಸಾಹಿತ್ಯ ಮತ್ತು ರಾಜಕಾರಣ ಕೃತಿ ಬಿಡುಗಡೆ ಸಮಾರಂಭ, ಪುಸ್ತಕ ಲೋಕಾರ್ಪಣೆ : ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯ್ಲಿ, ಅಧ್ಯಕ್ಷತೆ : ಪ್ರಗತಿಪರ ಚಿಂತಕ ಬಂಜಗೆರೆ ಜಯಪ್ರಕಾಶ್, ಪುಸ್ತಕ ಕುರಿತು ಮಾತನಾಡುವವರು : ಸಾಹಿತಿ ಶ್ರೀಮತಿ ಶುಭದಾ ಪ್ರಸಾದ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಬಿ.ಎಂ. ಹನೀಫ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ವಿಧಾನ ಪರಿಷತ್ ಸದಸ್ಯ ಅಡಗೂರು ವಿಶ್ವನಾಥ್, ವಿಮರ್ಶಕ ಡಾ. ಎನ್. ವಾಸಯ್ಯ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಭೈರವಿ ಗೌಡ್ತಿಯರ ಬಳಗ :** ಬಳಗದ ವಾರ್ಷಿಕೋತ್ಸವ ಸಮಾರಂಭ, ಸನ್ಮಾನಿತರು : ಮೈಸೂರು ವಿಶ್ವವಿದ್ಯಾಲಯದ ಕುಲಸಚಿವೆ ಶೈಲಜಾ, ಸೂಪರಿಂಟೆಂಡೆಂಟ್ ಆಫ್ ಸೆಂಟ್ರಲ್ ಟ್ಯಾಕ್ಸ್ ಲಕ್ಷ್ಮಿ ಪಿ ಗೌಡ, ರಾಜ್ಯಮಟ್ಟದ ಕ್ರೀಡಾಪಟು ಅನುಸೂಯ, ವಿಜಯ ರಾಮೇಗೌಡ, ಗ್ಯಾಲಕ್ಸಿ ಮೆಂಬರ್ ಎಲ್‌ಐಸಿ ಆಫ್ ಇಂಡಿಯಾ ಶೋಭಾ ಮಂಜುನಾಥ್, ಅಂತರಾಷ್ಟ್ರೀಯ ಯೋಗ ಪಟು ಕುಮಾರಿ ಖುಷಿ, ಸಾನಿಧ್ಯ : ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ ಹಾಗೂ ಆದಿಚುಂಚನಗಿರಿ ಶಾಖ ಮಠದ ಶ್ರೀ ಶ್ರೀ ಸೋಮೇಶ್ವರನಾಥ ಮಹಾಸ್ವಾಮೀಜಿ, ಅಧ್ಯಕ್ಷತೆ : ನಿಕಟಪೂರ್ವ ನಗರಪಾಲಿಕಾ ಸದಸ್ಯರಾದ ಪ್ರೇಮಾ ಶಂಕರೇಗೌಡ, ಮುಖ್ಯ ಅತಿಥಿಗಳು: ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿ ಶಿಲ್ಪಾನಾಗ್, ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷೆ ಲಲಿತಾ ಜಿ.ಟಿ.ದೇವೇಗೌಡ, ಖ್ಯಾತ ವೈದ್ಯರಾದ ಡಾ. ಅರ್ಪಿತಾ ಪ್ರತಾಪ್ ಸಿಂಹ, ಸಮಾಜ ಸೇವಕರಾದ ಅನಿತಾ ಸಾರಾ ಮಹೇಶ್, ಗೌರಿ ಹರೀಶ್ ಗೌಡ, ಸ್ಥಳ: ಲಕ್ಷ್ಮಿಕಾಂತ್ ದೇವಸ್ಥಾನ, ಹೆಬ್ಬಾಳು, ಬೆಳಗ್ಗೆ 10.30ಕ್ಕೆ.

■ **ಮಾನಸ ಗಂಗೋತ್ರಿ ಶಾಲೆ ಹಿರಿಯ ವಿದ್ಯಾರ್ಥಿಗಳ ಸಂಘ :** ಉದ್ಘಾಟನಾ ಸಮಾರಂಭ, ಉಪಸ್ಥಿತರು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಶಾಸಕರಾದ ಕೆ. ಹರೀಶ್ ಗೌಡ, ಸಿ.ಎನ್. ಮಂಜೇಗೌಡ, ಪ್ರೊ. ಬಿ.ಕೆ. ಜಗದೀಶ, ಪ್ರೊ. ಆರ್. ರಂಗರಾಜನ್, ಸಿ.ಎ. ಚಂದ್ರೇಗೌಡ, ಶ್ರೀಮತಿ ಪಿ.ಆರ್. ಪದ್ಮ, ಶಾಲೆ ಉಪಾಧ್ಯಕ್ಷ ಹರೀಶ್ ಮೊಗಣ್ಣ, ಕಾರ್ಯದರ್ಶಿ ಎಂ. ರಮೇಶ್, ಅಧ್ಯಕ್ಷತೆ : ಶಾಲೆ ಅಧ್ಯಕ್ಷ ಕೆ.ಪಿ. ದಿವಾಕರ, ಸ್ಥಳ: ಮಾನಸಗಂಗೋತ್ರಿ ಶಿಕ್ಷಣ ಸಂಸ್ಥೆ ಆವರಣ, ಬೆಳಗ್ಗೆ 11ಕ್ಕೆ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ :** 33ನೇ ನಿರಂತರ ಕಳೆಮನೆ ಸಂಭ್ರಮ ಮತ್ತು ಶ್ರೀ ಪುರಂದರದಾಸ ಮತ್ತು ಶ್ರೀ ತ್ಯಾಗರಾಜ ಆರಾಧನಾ ಸಂಗೀತ ನೃತ್ಯ ಮಹೋತ್ಸವ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿಶೇಷ ಅತಿಥಿಗಳು : ವಿದ್ವಾನ್ ವಿ. ನಂಜುಂಡಸ್ವಾಮಿ, ಡಾ. ಸಿ.ಎ. ಶ್ರೀಧರ್, ಡಾ. ಸುಕನ್ಯಾ ಪ್ರಭಾಕರ್, ಡಾ. ಮಾಣಿಕ್ ಎ.ವಿ. ಬೆಂಗೇರಿ, ಸ್ಥಳ: #262, 1ನೇ ಕ್ರಾಸ್, ಎಂ.ಜಿ. ಕೊಪ್ಪಲು, ಹೆಬ್ಬಾಳು 2ನೇ ಹಂತ, ಮಧ್ಯಾಹ್ನ 2.30ಕ್ಕೆ.

■ **ಕರ್ನಾಟಕ ಸರ್ಕಾರ ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆ, ಮೈಸೂರು ಜಿಲ್ಲಾ ಪದವಿ ಪೂರ್ವ ಕಾಲೇಜು ಕನ್ನಡ ಉಪನ್ಯಾಸಕರ ವೇದಿಕೆ :** ಕವಿ ಡಾ.ಸಂತೋಷ್ ಚೊಕ್ಕಾಡಿ ಅವರ "ಅರ್ಥವಿದೆಯೆ ವಿದಾಯಕ್ಕೆ" ಕವನ ಸಂಕಲನ ಬಿಡುಗಡೆ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮ, ಕೃತಿ ಬಿಡುಗಡೆ : ಕವಿ, ವಿಮರ್ಶಕ, ಖ್ಯಾತ ಅಂಕಣಕಾರರಾದ ಬಾಲಸುಬ್ರಮಣ್ಯ ಕಂಜರ್ಪಣೆ, ಅಧ್ಯಕ್ಷತೆ : ಲೇಖಕ ವಿಕ್ರಂ ಚದುರಂಗ, ಕೃತಿ ಕುರಿತು ಮಾತನಾಡುವವರು : ಮಹಾರಾಜ ಕಾಲೇಜು ಕನ್ನಡ ಪ್ರಾಧ್ಯಾಪಕರಾದ ಡಾ. ವಿಜಯಲಕ್ಷ್ಮಿ, ಉಪಸ್ಥಿತರು : ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಯ ಕರೆಸ್ಪಾಂಡೆಂಟ್ ಎನ್.ಆರ್.ಮಂಜುನಾಥ್, ಕವಿ ಡಾ.ಸಂತೋಷ್ ಚೊಕ್ಕಾಡಿ, ಕನ್ನಡ ಉಪನ್ಯಾಸಕ ವೇದಿಕೆಯ ಅಧ್ಯಕ್ಷ ಡಾ.ನೀ.ಗೂ. ರಮೇಶ್, ಸ್ಥಳ: ಗೋಪಾಲಸ್ವಾಮಿ ಶಿಶು ಶಿಕ್ಷಣ ಸಂಸ್ಥೆಯ ಆವರಣ, ನಂಜುಮಳಿಗೆ ಹತ್ತಿರ, ಮ. 3.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ–ಪ್ರಾಯೋಜಿತ ಕಾರ್ಯಕ್ರಮ, 6.40 ಪದ ಸಂಸ್ಕೃತಿ–ಕನ್ನಡ ಪದಗಳ ಬಳಕೆ–ಕಲಿಕೆಯ ವಿಶಿಷ್ಟ ಬಾನುಲಿ ಸರಣಿ–ಡಾ. ಸಂಗಮೇಶ್ ಸವದತ್ತಿಮಠ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಆರ್. ರಮಾದೇವಿ, 10.00 ಎಲ್. ಅರ್ಚನಾ – ಹಾಡುಗಾರಿಕೆ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ–ಶೈಲಜಾ ಚಂದ್ರಶೇಖರ್, 3.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ– ಕೆ.ಬಿ. ಮೀನಾ, 4.00 ನಾಟಕ, 4.30 ನೆನಪಿನಂಗಳ–ವಾಲ್ಮೀಕಿ ರಾಮಾಯಣಕ್ಕೆ ತಿರುವು ಕೊಟ್ಟ ಪಾತ್ರ ಹನುಮಾನ್–ಪು.ತಿ. ನರಸಿಂಹಾಚಾರ್ ಮಾಡಿದ್ದ ಭಾಷಣ, ಪು.ರಿ.ನರಸಿಂಹಚಾರ್ ಅವರಿಂದ ಸ್ವರಚಿತ ಕವನ ವಾಚನ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ–ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರ್ ಉಮೇಶ್, ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.00 ಯುವವಾಣಿ, 9.30 "ಕವಿಯ ಕಾಳಜಿಯ ವಿಶ್ವ ಶಾಂತಿ" ಮಾತನಾಡು ತ್ತಾರೆ ಡಾ. ಒ.ಎಲ್.ನಾಗಭೂಷಣಸ್ವಾಮಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಸಿಕ್ಕಿಲ್ ಮಾಲಾ ಚಂದ್ರಶೇಖರ್–ವೇಣುವಾದನ, ಮೃಣಾಲ್ ಮೋಹನ್ ಉಪಾಧ್ಯಾಯ್ – ಪಖವಾಜ್

■ **ಕಲಾಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 816, ಕಥೆ ಹೇಳುವವರು: ರಂಗ ನಿರ್ದೇಶಕ ಅರಸೀಕೆರೆ ಯೋಗಾನಂದ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಸುಮಧ್ವ–ವಿಜಯ ಎಕ್ಸ್‌ಪ್ರೆಸ್, ಮಧ್ವ–ಪುರಂದರ ನಮನ, ಗಾನಸಿರಿ–ವೇದಾಂತ ಲಹರಿ, ಪಂಡಿತ್ ಪುರಂದರಾಚಾರ್ಯ ಹಯಗ್ರೀವ, ವಿದ್ವಾನ್ ರಾಯಚೂರು ಶೇಷಗಿರಿರಾವ್ ಅವರಿಂದ ಸುಮಧ್ವ ವಿಜಯ 13 ಮತ್ತು 14ನೇ ಸರ್ಗಗಳ ವಿಶ್ಲೇಷಣೆ ಹಾಗೂ ಗಾಯನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಭೋದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆ:** ಮೈಸೂರು ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ತ್ರಿನೇಶ್ವರಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆ ಅವಭೃತ ತೀರ್ಥ ಸ್ನಾನ, ರಾತ್ರಿ 7ಕ್ಕೆ ಪಲ್ಲಕ್ಕಿ ಉತ್ಸವ, ಧ್ವಜಾರೋಹಣ, ಮೂಕಬಲಿ ಪ್ರಧಾನ, ಸ್ಥಳ: ದೇವಸ್ಥಾನ, ಅರಮನೆ ಆವರಣ.

■ **ಕೆ.ಆರ್. ಯಲ್ಲಪ್ಪರಾಯರ ಶ್ರೀ ಯಲ್ಲಮ್ಮನವರ ದೇವಸ್ಥಾನ :** ಬೇವಿನ ಮರದ ಶ್ರೀ ಯಲ್ಲಮ್ಮನವರ 76ನೇ ವರ್ಷದ ಮಹೋತ್ಸವ, ವ್ಯಾಸ ಹುಣ್ಣಿಮೆ ದಿನದಂದು ಬೆಳಗ್ಗೆ ಪೂಜೆ, ಮಹಾಭಿಷೇಕ, ಮಧ್ಯಾಹ್ನ 1ಕ್ಕೆ ಮಹಾಮಂಗಳಾರತಿ, ಸಂಜೆ 7ಕ್ಕೆ ಶ್ರೀ ಯಲ್ಲಮ್ಮ ದೇವರ ಉತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ನಾಲಾ ಬೀದಿ, ಕೃಷ್ಣರಾಜ ಮೊಹಲ್ಲಾ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ :** ಆರನೇಯ ಘಟಿಕೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಘಟಿಕೋತ್ಸವ ಭಾಷಣ : ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ ಅಧ್ಯಕ್ಷ ಪ್ರೊ. ಟಿ.ಜಿ. ಸೀತಾರಾಮ್, ಉಪಸ್ಥಿತರು : ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ತಾಂತ್ರಿಕ ಶಿಕ್ಷಣ ವಿಭಾಗ ನಿರ್ದೇಶಕ ಡಾ. ಬಿ. ಸುರೇಶ್, ಸ್ವಾಗತ ಭಾಷಣ: ಕುಲಪತಿ ಪ್ರೊ. ಎ.ಎನ್. ಸಂತೋಷ್‌ಕುಮಾರ್, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ. ಪಿ. ನಂಜುಂಡಸ್ವಾಮಿ, ಕುಲಸಚಿವ ಪ್ರೊ. ಎಸ್.ಎ. ಧನರಾಜ್, ಸ್ಥಳ: ಜೆಎಸ್‌ಎಸ್ ವಿಶ್ವವಿದ್ಯಾನಿಲಯ ಆವರಣ, ಸಂಜೆ 4ಕ್ಕೆ

■ **ಶ್ರೀ ಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಮದ್ರಾಜಯೋಗಿ ಶ್ರೀ ಚಿಕ್ಕಲಿಂಗಣ್ಣಸ್ವಾಮಿಯವರ 87ನೇ ವರ್ಷದ ಆರಾಧನಾ ಮಹೋತ್ಸವ, ಪ್ರತಿನಿತ್ಯ ಸಂಜೆ 5.30 ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಭಜನೆ, ಡಾ. ಕೆ. ಅನಂತರಾಮು ಅವರಿಂದ ಶ್ರೀ ಮದ್ಭಗವದ್ಗೀತೆ 'ವಿಭೂತಿ ಯೋಗ' ಕುರಿತು ಪ್ರವಚನ, ಗಣೇಶ ಶರ್ಮ ಅವರಿಂದ ಶಿವಪುರಾಣ ಕುರಿತು ಪ್ರವಚನ, ಸ್ಥಳ: ದೇವಸ್ಥಾನ, ಉಪ್ಪಿನಕೇರಿ, ಮಂಡಿ ಮೊಹಲ್ಲಾ, ಸಂಜೆ 6.30 ರಿಂದ.

■ **ಶ್ರೀ ಎಲ್ಲಮ್ಮತಾಯಿ ದೇವಸ್ಥಾನ :** ಭರತ ಹುಣ್ಣಿಮೆ ಅಂಗವಾಗಿ ಓಂ ಶ್ರೀ ಎಲ್ಲಮ್ಮತಾಯಿ ಅಮ್ಮನವರ 20ನೇ ವರ್ಷದ ಪೂಜಾ ಮಹೋತ್ಸವ, ಬೆಳಗ್ಗೆ 6ಕ್ಕೆ ಅಭಿಷೇಕ, ಶ್ರೀ ಗಣಹೋಮ, ನವಗ್ರಹ ಹೋಮ, ಶ್ರೀ ರೇಣುಕಾದೇವಿ ಹೋಮ, ಶ್ರೀ ದುರ್ಗಾಹೋಮ, ಶ್ರೀ ಮೃತ್ಯುಂಜಯ ಹೋಮ, ಪೂರ್ಣಾಹುತಿ, ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ, ಬೆಳಗ್ಗೆ 10 ರಿಂದ ಶ್ರೀ ಎಲ್ಲಮ್ಮ ಚರಿತ್ರೆ ಮತ್ತು ಚೌಡಿಕೆ ನಾದ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಮ. 1ಕ್ಕೆ ಅನ್ನಸಂತರ್ಪಣೆ, ಸ್ಥಳ: ಶ್ರೀ ರಾಜರಾಜೇಶ್ವರಿ ನಿಲಯ, ರಾಮಾನುಜ ರಸ್ತೆ, ಕೆ.ಆರ್. ಮೊಹಲ್ಲಾ.

■ **ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಖ್ಯಾತ ವ್ಯಂಗ್ಯಚಿತ್ರಕಾರ, ಫುಲ್ ಬ್ರೈಟರ್ ಎಂ.ವಿ. ನಾಗೇಂದ್ರಬಾಬು ರಚಿಸಿರುವ 'ವ್ಯಂಗ್ಯಚಿತ್ರ ಸಿಂಹಾವಲೋಕನ' ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಡಾ. ಕೆ.ಬಿ. ಗಣಪತಿ, ಕೃತಿ ಬಿಡುಗಡೆ : ಸಂಸದ ಪ್ರತಾಪ್ ಸಿಂಹ, ಕೃತಿ ಕುರಿತು ಮಾತನಾಡು ವವರು : ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಕರ್ನಾಟಕ ವ್ಯಂಗ್ಯ ಚಿತ್ರಕಾರರ ಸಂಘದ ಅಧ್ಯಕ್ಷ ವಿ.ಆರ್.ಸಿ. ಶೇಖರ್, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಕರ್ನಾಟಕ ಮುಕ್ತಕ ಅಕಾಡೆಮಿ ಟ್ರಸ್ಟ್ ಅಧ್ಯಕ್ಷ ಎಸ್. ರಾಮಪ್ರಸಾದ್, ಲಕ್ಷ್ಮೀನರಸಿಂಹ ದೇವಸ್ಥಾನ ಸಿಇಓ ಕೆ.ಆರ್. ಯೋಗಾನರಸಿಂಹನ್, ಯೋಗ ವಿತ್ ಶ್ರೀನಾಥ್ ಸಂಸ್ಥಾಪಕ ಶ್ರೀನಾಥ್, ಸ್ಥಳ: ಕನ್ನಡ ಸಾಹಿತ್ಯ ಭವನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ವಿಜಯನಗರ 1ನೇ ಹಂತ, ಸಂಜೆ 5.30ಕ್ಕೆ.

■ **ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್ :** ತಿಂಗಳ ಸಾಂಸ್ಕೃತಿಕೋತ್ಸವದ ಅಂಗವಾಗಿ ವಿಶೇಷ ಮಾಘಿ ಸಂಜೆ ಕಾರ್ಯಕ್ರಮ, ಹಿನ್ನೆಲೆ ಗಾಯಕಿ ಶ್ರೀಮತಿ ಶೃತಿ ಮಹೇಶ್, ರಾಗ ಸಂಯೋಜಕ, ಮಹೇಶ್ ಪ್ರಿಯದರ್ಶನ್ ಅವರಿಂದ ಸುಗಮ ಸಂಗೀತ, ಸ್ಥಳ: ಶ್ರೀಕೃಷ್ಣಧಾಮ, ಸಾಹುಕಾರ್ ಚನ್ನಯ್ಯ ರಸ್ತೆ, ಸಂಜೆ 5.30ಕ್ಕೆ.

■ **ಶ್ರೀ ಚಾಮುಂಡೇಶ್ವರಿ ದೇವಸ್ಥಾನ :** 33ನೇ ವರ್ಷದ ವಾರ್ಷಿಕೋತ್ಸವ ಮತ್ತು ಪಲ್ಲಕ್ಕಿ ಉತ್ಸವ, ಸಂಜೆ 6.30ಕ್ಕೆ ಕಳಸ ಸ್ಥಾಪನೆ, ಗಣಪತಿ ಪೂಜೆ, 7ಕ್ಕೆ ಸ್ವಸ್ತಿವಾಚನ, 8ಕ್ಕೆ ನವಗ್ರ ಪೂಜೆ, ರಾತ್ರಿ 8.30ಕ್ಕೆ ದುರ್ಗಾಪೂಜೆ, 9ಕ್ಕೆ ಗಣಪತಿ ನವಗ್ರಹ ಮಹಾಮೃತ್ಯುಂಜಯ, ದುರ್ಗಾಹೋಮ, ರಾತ್ರಿ 10ಕ್ಕೆ ಪೂರ್ಣಾಹುತಿ, ಸ್ಥಳ: ದೇವಸ್ಥಾನ, ಹೆಬ್ಬಾಳು.

■ **ದೀಕ್ಷಿತ್ ಆರೋಗ್ಯಧಾಮ :** ಆನಂದ ಆರೋಗ್ಯ ಕಾರ್ಯಕ್ರಮ, ಬಾಲಸುಬ್ರಮಣ್ಯ ಆರ್. ಭಾರದ್ವಾಜ ಅವರಿಂದ ಬಾನ್ಸುರಿ ವಾದನ, ಪ್ರಮಥ ಬಾಲಸುಬ್ರಮಣ್ಯಮ್–ತಬಲ, ಡಾ. ಸಿ.ಎಸ್. ಅನಿಲ್‌ಕುಮಾರ್ ಅವರಿಂದ ಎಕ್ಕ ಇರಲಿ ಪಕ್ಕ ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಸಂಜೆ 6 ರಿಂದ.

■ **ಶ್ರೀ ಸುತ್ತೂರು ಮಠ :** ಬೆಳದಿಂಗಳ ಸಂಗೀತ–264, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಕುನ್ನಕ್ಕುಡಿ ಎಂ. ಬಾಲಮುರಳಿಕೃಷ್ಣ ಅವರಿಂದ ಗಾಯನ, ವಿದ್ವಾನ್ ಎಚ್.ಎನ್. ಭಾಸ್ಕರ್–ವಯೋಲಿನ್, ವಿದ್ವಾನ್ ಅರ್ಜುನ್ ಕುಮಾರ್ –ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜಂ –ಘಟಂ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಕರ್ನಾಟಕ ಪವರ್ ಇಂಜಿನಿಯರ್ಸ್ ಅಕಾಡೆಮಿ :** ಡಾ. ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಅಪ್ಪು ನಮನ ಕಾರ್ಯಕ್ರಮ ಹಾಗೂ ಸಂಗೀತ ಸಂಜೆ, ಮುಖ್ಯ ಅತಿಥಿಗಳು : ಡಾ. ಶಿವರಾಜ್‌ಕುಮಾರ್ ಮತ್ತು ಶ್ರೀಮತಿ ಗೀತಾ ಶಿವರಾಜ್‌ಕುಮಾರ್, ಸನ್ಮಾನ: ಅಯೋಧ್ಯೆ ಬಾಲರಾಮ ಪ್ರತಿಮೆ ಶಿಲ್ಪಿ ಅರುಣ್ ಯೋಗಿರಾಜ್, ಉಪಸ್ಥಿತರು : ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಜಿ. ಶೀಲಾ, ಕೆಪಿಇಎ ಅಧ್ಯಕ್ಷ ಕೆ. ಮುನಿಗೋಪಾಲರಾಜು, ಕಾರ್ಯದರ್ಶಿ ಎಂ.ಹೆಚ್. ಜಗದೀಶ್, ಸ್ಥಳ: ಶಕ್ತಿಧಾಮ, ಸಂಜೆ 6.30ಕ್ಕೆ.

ಮಾ.13ರ ನಂತರ ಲೋಕಸಭೆ ಚುನಾವಣೆ ದಿನಾಂಕ ಪ್ರಕಟ

ಸುಳಿವು ನೀಡಿದ ಚುನಾವಣಾ ಆಯೋಗ



ಹೊಸದಿಲ್ಲಿ: ಪ್ರಸಕ್ತ ಸಾಲಿನ ಲೋಕಸಭೆ ಚುನಾವಣೆಯ ವೇಳಾಪಟ್ಟಿಯನ್ನು ಚುನಾವಣಾ ಆಯೋಗವು ಮಾರ್ಚ್ 13ರ ಬಳಿಕ ಪ್ರಕಟಿಸುವ ಸಾಧ್ಯತೆ ಇದೆ. ಸಾರ್ವತ್ರಿಕ ಚುನಾವಣೆಗೆ ಅಗತ್ಯವಾದ ಸಿದ್ಧತೆಗಳ ಮೌಲ್ಯಮಾಪನ ನಡೆಸಲು ಚುನಾವಣಾ ಆಯೋಗದ ಅಧಿಕಾರಿಗಳು ವಿವಿಧ ರಾಜ್ಯಗಳಿಗೆ ಭೇಟಿ ನೀಡುತ್ತಿದ್ದಾರೆ. ಒಮ್ಮೆ ಇದು ಪೂರ್ಣಗೊಂಡ ಬಳಿಕ, ದಿನಾಂಕ ಘೋಷಣೆ ಮಾಡಲಾಗುತ್ತದೆ ಎಂದು ಚುನಾವಣಾ ಆಯೋಗದ ಮೂಲಗಳು ಶುಕ್ರವಾರ ತಿಳಿಸಿವೆ.

ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳು ಸದ್ಯ ತಮಿಳುನಾಡು ಪ್ರವಾಸದಲ್ಲಿದ್ದಾರೆ. ಅಲ್ಲಿನ ಚುನಾವಣಾ ಸಿದ್ಧತೆಗಳನ್ನು ಪರಿಶೀಲನೆ ನಡೆಸಿದ ಬಳಿಕ ಈ ತಂಡವು ಉತ್ತರ ಪ್ರದೇಶ ಹಾಗೂ ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಲಿವೆ. ಮಾರ್ಚ್ 13ಕ್ಕೂ ಮುನ್ನ ಎಲ್ಲಾ ರಾಜ್ಯಗಳ ಭೇಟಿ ಹಾಗೂ ಪರಿಶೀಲನೆ ಪೂರ್ಣಗೊಳ್ಳುವಂತೆ ಸಮಯ ನಿಗದಿಪಡಿಸಲಾಗಿದೆ.

ಚುನಾವಣಾ ತಯಾರಿಗಳನ್ನು ಚುರುಕುಗೊಳಿಸುವ ಹಾಗೂ ಸ್ಥಿತಿಗತಿಗಳ ಬಗ್ಗೆ ಮಾಹಿತಿ ತಿಳಿಯಲು ಆಯೋಗವು ಕಳೆದ ಕೆಲವು ತಿಂಗಳಿನಿಂದ ಎಲ್ಲಾ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳ (ಸಿಇಒ) ಜತೆ ಸತತವಾಗಿ ಸಭೆಗಳನ್ನು ನಡೆಸುತ್ತಿದೆ. ಸಮಸ್ಯೆ ಇರುವ ಪ್ರದೇಶಗಳು, ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಸಾಗಣೆ, ತಮಗೆ ಅಗತ್ಯವಿರುವ ಭದ್ರತಾ ಪಡೆಗಳು, ಗಡಿಗಳಲ್ಲಿನ ತಪಾಸಣೆಯನ್ನು ಬಿಗಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳು ಹಾಗೂ ಸಮಸ್ಯೆಗಳ ಪಟ್ಟಿಗಳನ್ನು ಸಿಇಒಗಳು ಆಯೋಗಕ್ಕೆ ನೀಡಿದ್ದಾರೆ. ಈ ವರ್ಷ ಚುನಾವಣೆ ಸುಗಮವಾಗಿ ನಡೆಯುವಂತೆ ಚುನಾವಣಾ ಆಯೋಗವು ಕೃತಕ ಬುದ್ಧಿಮತ್ತೆ (ಎಐ) ಬಳಸಿಕೊಳ್ಳಲು ಚಿಂತನೆ ನಡೆಸಿದೆ. 2019ರಲ್ಲಿ ಮಾ.10ರಂದು ಚುನಾವಣಾ ಆಯೋಗವು ಲೋಕಸಭೆ ಚುನಾವಣೆಗೆ ಸಂಬಂಧಿಸಿದ ದಿನಾಂಕ ಪ್ರಕಟಿಸಿತ್ತು.

ಚುನಾವಣೆಯಲ್ಲಿ ಎಐ ಬಳಕೆ: ಲೋಕಸಭೆ ಚುನಾವಣೆಯು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಯಲು ಅನುಕೂಲವಾಗುವಂತೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ನಿಯೋಜಿಸಲು ಚುನಾವಣಾ ಆಯೋಗ ನಿರ್ಧಾರ ಕೈಗೊಂಡಿದೆ. ಚುನಾವಣಾ ಆಯೋಗದಲ್ಲಿ ಕೃತಕ ಬುದ್ಧಿಮತ್ತೆಗೆ ಮೀಸಲಾದ ಘಟಕವೊಂದನ್ನು ತೆರೆಯಲಾಗಿದೆ. ಇದು ಸಾಮಾಜಿಕ ಮಾಧ್ಯಮಗಳಲ್ಲಿ ಮತ್ತು ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ಹರಿದಾಡುವ ಸುಳ್ಳು ಸುದ್ದಿಗಳನ್ನು ಗುರುತಿಸಿ, ತೆರವುಗೊಳಿಸುತ್ತದೆ.

ಚುನಾವಣೆ ಸಂದರ್ಭದಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುಳ್ಳು ಹಾಗೂ ಪ್ರಚೋದನಾಕಾರಿ ಅಂಶಗಳನ್ನು ಬಹಳ ತ್ವರಿತವಾಗಿ ತೆಗೆದು ಹಾಕಲಾಗುತ್ತದೆ. ಯಾವುದೇ ಪಕ್ಷ ಅಥವಾ ಅಭ್ಯರ್ಥಿ ನಿಯಮಗಳ ಉಲ್ಲಂಘನೆಯನ್ನು ಮುಂದುವರಿಸಿದರೆ ಆಯೋಗವು ಖಾತೆಗಳನ್ನು ಅಮಾನತು ಅಥವಾ ಬ್ಲಾಕ್ ಮಾಡುವಂತೆ ಸಾಮಾಜಿಕ ಜಾಲತಾಣ ಕಂಪೆನಿಗಳಿಗೆ ಸೂಚಿಸುವಂತಹ ಕಠಿಣ ಕ್ರಮ ಕೈಗೊಳ್ಳುತ್ತದೆ ಫ್ಯಾಕ್ಟ್ ಚೆಕ್ಕಿಂಗ್, ಸುಳ್ಳು ಸುದ್ದಿಗಳನ್ನು ತಡೆಯುವುದು, ಸೂಕ್ಷ್ಮ ಪ್ರದೇಶಗಳಲ್ಲಿ ಭದ್ರತೆ ಹೆಚ್ಚಿಸುವುದರತ್ತ ಆಯೋಗ ಗಮನ ಹರಿಸಿದೆ.

ಚುನಾವಣಾ ಆಯೋಗದ ಡೇಟಾ ಪ್ರಕಾರ, ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಮತ ಚಲಾಯಿಸಲು ದೇಶದಲ್ಲಿ 96.88 ಕೋಟಿ ಅರ್ಹ ಮತದಾರರಿದ್ದಾರೆ. ಇದು ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ಸಂಖ್ಯೆಯಾಗಿದೆ. ಜತೆಗೆ 18–19 ವರ್ಷ ವಯೋಮಾನದ 1.85 ಕೋಟಿ ಯುವ ಜನರು ಮತ ಚಲಾಯಿಸುವ ಹಕ್ಕಿಗಾಗಿ ತಮ್ಮ ಹೆಸರು ನೋಂದಣಿ ಮಾಡಿಕೊಳ್ಳುತ್ತಿದ್ದಾರೆ.

ಪರಿಷತ್‌ನಲ್ಲಿ ಹಿಂದೂ ಧಾರ್ಮಿಕ ದತ್ತಿ ತಿದ್ದುಪಡಿ ವಿಧೇಯಕ ತಿರಸ್ಕೃತ

ಜೈ ಶ್ರೀರಾಮ್ ಘೋಷಣೆ ಕೂಗಿ ಸಂಭ್ರಮಿಸಿದ ಬಿಜೆಪಿ



ಬೆಂಗಳೂರು, ಫೆ.23–ತೀವ್ರ ಕುತೂಹಲ ಮೂಡಿಸಿದ್ದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿ ತಿದ್ದುಪಡಿ ಮಸೂದೆಗೆ ಹಿನ್ನಡೆಯಾಗಿದೆ. ಇದರೊಂದಿಗೆ ಇದನ್ನು ಸವಾಲಾಗಿ ಸ್ವೀಕರಿಸಿದ್ದ ಕಾಂಗ್ರೆಸ್ ಸರ್ಕಾರಕ್ಕೆ ಮುಖಭಂಗವಾಗಿದೆ. ವಿಧಾನಸಭೆಯಲ್ಲಿ ಅಂಗೀಕಾರವಾಗಿದ್ದ ವಿಧೇಯಕ ಪರಿಷತ್‌ನಲ್ಲಿ ತಿರಸ್ಕೃತಗೊಂಡಿದೆ. ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ಅವರು ಮೊದಲು ಪರಿಷತ್‌ನಲ್ಲಿ ವಿಧೇಯಕ ಮಂಡಿಸಿದರು. ಈ ಬಗ್ಗೆ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ಪರ–ವಿರೋಧದ ಚರ್ಚೆ ನಡೆಯಿತು. ಅಂತಿಮವಾಗಿ ಉಪ ಸಭಾಪತಿ ಪ್ರಾಣೇಶ್ ಅವರು ವಿಧೇಯಕವನ್ನು ಧ್ವನಿ ಮತಕ್ಕೆ ಹಾಕಿದರು. ಆದರೆ, ಸದನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಬಿಜೆಪಿ ಸದಸ್ಯರು ವಿರೋಧ ವ್ಯಕ್ತಪಡಿಸಿದರು. ವಿಧೇಯಕ ಪರ 7 ಮತ, ವಿಧೇಯಕದ ವಿರುದ್ಧ 18 ಮತ ಚಲಾವಣೆಯಾದವು. ಹಾಗಾಗಿ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ವಿಧೇಯಕ ತಿರಸ್ಕೃತವಾಯಿತು. ಇದರ ಬೆನ್ನಲ್ಲೇ ಬಿಜೆಪಿ ಸದಸ್ಯರು ಜೈ ಶ್ರೀರಾಂ ಘೋಷಣೆ ಕೂಗಿದರು. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸದಸ್ಯರು ಭಾರತ್ ಮಾತಾಕಿ ಜೈ, ಜೈ ಭೀಮ್ ಎಂದು ಘೋಷಣೆ ಕೂಗಿದರು.

ಟಿ20 ಮ್ಯಾಚ್‌ನಂತೆ ಕುತೂಹಲ ಮೂಡಿಸಿದ್ದ ಬಿಲ್: ಹುಂಡಿ ಹಣಕ್ಕೆ ಸರ್ಕಾರ ಕೈ ಹಾಕಿದೆ ಎಂಬ ವಿವಾದಕ್ಕೆ ಕಾರಣವಾಗಿದ್ದ ಹಿಂದೂ ಧಾರ್ಮಿಕ ದೇವಸ್ಥಾನಗಳ ತಿದ್ದುಪಡಿ ಬಿಲ್ ತೀವ್ರ ಕುತೂಹಲ ಮೂಡಿಸಿತ್ತು. ಬಿಲ್ ತಿರಸ್ಕೃತ ಆಗುವ ಮೊದಲು ದೊಡ್ಡ ಹೈಡ್ರಾಮಾವೇ ನಡೆಯಿತು. ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ತಿದ್ದುಪಡಿ ವಿಧೇಯಕವನ್ನು ಇಂದು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಮಂಡನೆ ಮಾಡಿದರು. ವಿಧೇಯಕದಲ್ಲಿ ಇದ್ದ ತಿದ್ದುಪಡಿ ಅಂಶಗಳಿಗೆ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ತೀವ್ರವಾದ ಆಕ್ಷೇಪ, ವಿರೋಧವನ್ನು ವ್ಯಕ್ತಪಡಿಸಿದರು. ಒಂದು ಕೋಟಿಗಿಂತಲೂ ಹೆಚ್ಚು ಆದಾಯ ಇರುವ ದೇವಸ್ಥಾನಗಳ ಒಟ್ಟು ಆದಾಯದಿಂದ ಶೇಕಡ 10ರಷ್ಟು ನಿಧಿ ಸಂಗ್ರಹಣೆ ಮಾಡುವ ನಿರ್ಧಾರವನ್ನು ಕೈಬಿಡಬೇಕು ಎಂದು ಬಿಜೆಪಿ ಸದಸ್ಯರು ಆಗ್ರಹಿಸಿದರು. ಈ ಅಂಶವನ್ನು ಕೈಬಿಟ್ಟರೆ ಮಾತ್ರ ವಿಧೇಯಕ್ಕೆ ಬೆಂಬಲಿಸುತ್ತೇವೆ. ಇಲ್ಲದೇ ಹೋದರೆ ವಿದೇಯಕಕ್ಕೆ ವಿರೋಧಿಸುತ್ತೇವೆ ಎಂದು ಬಿಜೆಪಿ ಸದಸ್ಯರು ಪಟ್ಟು ಹಿಡಿದರು. ಒಂದು ಹಂತದಲ್ಲಿ ಬಿಜೆಪಿ ಸದಸ್ಯರ ಆಗ್ರಹಕ್ಕೆ ಮಣಿಯಲು ಮುಂದಾದ ಸಚಿವ ರಾಮಲಿಂಗಾರೆಡ್ಡಿ ಸೋಮವಾರ ಬಿಲ್ಲನ್ನು ಮತ್ತೆ ಮಂಡಿಸುತ್ತೇನೆ ಎಂದು ಪ್ರಸ್ತಾಪಿಸಿದರು. ಇದಕ್ಕೆ ನಿಯಮಗಳಲ್ಲಿ ಅವಕಾಶ ಇಲ್ಲ ಎಂದು ಆಕ್ಷೇಪಿಸಿದ ಉಪ ಸಭಾಪತಿ ಪ್ರಾಣೇಶ್ ಒಮ್ಮೆ ಪರ್ಯಾಲೋಚನೆಗೆ ತೆಗೆದುಕೊಂಡ ಬಿಲ್ಲನ್ನು ಮತಕ್ಕೆ ಹಾಕಬೇಕಾಗುತ್ತದೆ ಎಂದು ಸೂಚಿಸಿದರು.

ಸಿಎಂ ಜೊತೆ ಚರ್ಚೆ ಮಾಡಿ ನಿರ್ಧಾರ ಮಾಡುವುದಕ್ಕೆ ಕಾಲಾವಕಾಶ ಕೇಳಿದ ರಾಮಲಿಂಗಾ ರೆಡ್ಡಿ ಅವರಿಗೆ ಹತ್ತು ನಿಮಿಷಗಳ ಕಾಲ ಕಲಾಪವನ್ನು ಮುಂದೂಡಲಾಯಿತು. ಈ ಸಮಯ ದಲ್ಲಿ ಭಾರೀ ಕುತೂಹಲ ಮೂಡಿಸಿದ್ದ ಹಿಂದೂ ಧಾರ್ಮಿಕ ಬಿಲ್ ಭವಿಷ್ಯ ಏನಾಗಬಹುದು ಎನ್ನುವ ಕಾತರ ಟಿ20 ಮ್ಯಾಚ್ ರೀತಿಯಲ್ಲಿ ಕಂಡು ಬಂತು. ಆಡಳಿತ ಪಕ್ಷದ ಸದಸ್ಯರು ಸಚಿವ ರಾಮಲಿಂಗಾ ರೆಡ್ಡಿ ಜೊತೆ ಸುದೀರ್ಘ ಚರ್ಚೆ ನಡೆಸಿದ ಬಳಿಕ ಯಾವುದೇ ಫಲಪ್ರದವಾಗಲಿಲ್ಲ. ಕೊನೆಗೆ ಸಭಾಪತಿ ಸ್ಥಾನದಲ್ಲಿದ್ದ ಎಂ.ಕೆ. ಪ್ರಾಣೇಶ್ ವಿಧೇಯಕವನ್ನು ಧ್ವನಿ ಮತಕ್ಕೆ ಹಾಕಿದರು. ಆದರೆ, ಬಿಜೆಪಿಯ ಒಟ್ಟು 18 ಸದಸ್ಯರು ಹಾಜರಿದ್ದರೆ ಕಾಂಗ್ರೆಸ್ ಪರವಾಗಿ ಕೇವಲ 7 ಸದಸ್ಯರು ಮಾತ್ರ ಹಾಜರಿದ್ದರು. ಹೀಗಾಗಿ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ವಿಧೇಯಕ ಧ್ವನಿ ಮತದ ಮೂಲಕ ತಿರಸ್ಕೃತವಾಯಿತು.

ತಿದ್ದುಪಡಿಯಲ್ಲಿ ಏನಿದೆ?: 1997ರಲ್ಲಿ ಕಾಯಿದೆಯನ್ನು ಜಾರಿಗೊಳಿಸಿದಾಗಿನಿಂದಲೂ ಸಾಮಾನ್ಯ ಸಂಗ್ರಹಣಾ ನಿಧಿಯನ್ನು ಸೃಜಿಸಬೇಕು ಎನ್ನುವ ನಿಬಂಧನೆ ಕಾಯಿದೆಯಲ್ಲಿಯೇ ಅಡಕವಾಗಿದೆ. ಆದರೆ ಅದು ಜಾರಿಯಾಗಿರಲಿಲ್ಲ. ಅನಂತರ 2003ರಲ್ಲಿ ಕಾಯಿದೆಯು ಜಾರಿಗೆ ಬಂದಾಗಿನಿಂದ ಧಾರ್ಮಿಕ ಕಾರ್ಯಗಳಿಗೆ ಮಾತ್ರವೇ ಬಳಕೆಯಾಗುತ್ತಿದೆ. ಅಲ್ಲಿಂದ ಈವರೆಗೂ ಎ ದರ್ಜೆ ದೇವಸ್ಥಾನಗಳ ಆದಾಯದಲ್ಲಿ ಸಾಮಾನ್ಯ ಸಂಗ್ರಹಣಾ ನಿಧಿಯಾಗಿ ಶೇ.5ರಷ್ಟನ್ನು ಬಳಕೆ ಮಾಡಲಾಗುತ್ತಿತ್ತು.

ಹೊಸ ತಿದ್ದುಪಡಿ ಪ್ರಕಾರ ಈ ಪ್ರಮಾಣ ಶೇ.10ಕ್ಕೆ ಏರಿಕೆಯಾಗಲಿದೆ. ಉದಾಹರಣೆಗೆ ಒಂದು ಕೋಟಿ ರೂ. ವಾರ್ಷಿಕ ಆದಾಯ ಬಂದರೆ ಅದರಲ್ಲಿ 10 ಲಕ್ಷ ರೂ. ಸಾಮಾನ್ಯ ಸಂಗ್ರಹಣಾ ನಿಧಿಗೆ ಹೋಗಲಿದೆ. ನೂತನ ತಿದ್ದುಪಡಿಯನ್ನು ಸಾಮಾನ್ಯ ಸಂಗ್ರಹಣಾ ನಿಧಿಯನ್ನು ಹೆಚ್ಚಿಸುವ ಏಕೈಕ ಉದ್ದೇಶದಿಂದ ಮಾಡಲಾಗಿದೆ ಎಂದು ಅಧಿಕೃತ ಕರ್ನಾಟಕ ರಾಜ್ಯ ಪತ್ರದಲ್ಲಿ ತಿಳಿಸಲಾಗಿದೆ.

ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ ಪುತ್ರಿ ಆರ್.ವರ್ಣಿಕ ಸಿವಿಲ್ ನ್ಯಾಯಾಧೀಶರಾಗಿ ನೇಮಕ

ನ್ಯಾಯಾಂಗ ಪರೀಕ್ಷೆಯಲ್ಲಿ ಐದನೇ ರ್‍ಯಾಂಕ್



ಆರ್.ವರ್ಣಿಕ

ಮೈಸೂರು, ಫೆ.23(ಎಂಕೆ)– ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ ಅವರ ಪುತ್ರಿ ಆರ್.ವರ್ಣಿಕ ನ್ಯಾಯಾಂಗ ಪರೀಕ್ಷೆಯಲ್ಲಿ 5ನೇ ರ್‍ಯಾಂಕ್ ಪಡೆಯುವ ಮೂಲಕ ಸಿವಿಲ್ ನ್ಯಾಯಾಧೀಶರಾಗಿ ನೇಮಕಗೊಂಡಿದ್ದಾರೆ. 2023ರಲ್ಲಿ ನಡೆದ ಸಿವಿಲ್ ನ್ಯಾಯಾಧೀಶರ ನೇಮಕಾತಿ ಪರೀಕ್ಷೆ, ಜ.30ರಿಂದ ಫೆ.1ರವರೆಗೆ ನಡೆದ ಸಂದರ್ಶನ ಸೇರಿದಂತೆ ಅತ್ಯುತ್ತಮ ಅಂಕಗಳನ್ನು ಪಡೆಯುವ ಮೂಲಕ 5ನೇ ರ್‍ಯಾಂಕ್ ಪಡೆದಿದ್ದಾರೆ. ಶುಕ್ರವಾರ ಫಲಿತಾಂಶ ಪ್ರಕಟವಾಗಿದ್ದು, ಆರ್.ವರ್ಣಿಕ ಸೇರಿದಂತೆ 33 ಮಂದಿ ಸಿವಿಲ್ ನ್ಯಾಯಾಧೀಶರಾಗಿ ನೇಮಕಗೊಂಡಿದ್ದಾರೆ.



ಬೇಸಿಗೆ ಬಿಸಿಲಿನ ಧಗೆ; ತಂಪು ಪಾನೀಯ, ತಿನಿಸು ಮೊರೆ ಹೋಗುತ್ತಿರುವ ಜನತೆ



ಮೈಸೂರು, ಫೆ.23 (ಎಸ್‌ಪಿಎನ್)– ದಿನದಿಂದ ದಿನಕ್ಕೆ ಬಿಸಿಲಿನ ಬೇಗೆ ಅಧಿಕವಾಗುತ್ತಿರುವುದರಿಂದ ಜನರು ಬಾಯಾರಿಕೆ ನೀಗಿಸಿಕೊಳ್ಳಲು ತಂಪು ಪಾನೀಯ, ಎಳನೀರು, ಕಲ್ಲಂಗಡಿ, ಹಾಸನದ ಬಿಳಿ ಸೌತೆಕಾಯಿಯ ಮೊರೆ ಹೋಗುತ್ತಿದ್ದಾರೆ.

ಚಳಿಗಾಲ ಕಳೆಯುತ್ತಾ ಬರುತ್ತಿರುವ ಸಂದರ್ಭದಲ್ಲೇ ಕಲ್ಲಂಗಡಿ ಹಣ್ಣಿಗೆ ಇಡೀ ಜಿಲ್ಲೆಯಾದ್ಯಂತ ಬೇಡಿಕೆ ಇದ್ದು, ಮಾರುಕಟ್ಟೆಗಳಲ್ಲಿ, ಬೇಡಿಕೆ ತಕ್ಕಂತೆ ಪೂರೈಕೆ ಆಗುತ್ತಿಲ್ಲ. ಕಲ್ಲಂಗಡಿಗೆ ಕೆಜಿಗೆ 40 ರೂ. ಇದ್ದರೂ ಗ್ರಾಹಕರು ಮುಗಿಬಿದ್ದು ಖರೀದಿ ಮಾಡುತ್ತಿದ್ದಾರೆ. ಮೈಸೂರಿನ ಪ್ರಮುಖ ರಸ್ತೆಗಳ ಫುಟ್‌ಪಾತ್ ಗಳಲ್ಲಿ ಎಳನೀರು, ಸೌತೆಕಾಯಿ ಹಾಗೂ ಕಲ್ಲಂಗಡಿಯ ರಾಶಿ ಹಾಕಿಕೊಂಡು ಮಾರಾಟ ಮಾಡುತ್ತಿದ್ದಾರೆ.

ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಂದ ಲಾರಿಗಳಲ್ಲಿ ಕಲ್ಲಂಗಡಿಯನ್ನು ತಂದು ಈ ಭಾಗಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಅಲ್ಲದೆ, ಹಾಸನದ ಬಿಳಿ ಸೌತೆಕಾಯಿ ಒಂದು ಮೂಟೆಗೆ ಸಾವಿರ ರೂ. ಇದ್ದು, ಒಂದು ಕೆಜಿಗೆ 70–80 ರೂ.ನಂತೆ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ. ಒಂದು ಕಾಯಿಗೆ 10–15 ರೂ.ವರೆಗೂ ಮಾರಾಟವಾಗುತ್ತಿದೆ ಎನ್ನುತ್ತಾರೆ ಸೌತೆಕಾಯಿ ವ್ಯಾಪಾರಿ ಮರೀಗೌಡ.

ಅಲ್ಲದೆ, ಮೈಸೂರು ಸಂಪರ್ಕಿಸುವ ಹೆದ್ದಾರಿಗಳಲ್ಲಿ ದೂರದ ಊರುಗಳಿಗೆ ಹೋಗುವ ಕಾರು, ದ್ವಿಚಕ್ರ ವಾಹನ ಸವಾರರು ಕಲ್ಲಂಗಡಿ ಹಾಗೂ ಎಳ ನೀರು, ಸೌತೆಕಾಯಿ ಸವಿದು ಬಾಯಾರಿಕೆ ನೀಗಿಸಿಕೊಳ್ಳುತ್ತಿದ್ದಾರೆ.



> “ಮಾರುಕಟ್ಟೆಯಲ್ಲಿ ಕಲ್ಲಂಗಡಿ, ಹಾಸನದ ಸೌತೆಕಾಯಿ ಬೇಡಿಕೆಗೆ ಅನುಗುಣವಾಗಿ ಸಿಗುತ್ತಿಲ್ಲ. ಹಾಗಾಗಿ ಒಂದು ಕೆಜಿ ಕಲ್ಲಂಗಡಿಗೆ 40 ರೂ.ನಂತೆ ಹಾಗೂ ಹಾಸನದ ಸೌತೆಕಾಯಿ(ಒಂದಕ್ಕೆ) 10–15ರೂ ರವರೆಗೂ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ.
> –ಮರೀಗೌಡ, ಸೌತೆಕಾಯಿ ವ್ಯಾಪಾರಿ,

ಆನ್‌ಲೈನ್‌ನಲ್ಲಿ ಇಬ್ಬರಿಗೆ ಲಕ್ಷಾಂತರ ರೂ. ವಂಚನೆ

ಮೈಸೂರು, ಫೆ.23(ಎಂಕೆ)– ಪ್ರತ್ಯೇಕ ಪ್ರಕರಣಗಳಲ್ಲಿ ಆನ್‌ಲೈನ್ ಮೂಲಕ ವಂಚನೆಗೊಳಗಾದ ಇಬ್ಬರು 11.50 ಲಕ್ಷ ರೂ.ಕಳೆದುಕೊಂಡಿದ್ದಾರೆ. ಮೈಸೂರಿನ ಇಟ್ಟಿಗೆಗೂಡು ನಿವಾಸಿ ಎಸ್.ಮಂಜು, ಸಾಮಾಜಿಕ ಜಾಲತಾಣದ ಮೂಲಕ ಕಂಪೆನಿಯೊಂದರಲ್ಲಿ ಕೆಲಸ ಪಡೆದಿದ್ದು, ಆರಂಭದಲ್ಲಿ ಕಂಪನಿಯಿಂದ ಹಣ ನೀಡಲಾಗಿತ್ತು. ನಂತರ ಹೆಚ್ಚಿನ ಲಾಭ ಪಡೆಯಲು ಬಂಡವಾಳ ಹೂಡುವಂತೆ ಕಂಪೆನಿ ಸಿಬ್ಬಂದಿ ಪ್ರೇರೇಪಿಸಿದ್ದು, ಹಂತ ಹಂತವಾಗಿ 9.79 ಲಕ್ಷ ಪಾವತಿಸಿದ್ದಾರೆ. ಬಂಡವಾಳ ಹೂಡಿಕೆಗೆ ಅನುಗುಣವಾಗಿ ಲಾಭ ಬರದಿದ್ದಾಗ ನಕಲಿ ಕಂಪೆನಿ ಎಂದು ಗೊತ್ತಾಗಿದೆ. ಮತ್ತೊಂದು ಪ್ರಕರಣದಲ್ಲಿ ಎನ್.ಆರ್ ಮೊಹಲ್ಲಾದ ಎಂ.ಸೌಮ್ಯ ಎಂಬುವರಿಗೆ ವರ್ಕ್ ಫ್ರಂ ಹೋಂ ಕೆಲಸ ನೀಡಿ ಆ ಬಳಿಕ ಬಂಡವಾಳ ಹೂಡುವ ನೆಪದಲ್ಲಿ 2.18 ಲಕ್ಷ ಹಣ ಪಡೆದು ನಕಲಿ ಕಂಪೆನಿ ವಂಚಿಸಿದೆ. ಈ ಸಂಬಂಧ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರಸ್ವತಿ ಪೂಜೆ; ಗುರು–ಶಿಷ್ಯರ ಮಿಲನ

ಮೈಸೂರು, ಫೆ.23–ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಶಾಲೆಯ ಹಿರಿಯ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರ ಸ್ನೇಹ ಬಳಗದಿಂದ ‘ನಮ್ಮ ಶಾಲೆ ನಮ್ಮ ದೇಗುಲ’ ಪರಿಕಲ್ಪನೆಯಲ್ಲಿ ಫೆ.25ರಂದು ಬೆಳಗ್ಗೆ 10 ಸರಸ್ವತಿ ಪೂಜೆ ಹಾಗೂ ಗುರು–ಶಿಷ್ಯರ ಸಮ್ಮಿಲನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಚರಂಡಿ ಕಾಮಗಾರಿ: 10 ದಿನ ಹರ್ಷ ರಸ್ತೆ ಬಂದ್

ಮೈಸೂರು, ಫೆ.23(ಎಸ್‌ಪಿಎನ್)– ಮೈಸೂರು ನಗರ ಪಾಲಿಕೆ ವಾರ್ಡ್ ನಂ.40ರ ವ್ಯಾಪ್ತಿಯ ಅಶೋಕ ರಸ್ತೆಯಿಂದ ಮೈಸೂರು–ಬೆಂಗಳೂರು ನೀಲಗಿರಿ ರಸ್ತೆಯವರೆಗೆ ಹರ್ಷ ರಸ್ತೆಯ ಮಾರ್ಗವಾಗಿ ಮಷಿನ್ ಹೋಲ್ ಮತ್ತು ಒಳಚರಂಡಿ ಕೊಳವೆ ಮಾರ್ಗವನ್ನು ಅಳವಡಿಸುವ ಕಾಮಗಾರಿಯನ್ನು ಕೈಗೆತ್ತಿ ಕೊಳ್ಳಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹರ್ಷ ರಸ್ತೆಯನ್ನು ಫೆ.25ರಿಂದ ಮಾ.5ರವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುವುದರಿಂದ ಸಾರ್ವಜನಿಕರು, ವಾಹನ ಸವಾರರು ಸದರಿ ದಿನಾಂಕದಂದು ಬದಲಿ ರಸ್ತೆಯಲ್ಲಿ ಸಂಚರಿಸುವ ಮೂಲಕ ಕಾಮಗಾರಿ ಪೂರ್ಣಗೊಳಿಸಲು ಪಾಲಿಕೆಯೊಂದಿಗೆ ಸಹಕರಿಸುವಂತೆ ಪಾಲಿಕೆ ಆಯುಕ್ತರು ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗಿರಾಕಿ : (ಹೋಟೆಲ್ ರೂಮಿನಲ್ಲಿ ತಂಗಿದ್ದ) "ಈ ಹೋಟೆಲ್‌ನಲ್ಲಿ ತಿನ್ನುವ ಸಮಯ ಯಾವುದು?"
ಮಾಲೀಕ : "ಬೆಳಿಗ್ಗೆ ಏಳರಿಂದ ಹನ್ನೊಂದರವರೆಗೆ ತಿಂಡಿ, ಹನ್ನೆರಡರಿಂದ ಮೂರೂವರೆವರೆಗೆ ಊಟ, ರಾತ್ರಿ ಊಟ ಸಂಜೆ ಆರರಿಂದ ರಾತ್ರಿ ಒಂಬತ್ತರವರೆಗೆ"
ಗಿರಾಕಿ : "ಇಷ್ಟೊಂದು ಸಮಯ ತಿನ್ನೋದರಲ್ಲೇ ಕಳೆದು ಹೋದರೆ ನಾನು ಊರು ನೋಡೋದು ಯಾವಾಗ?"

ಮೈಸೂರು ಮಿತ್ರ
ಶನಿವಾರ, 24 ಫೆಬ್ರವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಎಲ್ಲರೊಡನೆ ಸೌಜನ್ಯದಿಂದಿರು. ಹಲವರೊಡನೆ ಸಲುಗೆಯಿಂದಿರು. ಕೆಲವರೊಡನೆ ಆತ್ಮೀಯನಾಗಿರು. ಒಬ್ಬನಿಗೆ ಸ್ನೇಹಿತನಾಗಿರು. ಯಾರಿಗೂ ಶತ್ರುವಾಗಬೇಡ –ಬೆಂಜಮಿನ್ ಫ್ರಾಂಕ್ಲಿನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಣ್ಣೆಲೆ ಉದುರುವಾಗ ಚಿಗುರೆಲೆ ನಕ್ಕಿತಂತೆ

ನಿಮ್ಮ ಪತ್ರಗಳು

■ ಚುನಾವಣಾ ಆಯೋಗಕ್ಕೆ ಬೇಕಿದೆ ಸುಪ್ರೀಂ ಕಣ್ಗಾವಲು

ಮಾನ್ಯರೆ,

ಇತ್ತೀಚೆಗೆ ಚಂಡಿಘಡ ಮೇಯರ್ ಚುನಾವಣೆಯಲ್ಲಿ ಹಾಡಹಗಲೇ ಚುನಾವಣಾ ಅಧಿಕಾರಿಯೊಬ್ಬರು ಒಂದು ಪಕ್ಷದ ಪರವಾಗಿ ಅಕ್ರಮ ಎಸಗಿರುವುದು ಸುಪ್ರೀಂ ಕೋರ್ಟ್‌ನಲ್ಲಿ ಸಾಬೀತಾದ ಬೆನ್ನಿಗೆ, ಈ ದೇಶದಲ್ಲಿ ಚುನಾವಣಾ ಆಯೋಗದ ಮೇಲಿನ ಅಳಿದುಳಿದ ವಿಶ್ವಾಸವು ಇಲ್ಲವಾಗಿದೆ. ಎಲ್ಲರ ಕಣ್ಮುಂದೆ ನಡೆಯುವ ಮೇಯರ್ ಚುನಾವಣೆಯಲ್ಲಿಯೇ ಇಂತಹದೊಂದು ಅಕ್ರಮ ಚುನಾವಣಾಧಿಕಾರಿಯಿಂದ ನಡೆದಿರುವಾಗ ಇನ್ನೂ ಸಾರ್ವತ್ರಿಕ ಚುನಾವಣೆಯಲ್ಲಿ ಚುನಾವಣಾ ಆಯೋಗದ ಮೇಲೆ ಭರವಸೆ ಇಡುವುದು ಹೇಗೆ? ಎಂದು ಜನರು ಕೇಳುವಂತಾಗಿದೆ.

ಇಂತಹ ಅಕ್ರಮ, ಪ್ರಜಾತಂತ್ರದ ಕಗ್ಗೊಲೆ ಎಂದು ಸುಪ್ರೀಂಕೋರ್ಟ್ ಹೇಳಿದೆ. ಆದರೆ ಯಾವ ಮಾಧ್ಯಮಗಳು ಸಹ ಇಂತಹ ಅಕ್ರಮಗಳನ್ನು ಪ್ರಸಾರ ಮಾಡುವ ಮೂಲಕ ಪ್ರಜಾತಂತ್ರ ಉಳಿಸುವ ಪ್ರಯತ್ನವನ್ನು ಮಾಡುತ್ತಿಲ್ಲ ಹಾಗೂ ಗೆದ್ದಾಗ ವಿಜಯೋತ್ಸವ ಆಚರಿಸಿದ ಪಕ್ಷದ ನಾಯಕರು ಇಂದು ಅದೇ ಗೆಲುವು ಅಕ್ರಮ ಎಂಬುದನ್ನು ಈ ದೇಶದ ಸರ್ವೋಚ್ಚ ನ್ಯಾಯಾಲಯ ಗಂಟಾಘೋಷವಾಗಿ ಹೇಳಿದಾಗಲೂ ಅದಕ್ಕೆ ಉತ್ತರವಿಲ್ಲ. ಪ್ರಜಾತಂತ್ರದ ಕಗ್ಗೊಲೆ ತಮ್ಮ ಕಣ್ಮುಂದೆ ನಡೆಯುತ್ತಿದ್ದರೂ ಸಹ ಮಾಧ್ಯಮಗಳು ಕಣ್ಮುಚ್ಚಿ ಕುಳಿತಿವೆ.

ಒಂದೋ ಚುನಾವಣಾ ಆಯೋಗ ತನ್ನನ್ನು ತಾನು ಸುಧಾರಣೆ ಮಾಡಿಕೊಂಡು ಆ ಬಳಿಕ ಚುನಾವಣೆಯಲ್ಲಿ ಸುಧಾರಣೆ ತರಲು ಮುಂದಾಗಬೇಕು. ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿರುವ ಚುನಾವಣಾ ಆಯೋಗಕ್ಕೆ ಸುಪ್ರೀಂಕೋರ್ಟ್ ಸೂಕ್ತ ಮಾರ್ಗದರ್ಶನಗಳನ್ನು ನೀಡಬೇಕು. ಇಲ್ಲವಾದರೆ ಸುಪ್ರೀಂಕೋರ್ಟ್‌ನ ನೇತೃತ್ವದಲ್ಲೇ ಮುಂದಿನ ಚುನಾವಣೆಗಳನ್ನು ನಡೆಸಬೇಕಾದ ಸ್ಥಿತಿ ನಿರ್ಮಾಣವಾಗಬಹುದು.

–ಕೆ.ಎಸ್. ಸುರೇಶ್, ಶಿಕ್ಷಕರು, ಕೆ.ಜಿ.ಹಳ್ಳಿ, ಹೆಚ್.ಡಿ.ಕೋಟೆ.

■ ಡಾ.ಸಿ.ಎನ್.ಮಂಜುನಾಥ್ ರಾಜಕೀಯಕ್ಕೆ ಪ್ರವೇಶಿಸಿದ್ದಲ್ಲಿ ಮಾದರಿ ರಾಜಕಾರಣಿ ಆಗಲಿ

ಮಾನ್ಯರೆ,

ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕರು ಮತ್ತು ಖ್ಯಾತ ಹೃದ್ರೋಗ ತಜ್ಞರಾದ ಡಾ.ಸಿ.ಎನ್.ಮಂಜುನಾಥ್ ಅವರನ್ನು ಲೋಕಸಭೆ ಚುನಾವಣೆಗೆ ನಿಲ್ಲಿಸಲು ಸಿದ್ಧತೆಗಳು ನಡೆದಿದೆ ಎಂಬ ಸುದ್ದಿ ಕೇಳಿ ಬರುತ್ತಿದೆ.

ಒಂದು ಸರ್ಕಾರಿ ಆಸ್ಪತ್ರೆಯಲ್ಲೂ ಖಾಸಗಿ ಆಸ್ಪತ್ರೆಗಿಂತಲೂ ಉತ್ತಮ ಗುಣಮಟ್ಟದ ಚಿಕಿತ್ಸೆಗಳು ಬಡವರಿಗೆ ದೊರಕುವಂತೆ ಮಾಡಬಹುದು ಎಂದು ತೋರಿಸಿಕೊಟ್ಟವರು. ಹಣವಿಲ್ಲದೆ ಚಿಕಿತ್ಸೆಗೆ ಬಂದ ಅನೇಕರ ನೋವುಗಳನ್ನು ಅರ್ಥ ಮಾಡಿಕೊಂಡು ಮಾನವೀಯ ದೃಷ್ಟಿಯಿಂದ ಚಿಕಿತ್ಸೆಯನ್ನು ನೀಡಿದ 'ಹೃದಯವಂತ' ಹೃದಯ ವೈದ್ಯ ಎಂದು ಹೆಸರು ಮಾಡಿದವರು. ಹಾಗಾಗಿ ಅವರು ರಾಜಕೀಯಕ್ಕೆ ಬಂದರೆ ಅವರ ಬಗ್ಗೆ ಅನೇಕರಿಗೆ ಒಳ್ಳೆಯ ಭರವಸೆ ಮತ್ತು ನಿರೀಕ್ಷೆಗಳು ಇವೆ. ಅವರಿಂದ ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆ ಆಗಬೇಕಿದೆ. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಉತ್ತಮ ಗುಣಮಟ್ಟದ ಚಿಕಿತ್ಸೆ ಎಲ್ಲರಿಗೂ ಸಿಗುವಂತಾಗಬೇಕಿದೆ. ಕೆಲವು ಖಾಸಗಿ ಆಸ್ಪತ್ರೆಗಳ ಸುಲಿಗೆಗೆ ಕಡಿವಾಣ ಹಾಕಬೇಕಿದೆ. ಅಪಾರ ಅನುಭವ ಮತ್ತು ಮಾನವೀಯತೆ ಹೊಂದಿರುವ ಡಾ.ಮಂಜುನಾಥ್ ಅವರು ರಾಜಕೀಯದಲ್ಲಿ ನೆಲೆ ಊರುವುದೇ ಆದರೆ ಈ ನಿಟ್ಟಿನಲ್ಲಿ ಕೆಲಸ ಮಾಡಿ ಇತರರಿಗೆ 'ಮಾದರಿ' ರಾಜಕಾರಣಿ ಆಗಲಿ ಎನ್ನುವುದು ನಮ್ಮೆಲ್ಲರ ಆಶಯ.

–ರಾಘವೇಂದ್ರ ಜೋಯಿಸ್, ಮೈಸೂರು

■ ಕಾನೂನಿಗೆ ಅತೀತರೇ?

ಮಾನ್ಯರೆ,

ದೆಹಲಿಯ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ತಮ್ಮ ವಿರುದ್ಧ ಜಾರಿ ನಿರ್ದೇಶನಾಲಯ ಹೊರಡಿಸುತ್ತಿರುವ ಸಮನ್ಸ್‌ಗಳಿಗೆ ಗೌರವ ನೀಡದೇ ನಿರಂತರವಾಗಿ ವಿಚಾರಣೆಗೆ ಗೈರು ಹಾಜರಾಗುತ್ತಿರುವುದು ತೀವ್ರ ಖಂಡನೀಯ. ಇದುವರೆಗೂ, ಜಾರಿ ನಿರ್ದೇಶನಾಲಯ 6 ಬಾರಿ ಸಮನ್ಸ್ ನೀಡಿದ್ದರೂ ಸಹ ಅದನ್ನು ಲೆಕ್ಕಿಸದ ಕೇಜ್ರಿವಾಲ್ ತಾವು ಕಾನೂನಿಗೆ ಅತೀತರು ಎಂದು ಭಾವಿಸಿದಂತಿದೆ. ಇದೀಗ ಜಾರಿ ನಿರ್ದೇಶನಾಲಯ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಿದ್ದು, ಸರ್ವೋಚ್ಚ ನ್ಯಾಯಾಲಯ ಇದರ ಬಗ್ಗೆ ವಿಚಾರಣೆ ನಡೆಸುವ ಸಂಭವವಿದೆ.

ಮುಖ್ಯಮಂತ್ರಿ ಎಂದರೆ ರಾಜ್ಯ ಸರ್ಕಾರದ ಮುಖ್ಯಸ್ಥ. ಅವರೇ ಕಾನೂನಿಗೆ ಮಾನ್ಯತೆ ನೀಡದೇ ಹೋದರೆ, ಅವರು ಆ ಸ್ಥಾನದಲ್ಲಿ ಮುಂದುವರೆಯಲು ಅನರ್ಹರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಒಂದೇ ಕಾನೂನು. ಅದುವೇ ಕಾನೂನಾತ್ಮಕ ಆಡಳಿತ (Rule of Law). ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಮ್ಮ ವಿರುದ್ಧ ಲೋಕಾಯುಕ್ತ ಹೂಡಿದ್ದ ಪ್ರಕರಣಗಳಿಗೆ ಸಂಬಂಧಿಸಿದಂತೆ ಅನೇಕ ಬಾರಿ ತಾವೇ ಖುದ್ದಾಗಿ ನ್ಯಾಯಾಲಯಗಳಿಗೆ ಹಾಜರಾಗಿ ಕಾನೂನಿಗೆ ಗೌರವ ನೀಡಿದ್ದರು. ಜಾರಿ ನಿರ್ದೇಶನಾಲಯ ತಾನೇ ಸ್ವತಃ ನ್ಯಾಯಾಲಯವಲ್ಲವಾದರೂ ಸಹ, ಅಕ್ರಮ ಹಣ ಸಾಗಾಣಿಕೆ ಕಾಯ್ದೆ, ವಿದೇಶಿ ವಿನಿಮಯ ಕಾಯ್ದೆ ಸೇರಿದಂತೆ ಹಲವು ರೀತಿಯ ಆರ್ಥಿಕ ಅಪರಾಧಗಳ ವಿಚಾರಣೆ ನಡೆಸುವ ದೇಶಿಯ ತನಿಖಾ ಸಂಸ್ಥೆಯಾಗಿದೆ. ಇನ್ನು ಮುಂದಾದರೂ ಅರವಿಂದ ಕೇಜ್ರಿವಾಲ್ ಕಾನೂನಿಗೆ ಗೌರವ ನೀಡುವುದನ್ನು ಕಲಿತುಕೊಳ್ಳಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ಮಂಗಳಮುಖಿಯರ ಹಾವಳಿ ತಪ್ಪಿಸಿ

ಮಾನ್ಯರೆ,

ಮೈಸೂರು ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎಡಭಾಗದ ನಗರ ಬಸ್ ನಿಲ್ದಾಣದ ಕಡೆ ತೆರಳುವ ಪಾದಚಾರಿ ಮಾರ್ಗದಲ್ಲಿ ಬೆಳಗ್ಗೆಯಿಂದ ಸಾಯಂಕಾಲದವರೆಗೂ ಓಡಾಡುವ 3–4 ಮಂಗಳಮುಖಿಯರ ಗುಂಪು ಇಲ್ಲಿ ಹೋಗುವ ಸಾರ್ವಜನಿಕರನ್ನು ಅಡ್ಡಗಟ್ಟಿ ಅಸಭ್ಯವಾಗಿ ವರ್ತಿಸುತ್ತ, ಹಣ ನೀಡುವಂತೆ ಒತ್ತಾಯಿಸುತ್ತಿದ್ದಾರೆ. ಹಣ ಕೊಡದವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಇವರ ಉಪಟಳದಿಂದಾಗಿ ಈ ದಾರಿಯಲ್ಲಿ ಬರಲು ಸಭ್ಯ ನಾಗರಿಕರು ಹೆದರುವಂತಾಗಿದೆ.

ಆದ ಕಾರಣ ಸಂಬಂಧಪಟ್ಟ ಪೊಲೀಸ್ ಇಲಾಖೆ ಅಧಿಕಾರಿಗಳು ಇತ್ತ ಗಮನಹರಿಸಿ, ಆದಷ್ಟು ಶೀಘ್ರ ಈ ಪ್ರದೇಶದಲ್ಲಿ ಮಂಗಳಮುಖಿಯರ ಹಾವಳಿಯನ್ನು ತಪ್ಪಿಸಬೇಕೆಂದು ಮನವಿ.

–ಶಾರದಮ್ಮ, ಮೈಸೂರು.

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದವರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ನನಗೆ ಬರೆದ ತೃಪ್ತಿ.

10. ನಾಡಿಗ ನೀಲಕಂಠಪ್ಪ





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ: 8762788685

ಸದ್ದುಗದ್ದಲವಿಲ್ಲದೆ, ನಿಷ್ಠೆಯಿಂದ ಹಾಗೂ ಪ್ರಾಮಾಣಿಕತೆಯಿಂದ, ಸರ್ಕಾರದ ಕೆಲಸ ದೇವರ ಕೆಲಸ ಎಂದು ನಂಬಿ ಮೈಸೂರು ನಗರ ಮತ್ತು ರಾಜ್ಯದ ಏಳಿಗೆಗಾಗಿ ಅಧಿಕಾರಿಗಳು ಅಂದು ಮೈಸೂರು ಸಂಸ್ಥಾನದಲ್ಲಿ ಶ್ರಮಿಸುತ್ತಿದ್ದರು. ಹಾಗೆ ಕರ್ತವ್ಯ ಮಾಡಿದವರಲ್ಲಿ ಒಬ್ಬರು ಎನ್. ನೀಲಕಂಠಪ್ಪ. ಅರಮನೆಯ ವಿನ್ಯಾಸ ರಚಿಸಿಕೊಟ್ಟ ಕೀರ್ತಿ ಇವರದು.

ನಾಡಿಗ್ ನೀಲಕಂಠಪ್ಪನವರು ಮೈಸೂರು ಸಂಸ್ಥಾನದ ಲೋಕೋಪಯೋಗಿ ಇಲಾಖೆಯಲ್ಲಿ ಇಂಜಿನಿಯರ್ ಆಗಿ ಅನೇಕ ಜನಪರ ಅಭಿವೃದ್ಧಿ ಕೆಲಸಗಳನ್ನು ಮಾಡಿದವರು. ಹಲವಾರು ಕಡೆಗಳಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದವರು. ಅರಮನೆ ಮಾತ್ರವಲ್ಲದೆ ಚಾಮುಂಡಿ ಬೆಟ್ಟದ ಮೇಲಿರುವ ಲಲಿತಾದ್ರಿ ಮತ್ತು ಲಲಿತ ಮಹಲ್ ಅರಮನೆಯ ವಾಸ್ತುಶಿಲ್ಪದ ಕೆಲಸಗಳಲ್ಲಿ ಮಹತ್ತರ ಪಾತ್ರವಹಿಸಿದವರು. ಕೃಷ್ಣರಾಜಸಾಗರ ಅಣೆಕಟ್ಟೆ ಮತ್ತು ಶಿಂಷಾ ಜಲವಿದ್ಯುದ್ದಾಗರದ ಅಭಿವೃದ್ಧಿಯ ಕಾರ್ಯಗಳಲ್ಲಿಯೂ ಅವರ ಪಾತ್ರ ಪ್ರಮುಖವಾಗಿತ್ತು. ಕೃಷ್ಣರಾಜಸಾಗರದ ಬೃಂದಾವನದ ಅಭಿವೃದ್ಧಿ ಕಾರ್ಯಗಳೂ ಇವರ ಕಾಲದಲ್ಲಿ ನಿರ್ವಹಿಸಲ್ಪಟ್ಟಿತು. ಶಿವಮೊಗ್ಗ ಜಿಲ್ಲೆಯ ಹಿರೇಭಾಸ್ಕರ್ ಅಣೆಕಟ್ಟೆಯ ನಿರ್ಮಾಣ, ನಂದಿಬೆಟ್ಟದ ಮೇಲಿನ ಬಂಗಲೆಗೆ ಹೋಗಲು ಸೂಕ್ತ ಸಂಪರ್ಕ ರಸ್ತೆಯ ನಿರ್ಮಾಣ ಇತ್ಯಾದಿ ಕೆಲಸಗಳಲ್ಲಿಯೂ ಇವರು ಭಾಗಿಗಳಾಗಿದ್ದರು. ನಿವೃತ್ತರಾದ ಮೇಲೆ ಇವರು ಮಾಡಿದ ಒಂದು ಮಹತ್ತರ ಕಾರ್ಯವೆಂದರೆ ಮೈಸೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಶಿಕ್ಷಣ ಸಂಸ್ಥೆಯ ಸ್ಥಾಪನೆಯಾಗಲು ಕಾರಣವಾದದ್ದು. ಹೀಗೆ ನೀಲಕಂಠಪ್ಪನವರು ಹಲವಾರು ಕಾರ್ಯ ಗಳಲ್ಲಿ ದುಡಿದು ಮಹತ್ತರ ಕಾಣಿಕೆ ನೀಡಿದ್ದಾರೆ.

ರಾಜ್ಯದ ಮಲೆನಾಡಿನ ಗಡಿ ಪ್ರದೇಶದ ಶಿವಮೊಗ್ಗ ಜಿಲ್ಲೆಯ ಸೊರಬ ತಾಲೂಕಿನ ಚಿಕ್ಕ ಗ್ರಾಮವಾಗಿದ್ದ ಸೊರಬ ಗ್ರಾಮ ನಾಡಿಗ ನೀಲಕಂಠಪ್ಪನವರ ಹುಟ್ಟೂರು. 18–19ನೇ ಶತಮಾನದಲ್ಲಿ ಸೊರಬ ತಾಲೂಕು ಕೇಂದ್ರವಾಗಿದ್ದರೂ ರಾಜ್ಯದ ಗಡಿ ಅಂಚಿನ ಚಿಕ್ಕ ಗ್ರಾಮವಾಗಿತ್ತು. ಅದು ಸೂಕ್ಷ್ಮ ಕಲೆಯ ಗಂಧದ ಮರದ ಕೆಲಸ ಮಾಡುವ ಗುಡಿಗಾರರಿಗೆ ಪ್ರಸಿದ್ಧಿ. ಅಂದು ಮೈಸೂರು ಮಹಾರಾಜರ ಕಾಲದಲ್ಲಿ ಹಳೆಯ ಮೈಸೂರು ರಾಜ್ಯದಲ್ಲಿ ಶ್ಯಾನುಭೋಗ ವೃತ್ತಿ ಮಾಡುತ್ತಿದ್ದವರನ್ನು 'ನಾಡಿಗ' ಎಂದು ಕರೆಯುತ್ತಿದ್ದರಂತೆ. ಇವರಿಗೂ ಆ ಅನ್ವರ್ಥನಾಮ ಅಂಟಿಕೊಂಡು ಬಂದಿತು. ನಾಡಿಗ ಕಾಶೀರಾಯರು ಊರಿನ ಗಣ್ಯರು. ಶ್ಯಾನುಭೋಗರು ಹಾಗೂ ಜಮೀನುದಾರರು. ಆಧ್ಯಾತ್ಮಿಕ ಪ್ರವೃತ್ತಿ ಉಳ್ಳವರು. ಈ ಕಾಶೀರಾಯರು ಮತ್ತು ಅವರ ಪತ್ನಿ ಅನ್ನಪೂರ್ಣಮ್ಮನವರ ಎರಡನೇ ಪುತ್ರರಾಗಿ ನೀಲಕಂಠಪ್ಪನವರು 1894ರಲ್ಲಿ ಜನಿಸಿದರು.

ಸೊರಬದ ಸರ್ಕಾರಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಶಿಕ್ಷಣ ಮುಗಿಸಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಜಿಲ್ಲೆಗೇ ಮೊದಲಿಗರಾದರು. ಪ್ರೌಢ ಶಿಕ್ಷಣಕ್ಕಾಗಿ ಶಿವಮೊಗ್ಗೆಗೆ ಬಂದು ಎಸ್.ಎಸ್. ಎಲ್.ಸಿ. ಪರೀಕ್ಷೆಯಲ್ಲಿ ಜಿಲ್ಲೆಗೇ ಮೊದಲಿಗರಾಗಿ ತೇರ್ಗಡೆ ಹೊಂದಿದರು. ಅಲ್ಲಿಂದ ಬೆಂಗಳೂರಿಗೆ ಬಂದು ಸೆಂಟ್ರಲ್ ಕಾಲೇಜಿನಲ್ಲಿ ಪದವಿ ಪಡೆದು ಕೊಂಡರು. ಬಿ.ಎ. ಪದವಿ ಪಡೆದುಕೊಂಡ ನಂತರ ಬೆಂಗಳೂರಿನ ಸರ್ಕಾರಿ ತಾಂತ್ರಿಕ ಕಾಲೇಜಿನಲ್ಲಿ (ಈಗಿನ ಯು.ವಿ. ಸಿ.ಇ. ಕಾಲೇಜು) ಪ್ರವೇಶ ಪಡೆದು ನಾಲ್ಕು ವರ್ಷಗಳ ತಾಂತ್ರಿಕ ಶಿಕ್ಷಣ ಪಡೆದರು. 1918ರ ಬಿ.ಇ. (ಸಿವಿಲ್) ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ರಾಜ್ಯಕ್ಕೆ ಮೊದಲಿಗರಾದರು. ಶಿವಮೊಗ್ಗ ಜಿಲ್ಲೆಯಲ್ಲಿಯೇ ತಾಂತ್ರಿಕ ಪದವಿ ಪಡೆದ ಮೊದಲ ವಿದ್ಯಾರ್ಥಿಯಾದರು. ಈ ಅವಧಿಯಲ್ಲಿ ತಮ್ಮ ಗುರು ಸೆಂಟ್ರಲ್ ಕಾಲೇಜಿನಿಂದ ಪ್ರಕಟಿಸುತ್ತಿದ್ದ 'ಪ್ರಬುದ್ಧ ಕರ್ನಾಟಕ'ದ ಜನ್ಮದಾತರಾದ ಎ. ಆರ್. ಕೃಷ್ಣಶಾಸ್ತ್ರಿಗಳ ಉತ್ತೇಜನದಿಂದ ಕನ್ನಡ ಕಾವ್ಯದಲ್ಲೂ ಆಸಕ್ತಿ ಬೆಳೆಸಿಕೊಂಡರು.

ತಾಂತ್ರಿಕ ಶಿಕ್ಷಣ ಪಡೆದ ನೀಲಕಂಠಪ್ಪನವರನ್ನು ದಿವಾನರಾಗಿದ್ದ ಬ್ಯಾನರ್ಜಿ ಅವರು ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ಹುದ್ದೆಗೆ ನೇಮಿಸಿದರು. ತುಮಕೂರು, ಶಿವಮೊಗ್ಗ, ಕೊಪ್ಪ, ಸಾಗರ, ಜೋಗ್, ಚಿಕ್ಕಬಳ್ಳಾಪುರ ಮುಂತಾದ ಸ್ಥಳಗಳಲ್ಲಿ ಶ್ರದ್ಧೆಯಿಂದ ಅನೇಕ ಜನಪರ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಿದರು. ಈ ಅವಧಿಯಲ್ಲಿ ಅವರು ಶಿವಮೊಗ್ಗ ಜಿಲ್ಲೆಯ ಹಿರೇಭಾಸ್ಕರ್ ಅಣೆಕಟ್ಟೆಯ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಿದರು. ಈಗ ಈ ಅಣೆಕಟ್ಟು ಶರಾವತಿ ಹಿನ್ನೀರಿನಲ್ಲಿ ಮುಳುಗಡೆಯಾಗಿದೆ. ಇವರ ಇನ್ನೊಂದು ಪ್ರಮುಖ ಕಾರ್ಯವೆಂದರೆ ನಂದಿಬೆಟ್ಟದ ಪ್ರವಾಸಿ ಬಂಗಲೆಗೆ ಸಂಪರ್ಕ ರಸ್ತೆ ಸಮೀಕ್ಷೆ ಹಾಗೂ ನಿರ್ಮಾಣ. ನಂದಿ ಬೆಟ್ಟಕ್ಕೆ ಹೋಗಲು ಸೂಕ್ತ ರಸ್ತೆಯ ಅಗತ್ಯವನ್ನು ಮನಗಂಡು ಮಹಾರಾಜರ ಅಪೇಕ್ಷೆಯ ಮೇರೆಗೆ ಉತ್ತಮ ರಸ್ತೆಯ ಪೂರ್ವಭಾವಿ ಸಮೀಕ್ಷೆ ನಡೆಸಿ ಅದರ ನಿರ್ಮಾಣ ಕಾರ್ಯದಲ್ಲಿ ಮಹತ್ವದ ಪಾತ್ರ ವಹಿಸಿದರು. ಇವರ ಶ್ರದ್ಧೆ, ಪ್ರಾಮಾಣಿಕತೆ ಹಾಗೂ ಮುಂದಾಲೋಚನೆಗಳನ್ನು ಗಮನಿಸಿದ ದಿವಾನರು ಇವರನ್ನು ಅರಮನೆಯ ಪುನರ್‌ನಿರ್ಮಾಣದ ಕೆಲಸಕ್ಕೆ ಎರವಲು ಸೇವೆಯ ಆಧಾರದ ಮೇಲೆ ನಿಯೋಜಿಸಿದರು.

ಅರಮನೆಯ ಸಹಾಯಕ ಸಿವಿಲ್ ಇಂಜಿನಿಯರ್ ಆಗಿ ನೀಲಕಂಠಪ್ಪನವರು ಹಿರಿಯ ಇಂಜಿನಿಯರ್ ಬಾಪಟ್ ಅವರ ಪ್ರತಿ ಹೆಜ್ಜೆಯಲ್ಲಿಯೂ ನೆರವಾಗುತ್ತಿದ್ದರು. 1930–40ರ ದಶಕದಲ್ಲಿ ರಾಜ್ಯದಲ್ಲಿ ತಾಂತ್ರಿಕ ತಜ್ಞರು ಹಾಗೂ ತಾಂತ್ರಿಕ ಕೌಶಲ್ಯದ ಕೆಲಸಗಳಿಗೆ ಕೊರತೆ ಇತ್ತು. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಅಪೇಕ್ಷೆಯಂತೆ ದೇಶ, ವಿದೇಶಗಳಿಂದ ತಾಂತ್ರಿಕ ಪರಿಣಿತರನ್ನು ಬರಮಾಡಿಕೊಂಡರು. ಅಂತೆಯೇ ಹೊರ ರಾಜ್ಯಗಳಿಂದ ತಾಂತ್ರಿಕ ಕೌಶಲ್ಯವುಳ್ಳ ಕೆಲಸಗಾರರನ್ನು ಕರೆಸಿದರು. ವಿಶಾಲ ವಿನ್ಯಾಸದ ದರ್ಬಾರ್ ಸಭಾಂಗಣವನ್ನು ನಿರ್ಮಿಸುವ ಕಾರ್ಯದಲ್ಲಿ ಮಹತ್ತರ ಪಾತ್ರ ವಹಿಸಿದರು. ಸಭಾಂಗಣದ ಸೂಕ್ಷ್ಮ ಕೆತ್ತನೆಯ ಕುಶಲ ಕೆಲಸಗಳಿಗೆ ತಮ್ಮ ಊರಿನ ಸೂಕ್ಷ್ಮ ಕೆತ್ತನೆಗೆ ಹೆಸರಾದ ಕುಶಲಕರ್ಮಿಗಳನ್ನು ಬರಮಾಡಿಕೊಂಡರು. ಚಿತ್ತಾಕರ್ಷಕವಾದ, ಸೂಕ್ಷ್ಮ ಕೆತ್ತನೆಯ ಕೆಲಸಗಳನ್ನು ಮಾಡಲು ನಿಯೋಜಿಸಿದರು. ಅರಮನೆಗೆ ಹೋದಾಗ ಒಂದೊಂದು ಬಾಗಿಲೂ ಆಕರ್ಷಕವಾಗಿರುವುದನ್ನು ನೋಡಬಹುದು. ದರ್ಬಾರ್ ಹಾಲಿನ ವಿನ್ಯಾಸ, ಸೂಕ್ಷ್ಮ ಕೆತ್ತನೆ, ಕುಸರಿ ಕೆಲಸದ ಅಲಂಕಾರವನ್ನು ಗಮನಿಸಬಹುದು. ಈ ಕಾರ್ಯ ಇಂದು ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಅಲ್ಲಿಗೆ ಹೋಗಿ ಇದರ ಸೌಂದರ್ಯವನ್ನು ವೀಕ್ಷಿಸುವವರು ಅದನ್ನು ಮೆಚ್ಚದೆ ಇರುವುದಿಲ್ಲ. ಪ್ರಶಂಸಿಸದೆ ಇರುವುದಿಲ್ಲ. ಅರಮನೆಯ ಸಹಾಯಕ ಇಂಜಿನಿಯರ್ ಆಗಿ ಶ್ರಮಿಸಿದ ಇವರ ಹೆಸರು ಅರಮನೆಯ ಮುಂಭಾಗದಲ್ಲಿ ಅಳವಡಿಸಿರುವ ಶಿಲಾಫಲಕದಲ್ಲಿ ಶಾಶ್ವತವಾಗಿ ರಾರಾಜಿಸುತ್ತಿದೆ.

ಅರಮನೆಯಲ್ಲದೆ ಚಾಮುಂಡಿ ಬೆಟ್ಟದ ಮೇಲಿರುವ ಲಲಿತಾದ್ರಿ ಅರಮನೆ, ಬೆಟ್ಟದ ತಪ್ಪಲಿನಲ್ಲಿರುವ ಲಲಿತ ಮಹಲ್, ಊಟಿ ಅರಮನೆಯ ಅಭಿವೃದ್ಧಿ ಕೆಲಸಗಳಿಗೂ ನೀಲಕಂಠಪ್ಪನವರ ಸೇವೆಯನ್ನು ಪಡೆಯಲಾಯಿತು. ಮಹಾರಾಜರ ಅಗತ್ಯಕ್ಕೆ ತಕ್ಕಂತೆ, ಅವರ ಅಪೇಕ್ಷೆಯಂತೆ ಆ ಫರ್ನ್ ಹಿಲ್ ಅರಮನೆಯ ಕೆಲಸಗಳನ್ನು ನಿರ್ವಹಿಸಿ ಅವರ ಮೆಚ್ಚುಗೆಗೆ ಪಾತ್ರರಾದರು. 1935ರಿಂದ 1937ರವರೆಗೆ ಮೈಸೂರು ನಗರಾಭಿವೃದ್ಧಿ ಮಂಡಳಿಯ ಇಂಜಿನಿಯರ್ ಆಗಿ ಸೇವೆ ಮಾಡಿದರು. ಇವರ ಅವಧಿಯಲ್ಲಿ ಸರಸ್ವತಿಪುರಂ, ಯಾದವಗಿರಿ ಮತ್ತಿತರ ಹೊಸ ಬಡಾವಣೆಗಳು ರೂಪುಗೊಂಡವು. ಇತರೆ ಹಲವಾರು ಅಭಿವೃದ್ಧಿ ಕಾರ್ಯಗಳಿಗೆ ಅವರು ಕಾರಣಕರ್ತರಾದರು.

1947ರಲ್ಲಿ ಅರಮನೆಯ ಕೆಲಸಗಳಿಂದ ಬಿಡುಗಡೆಯಾದ ನೀಲಕಂಠಪ್ಪನವರು ತಮ್ಮ ಮಾತೃ ಇಲಾಖೆಗೆ ಹಿಂತಿರುಗಿದರು. ನಂತರ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿ ಬಡ್ತಿ ಪಡೆದರು. ಕೃಷ್ಣರಾಜ ಸಾಗರ ಅಣೆಕಟ್ಟು, ಶಿಂಷಾ ಜಲವಿದ್ಯುದ್ದಾಗರದ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿದರು. ಕೃಷ್ಣರಾಜ ಸಾಗರದ ಅಣೆಕಟ್ಟಿನ ಕೆಳಭಾಗದಲ್ಲಿನ ಬೃಂದಾವನದ ಅಭಿವೃದ್ಧಿಯೂ ಇವರ ಕಾಲದಲ್ಲಿ ಜರುಗಿತು.

ಅಯೋಧ್ಯೆ ರೈಲಿನಲ್ಲಿ ದಾಂಧಲೆ ಖಂಡಿಸಿ ಮೈಸೂರು ಭಾಗದ ರಾಮಭಕ್ತರಿಂದ ಹೊಸಪೇಟೆ ಜಂಕ್ಷನ್‌ನಲ್ಲಿ ಘೋಷಣೆ

ಮೈಸೂರು, ಫೆ.23(ಎಸ್‌ಬಿಡಿ)– ಅಯೋಧ್ಯೆಯಿಂದ ವಾಪಸ್ಸಾಗುತ್ತಿದ್ದ ವಿಶೇಷ ರೈಲಿಗೆ ವಿಜಯನಗರ ಜಿಲ್ಲೆ ಹೊಸಪೇಟೆ ಜಂಕ್ಷನ್‌ನಲ್ಲಿ ಕೆಲ ಯುವಕರು ಹತ್ತಿ ಬೆದರಿಕೆ ಹಾಕಿದ್ದಾರೆಂದು ಮತ್ತೊಂದು ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಮೈಸೂರು ಭಾಗದ ರಾಮಭಕ್ತರು ಅದೇ ಜಂಕ್ಷನ್‌ನಲ್ಲಿ ಶುಕ್ರವಾರ ಜೈ ಶ್ರೀರಾಮ್ ಘೋಷಣೆ ಮೊಳಗಿಸಿದ್ದಾರೆ.

ಮೈಸೂರು ಜಂಕ್ಷನ್‌ನಿಂದ ಫೆ.17ರ ರಾತ್ರಿ ಅಯೋಧ್ಯೆಗೆ ತೆರಳಿದ್ದ ಮೈಸೂರು, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳ ಸಾವಿರಾರು ಮಂದಿ ವಾಪಸ್ಸಾಗುತ್ತಿದ್ದು, ಮಾರ್ಗ ಮಧ್ಯೆ ಹೊಸಪೇಟೆ ಜಂಕ್ಷನ್‌ನಲ್ಲಿ ನಿಲುಗಡೆ ನೀಡಿದ್ದ ಸಂದರ್ಭದಲ್ಲಿ ರೈಲಿನಿಂದಿಳಿದು ರಾಮ ಭಜನೆ ಹಾಗೂ ಜೈ ಶ್ರೀರಾಮ್ ಘೋಷಣೆ ಮೊಳಗಿಸಿದ್ದಾರೆ. ನಿನ್ನೆ ಇದೇ ಜಂಕ್ಷನ್‌ನಲ್ಲಿ ರೈಲಿಗೆ ಬೆಂಕಿ ಹಚ್ಚುವುದಾಗಿ ಬೆದರಿಕೆ ಹಾಕಿರುವ ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಮೈಸೂರು ಭಾಗದ ರಾಮಭಕ್ತರು ಹೊಸಪೇಟೆ ಜಂಕ್ಷನ್‌ನಲ್ಲಿ ಘೋಷಣೆ ಕೂಗಿದರು.

ಹೊಸಪೇಟೆಯಲ್ಲಿ ನಿನ್ನೆ ಗಲಾಟೆ ನಡೆದಿದ್ದರಿಂದ ಹೊಸಪೇಟೆ ಜಂಕ್ಷನ್‌ನಲ್ಲಿ ಭಾರೀ ಬಂದೋಬಸ್ತ್ ಮಾಡಲಾಗಿತ್ತು. ಅಯೋಧ್ಯೆ ವಿಶೇಷ ರೈಲು ಸಂಚರಿಸುವ ಸಂದರ್ಭದಲ್ಲಿ ನಿಲ್ದಾಣದ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸಲಾಗಿತ್ತು. ಅಯೋಧ್ಯೆ ಪ್ರವಾಸದ ಗುರುತಿನ ಚೀಟಿ ಇಲ್ಲದ ಯಾರನ್ನೂ ರೈಲಿನ ಬಳಿ ಬಿಟ್ಟಿರಲಿಲ್ಲ. ರೈಲು ಹಳಿಯಲ್ಲಿ ಸಾಲಾಗಿ ಪೊಲೀಸರನ್ನು ನಿಯೋಜಿಸಲಾಗಿತ್ತು ಎಂದು ಮೈಸೂರಿನ ಮಾಜಿ ಕಾರ್ಪೊರೇಟರ್ ಬಿ.ವಿ.ಮಂಜುನಾಥ್ ತಿಳಿಸಿದ್ದಾರೆ.

ಬೆಳಗ್ಗೆ 7ಕ್ಕೆ ಆಗಮನ: ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಯಿಂದ ಅಯೋಧ್ಯೆಗೆ ತೆರಳಿದ್ದ ಒಟ್ಟು 1330 ಮಂದಿ ಶನಿವಾರ ಬೆಳಗ್ಗೆ 7ಕ್ಕೆ ಮೈಸೂರು ರೈಲು ನಿಲ್ದಾಣಕ್ಕೆ ಆಗಮಿಸಲಿದ್ದು, ಮೈಸೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಬಿಜೆಪಿ ಪದಾಧಿಕಾರಿಗಳು, ಸಂಸದರು, ಹಾಲಿ ಹಾಗೂ ಮಾಜಿ ಶಾಸಕರು, ಕಾರ್ಯಕರ್ತರು ರಾಮಭಕ್ತರನ್ನು ಬರಮಾಡಿಕೊಳ್ಳಲಿದ್ದಾರೆ ಎಂದು ಪ್ರವಾಸ ಸಂಚಾಲಕ ಡಾ.ಕೆ.ವಸಂತಕುಮಾರ್ ತಿಳಿಸಿದ್ದಾರೆ.

ನಿಂತಿದ್ದ ಲಾರಿಗೆ ಕಾರು ಡಿಕ್ಕಿ: ಮೆಕ್ಯಾನಿಕ್ ಸಾವು



ಗೋಣಿಕೊಪ್ಪ, ಫೆ.23–ರಸ್ತೆಬದಿ ನಿಂತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಮೆಕ್ಯಾನಿಕ್ ಸ್ಥಳದಲ್ಲೇ ಮೃತಪಟ್ಟ ಘಟನೆ ಗುರುವಾರ ರಾತ್ರಿ ಪಟ್ಟಣದಲ್ಲಿ ನಡೆದಿದೆ.

ಗೋಣಿಕೊಪ್ಪ ನಿವಾಸಿ ಮೆಕ್ಯಾನಿಕ್ ಶಾಜಿ ಆಂಥೋನಿ (45) ಮೃತಪಟ್ಟಿದ್ದು, ಈತನ ಪತ್ನಿ ಹಾಗೂ ಮಗಳು ಸಣ್ಣಪುಟ್ಟ ಗಾಯಗೊಂಡು ಆಸ್ಪತ್ರೆಗೆ ದಾಖಲಿಸಲಾಗಿದ್ದಾರೆ. ಶಾಜಿ ಆಂಥೋನಿ ಗುರುವಾರ ರಾತ್ರಿ ತಮ್ಮ ಕಾರಿನಲ್ಲಿ ಕುಟುಂಬದೊಂದಿಗೆ ಮೈಸೂರಿಗೆ ಹೋಗಿ ಬರುತ್ತಿದ್ದಾಗ ವೀರಾಜಪೇಟೆ–ಗೋಣಿಕೊಪ್ಪ ರಸ್ತೆಬದಿ ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ತಲೆಗೆ ತೀವ್ರ ಪೆಟ್ಟುಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪತ್ನಿ ಮತ್ತು ಮಗಳಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಗೋಣಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಗ್ನಿ ಅವಘಡಗಳ ಬಗ್ಗೆ ಪ್ರಾತ್ಯಕ್ಷಿಕೆಯೊಂದಿಗೆ ಜಾಗೃತಿ

ಮೈಸೂರು, ಫೆ.23(ಎಸ್‌ಬಿಡಿ)– ಅಗ್ನಿ ಅವಘಡಗಳ ಅರಿವು ಮತ್ತು ಅಗ್ನಿ ಅನಾಹುತ ತಡೆಗಟ್ಟುವ ದಿನಾಚರಣೆ ಅಂಗವಾಗಿ ಜಿಲ್ಲೆಯ ವಿವಿಧೆಡೆ ಪ್ರಾತ್ಯಕ್ಷಿಕೆಯೊಂದಿಗೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಶಾಲಾ–ಕಾಲೇಜುಗಳು, ಬಸ್ ನಿಲ್ದಾಣ, ವಸತಿ ಹಾಗೂ ಕೈಗಾರಿಕಾ ಪ್ರದೇಶಗಳು ಸೇರಿದಂತೆ ಜನಸಂದಣಿ ಇರುವ ಸ್ಥಳಗಳಲ್ಲಿ ಅಗ್ನಿ ಅನಾಹುತ ಹಾಗೂ ಅದನ್ನು ತಡೆಗಟ್ಟು ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಮಾಹಿತಿಯನ್ನೊಳಗೊಂಡ ಬಿತ್ತಿಪತ್ರ ಪ್ರದರ್ಶಿಸಿ, ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ.ಗುರುರಾಜ್ ಮಾತನಾಡಿ, ಯಾವುದೇ ರೀತಿಯ ಅನಾಹುತ ಹಾಗೂ ಪ್ರಕೃತಿ ವಿಕೋಪಗಳು ಸಂಭವಿಸಿದಾಗ ಆತಂಕಕ್ಕೀಡಾಗುವುದು ಸಹಜ. ಆದರೆ ಧೃತಿಗೆಟ್ಟು ಅವಸರದಲ್ಲಿ ಯಾವುದೇ ಅಪಾಯದ ನಿರ್ಧಾರಗಳಿಗೆ ಮುಂದಾಗಬಾರದು. ಅಂತಹ ಸಂದರ್ಭದಲ್ಲಿ ಕೂಡಲೇ ಅಗ್ನಿಶಾಮಕ ಸೇವೆಗೆ ಮಾಹಿತಿ ನೀಡಬೇಕು. ಎಲ್ಲರ ರಕ್ಷಣೆಗೆ ಅಗ್ನಿಶಾಮಕ ಇಲಾಖೆ ಸದಾ ಕಟಿಬದ್ಧವಾಗಿದೆ. ವಿಷಯ ತಿಳಿದ ಕೂಡಲೇ ನಮ್ಮ ಅಧಿಕಾರಿಗಳು ಹಾಗೂ ಸಿಬ್ಬಂದಿ, ಅಗ್ನಿಶಾಮಕ ವಾಹನಗಳೊಂದಿಗೆ ರಕ್ಷಣೆಗೆ ದಾವಿಸುತ್ತಾರೆ ಎಂದು ತಿಳಿಸಿದರು.



ಅಗ್ನಿ ಅನಾಹುತ ತಡೆಗಟ್ಟುವ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು.

ಅಗ್ನಿ ಅವಘಡ ಸಂಭವಿಸಿದಾಗ ಅದನ್ನು ಸೂಕ್ತ ರೀತಿಯಲ್ಲಿ ನಿಯಂತ್ರಿಸಲು ಹಾಗೂ ಜೀವಾಪಾಯದಿಂದ ಪಾರಾಗಲು ಪ್ರಯತ್ನಿಸಬಹುದು. ಆದರೆ ಆತುರಾತುರವಾಗಿ ಕಟ್ಟಡದ ಮಹಡಿಗಳಿಂದ ಜಿಗಿಯುವುದು, ನೀರಿಗೆ ಹಾರುವುದು, ಇಂತಹ ಅಪಾಯಕಾರಿ ಕ್ರಮಕ್ಕೆ ಮುಂದಾಗಿ ಜೀವಕ್ಕೆ ಕುತ್ತು ತಂದುಕೊಳ್ಳಬಾರದು. ಯಾವುದೇ ಅನಾಹುತ ಸಂಭವಿಸಿದ ನಂತರ ಪರಿಹಾರ ಕ್ರಮಗಳ ಬಗ್ಗೆ ಚಿಂತಿಸುವುದಕ್ಕಿಂತ ಅವಘಡ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸುವುದು ಬಹಳ ಮುಖ್ಯ ಎಂದು ಸಲಹೆ ನೀಡಿದರು.

ಬೆಂಗಳೂರಿನ ಕಾರ್ಟನ್ ಟವರ್ ಬಹು ಮಹಡಿ ಕಟ್ಟಡದಲ್ಲಿ 2010ರ ಫೆಬ್ರವರಿ 23ರಂದು ಸಂಭವಿಸಿದ ಅಗ್ನಿ ದುರಂತದಲ್ಲಿ 9 ಮಂದಿ ಮೃತಪಟ್ಟು, ಸುಮಾರು 50 ಜನ ಗಾಯಗೊಂಡರು.

> ಸಣ್ಣ ನಿರ್ಲಕ್ಷ ದೊಡ್ಡ ಅನಾಹುತಕ್ಕೆ ಕಾರಣವಾಗುತ್ತದೆ. ಎಲ್ಲೆಂದರಲ್ಲಿ ತ್ಯಾಜ್ಯಕ್ಕೆ ಬೆಂಕಿ ಹಾಕಬೇಡಿ. ಶಾಲಾ–ಕಾಲೇಜು, ಕಂಪನಿಗಳು, ಕೈಗಾರಿಕೆಗಳಲ್ಲಿ ಬೆಂಕಿ ನಂದಿಸುವ ವ್ಯವಸ್ಥೆಯ ಸ್ಥಿತಿಯನ್ನು ಖಚಿತಪಡಿಸಿಕೊಳ್ಳಿ. ಹಳ್ಳಿಗಳಲ್ಲಿ ಮೇವಿನ ಗುಡ್ಡೆಗಳಿಗೆ ಬೆಂಕಿ ತಾಕದಂತೆ ಎಚ್ಚರ ವಹಿಸಿ. ಮುಂಜಾಗ್ರತೆಯಿಂದ ಅಪಾಯಗಳನ್ನು ತಪ್ಪಿಸಬಹುದು.
>
> –ಕೆ.ಪಿ.ಗುರುರಾಜ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ

ಆ ಕರಾಳ ಘಟನೆಯನ್ನು ಸ್ಮರಿಸಿಕೊಳ್ಳುವುದರೊಂದಿಗೆ ಅಗ್ನಿ ಅವಘಡಗಳ ಬಗ್ಗೆ ಮುನ್ನೆಚ್ಚರಿಕೆಯ ಅಗತ್ಯತೆ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಫೆ.23ರಂದು ಅಗ್ನಿ ಅವಘಡಗಳ ಅರಿವು ಮತ್ತು ಅಗ್ನಿ ಅನಾಹುತ ತಡೆಗಟ್ಟುವ ದಿನವನ್ನಾಗಿ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ ವತಿಯಿಂದ ರಾಜ್ಯಾದ್ಯಂತ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಚೆಲುವಾಂಬ ಆಸ್ಪತ್ರೆಯಲ್ಲಿ 'ಹ್ಯೂಮನ್ ಮಿಲ್ಕ್ ಬ್ಯಾಂಕ್' ಸ್ಥಾಪನೆಗೆ ಸಿದ್ಧತೆ

● ಅವಧಿಪೂರ್ವ ಜನಿಸುವ ಶಿಶುಗಳು ಸೇರಿ ಎಲ್ಲಾ ಮಕ್ಕಳಿಗೂ ತಾಯಿ ಹಾಲಿನ ಪೌಷ್ಠಿಕತೆ ಕಲ್ಪಿಸುವ ಮಹಾ ಯೋಜನೆ ● ಸ್ಥಳ ಗುರುತಿಸುವ ಕಾರ್ಯಕ್ಕೆ ಚಾಲನೆ; ಈ ಮೊದಲೇ ಸ್ಥಾಪನೆ ಅವಕಾಶ ಕೈತಪ್ಪಿತ್ತು ● ಈ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪಿಸಿದಂತೆ ಯೋಜನೆ ಜಾರಿಗೆ ಪ್ರಕ್ರಿಯೆ ಆರಂಭ



ಮೈಸೂರು, ಫೆ.23(ಎಸ್‌ಬಿಡಿ)– ಅವಧಿಗೂ ಮುನ್ನ ಜನಿಸುವ ಶಿಶುಗಳಿಗೆ ಜೀವ ರಕ್ಷಕವಾದ ತಾಯಿಯ ಎದೆ ಹಾಲು ಕಲ್ಪಿಸುವ 'ಹ್ಯೂಮನ್ ಮಿಲ್ಕ್ ಬ್ಯಾಂಕ್' ಮೈಸೂರಿನ ಚೆಲುವಾಂಬ ಮಕ್ಕಳ ಆಸ್ಪತ್ರೆಯಲ್ಲಿ ಆರಂಭವಾಗಲಿದೆ.

ಜಿಲ್ಲೆಯಲ್ಲಿ ಶೇ.22–25 ಶಿಶುಗಳು ವಿವಿಧ ಕಾರಣಗಳಿಂದ ಅವಧಿಗೂ ಮುನ್ನವೇ ಜನಿಸುತ್ತಿವೆ. ಹೀಗೆ ಜನಿಸುವ ಎಲ್ಲಾ ಮಕ್ಕಳಿಗೂ ಎದೆ ಹಾಲು ಕುಡಿಯುವ ಶಕ್ತಿ ಇರುವುದಿಲ್ಲ. ಅಲ್ಲದೆ ತಾಯಂದಿರಲ್ಲೂ ಎದೆ ಹಾಲು ಉತ್ಪತ್ತಿ ಕಡಿಮೆಯಾಗಿರುತ್ತದೆ. ಇಂತಹ ಮಕ್ಕಳಿಗೆ ಪೌಡರ್ ಹಾಲಿನ ಬದಲಾಗಿ ಪೌಷ್ಠಿಕ ಎದೆ ಹಾಲು ಕಲ್ಪಿಸಲು ಹ್ಯೂಮನ್ ಮಿಲ್ಕ್ ಬ್ಯಾಂಕ್ ನೆರವಾಗಲಿದೆ.

ರಾಜ್ಯ ಬಜೆಟ್‌ನಲ್ಲಿ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ವೈದ್ಯಕೀಯ ಕಾಲೇಜುಗಳನ್ನು ಹೊಂದಿರುವ ಎಲ್ಲಾ ಜಿಲ್ಲೆಗಳಲ್ಲೂ ಹ್ಯೂಮನ್ ಮಿಲ್ಕ್ ಬ್ಯಾಂಕ್ ಆರಂಭಿಸಲು ನಿರ್ಧರಿಸಿ, ಸೂಕ್ತ ಸ್ಥಳ ಗುರುತಿಸಲು ಸೂಚನೆ ನೀಡಿದೆ. ಸದ್ಯ ಚೆಲುವಾಂಬ ಆಸ್ಪತ್ರೆಯಲ್ಲಿ ಘಟಕ ಆರಂಭಿಸುವ ಚಿಂತನೆಯಿದೆ. ಈ ನಿಟ್ಟಿನಲ್ಲಿ ಅವಧಿಗೂ ಮುನ್ನ ಶಿಶುಗಳಿಗೆ ನಿಗಾ ವಹಿಸುವ ಎನ್‌ಐಸಿಯು ಬಳಿಯೇ ಹ್ಯೂಮನ್ ಮಿಲ್ಕ್ ಬ್ಯಾಂಕ್‌ಗೆ ಸ್ಥಳ ಗುರುತಿಸಲಾಗಿದೆ. ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ ಬಳಿಕ ಶೀಘ್ರದಲ್ಲೇ ಈ ಘಟಕ ಕಾರ್ಯಾರಂಭಿಸಲಿದೆ.

ಮೊದಲ ಘಟಕ ಕೈತಪ್ಪಿತ್ತು: ಎರಡು ವರ್ಷಗಳ ಹಿಂದೆಯೇ ಚೆಲುವಾಂಬ ಮಕ್ಕಳ ಆಸ್ಪತ್ರೆಯಲ್ಲಿ ರಾಜ್ಯದ ಮೊದಲ ಹ್ಯೂಮನ್ ಮಿಲ್ಕ್ ಬ್ಯಾಂಕ್ ಸ್ಥಾಪನೆಯಾಗುವ ಅವಕಾಶವಿತ್ತು. ಇದಕ್ಕಾಗಿ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಯತ್ನ ನಡೆಸಿತ್ತಾದರೂ ಕಾರಣಾಂತರಗಳಿಂದ ಅವಕಾಶ ಕೈತಪ್ಪಿತು. ಪರಿಣಾಮ ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಮೊದಲ ಘಟಕ ಆರಂಭವಾಯಿತು. ಸದ್ಯ ಎರಡನೇ ಘಟಕ ಮೈಸೂರಿಗೆ ಲಭ್ಯವಾಗಿದ್ದು, ಜಾಗ ಗುರುತಿಸಿ ಯೋಜನೆಯ ಅಂದಾಜು ಪಟ್ಟಿ ಒಳಗೊಂಡ ವಿಸ್ತೃತ ಪ್ರಸ್ತಾವನೆ ಸಲ್ಲಿಸಲು ಕ್ರಮ ವಹಿಸಲಾಗಿದೆ.

ಮಿಲ್ಕ್ ಬ್ಯಾಂಕ್ ಅಗತ್ಯವೇನು?: ಅವಧಿಗೂ ಮುನ್ನ ಜನಿಸುವ ಶಿಶುಗಳ ತೂಕ ಕಡಿಮೆ ಇರುತ್ತದೆ. ಅಲ್ಲದೆ ತಾಯಿಯ ಎದೆಹಾಲು ಕುಡಿಯುವ ಶಕ್ತಿ ಇರುವುದಿಲ್ಲ. ಎದೆ ಹಾಲನ್ನು ನೇರವಾಗಿ ಗುಟುಕಿಸಲು ಸಾಧ್ಯವಾಗುವುದಿಲ್ಲ. ಅಂತಹ ಮಕ್ಕಳಿಗೆ ಎನ್‌ಐಸಿಯು ಘಟಕದಲ್ಲಿ ತೀವ್ರ ನಿಗಾ ವಹಿಸಿ ಹಂತ ಹಂತವಾಗಿ ಹಾಲು ಕುಡಿಯುವಂತೆ ಚಿಕಿತ್ಸೆ ನೀಡಲಾಗುತ್ತದೆ. ಆದರೆ ಅದೆಷ್ಟೋ ತಾಯಂದಿರಲ್ಲಿ ಮಗುವಿಗೆ ಬೇಕಾದಷ್ಟು ಹಾಲು ಉತ್ಪತ್ತಿಯಾಗುವುದಿಲ್ಲ ಹಾಗಾಗಿ ಅನಿವಾರ್ಯವಾಗಿ ಪೌಡರ್ ಹಾಲಿನ ಮೊರೆ ಹೋಗಬೇಕಾಗುತ್ತದೆ. ಆಸ್ಪತ್ರೆಯಲ್ಲೂ ಪೌಡರ್ ಹಾಲನ್ನೇ ನೀಡಬೇಕಾಗುತ್ತದೆ. ಇದಕ್ಕೆ ಬೆಲೆಯೂ ಹೆಚ್ಚು ಅಲ್ಲದೆ ತಾಯಿ ಹಾಲಿನಷ್ಟು ಪೌಷ್ಠಿಕಾಂಶ ಯುಕ್ತವಲ್ಲ. ಏಳು ತಿಂಗಳಿಗೆ ಜನಿಸುವ ಮಗುವಿಗೆ 1–2 ತಿಂಗಳವರೆಗೆ ತಾಯಿ ಎದೆ ಹಾಲು ಅಗತ್ಯವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಸಹಜ ಹೆರಿಗೆಯಾಗಿರುವ ಆರೋಗ್ಯವಂತ ತಾಯಿಯ ಹೆಚ್ಚುವರಿ ಹಾಲನ್ನು ಸಮರ್ಪಕ ರೀತಿಯಲ್ಲಿ ಸಂಗ್ರಹಿಸಿಟ್ಟರೆ, ಇಂತಹ ಮಕ್ಕಳಿಗೆ ನೀಡಬಹುದಾಗಿದೆ.

ದಾನಿಗಳು ಮುಖ್ಯ: ರಕ್ತ ನಿಧಿ ಘಟಕದ ಮಾದರಿಯಲ್ಲಿಯೇ ಹ್ಯೂಮನ್ ಮಿಲ್ಕ್ ಬ್ಯಾಂಕ್ ಕಾರ್ಯ ನಿರ್ವಹಿಸುತ್ತವೆ. ತಾಯಂದಿರಿಗೆ ಅರಿವು ಮೂಡಿಸಿ, ಅವರಿಂದ ಹಾಲನ್ನು ದಾನ ಪಡೆಯಲಾಗುತ್ತದೆ. ದಾನಿಗಳ ಕೆಲ ಪರೀಕ್ಷೆಗಳಿಗೆ ಒಳಪಡಿಸಿ ಆರೋಗ್ಯವಂತ ತಾಯಿಯಿಂದ ಪಡೆದ ಹಾಲನ್ನೂ ಹಲವು ಹಂತಗಳಲ್ಲಿ ಸಂಸ್ಕರಿಸಿ, ಸಂಗ್ರಹಿಸಲಾಗುತ್ತದೆ. ತರಬೇತಿ ಪಡೆದ ಸಿಬ್ಬಂದಿ ಇಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಖಾಸಗಿ ಆಸ್ಪತ್ರೆಗಳಲ್ಲಿರುವ ಇಂತಹ ಶಿಶುಗಳಿಗೂ ಈ ಹ್ಯೂಮನ್ ಮಿಲ್ಕ್ ಬ್ಯಾಂಕ್‌ನಿಂದ ನಿಯಮಾನುಸಾರ ಹಾಲು ಪಡೆದು ಕೊಳ್ಳಬಹುದು. ಉಚಿತವಾಗಿ ತಾಯಿಯ ಪೌಷ್ಠಿಕ ಹಾಲು ಲಭ್ಯವಾಗುವುದರಿಂದ ದುಬಾರಿ ಪೌಡರ್‌ಗಳನ್ನು ಕೊಳ್ಳುವ ಅವಶ್ಯಕತೆ ಎದುರಾಗುವುದಿಲ್ಲ ಈ ವ್ಯವಸ್ಥೆಯಿಂದ ಹಲವು ಶಿಶುಗಳು ಆರೋಗ್ಯವಂತರಾಗಿ ಬೆಳೆಯಲು ಸಹಾಯವಾಗುತ್ತದೆ.



ಹ್ಯೂಮನ್ ಮಿಲ್ಕ್ ಬ್ಯಾಂಕ್‌ಗೆ ಸೂಕ್ತವಾದ ಜಾಗವನ್ನು ನಿಗದಿಪಡಿಸುವಂತೆ ವೈದ್ಯಕೀಯ ಶಿಕ್ಷಣ ಇಲಾಖೆ ಸೂಚಿಸಿದೆ. ಈ ನಿಟ್ಟಿನಲ್ಲಿ ಹೆರಿಗೆ ವಾರ್ಡ್ ಅಥವಾ ಎನ್‌ಐಸಿಯು ಘಟಕದ ಬಳಿ ಸ್ಥಳ ಪರಿಶೀಲಿಸಲಾಗಿದ್ದು, ಒಂದು ಜಾಗವನ್ನು ಅಂತಿಮಗೊಳಿಸಲಾಗುವುದು. ಈ ಬ್ಯಾಂಕ್‌ನಿಂದ ಅವಧಿಗೆ ಮುನ್ನ ಜನಿಸುವ ಶಿಶುಗಳು, ಹಾಲು ಉತ್ಪತ್ತಿಯಾಗದ ತಾಯಂದಿರ ಶಿಶುಗಳಿಗೆ ಅನುಕೂಲವಾಗಲಿದೆ. ಖಾಸಗಿ ಆಸ್ಪತ್ರೆಗಳಿಗೂ ನಿಯಮಾನುಸಾರ ಉಚಿತವಾಗಿ ತೆಗೆದುಕೊಂಡು ಹೋಗಲು ಅವಕಾಶವಿರುತ್ತದೆ.

-ಡಾ.ರಾಜೇಂದ್ರ ಕುಮಾರ್, ವೈದ್ಯಕೀಯ ಅಧೀಕ್ಷಕ, ಚೆಲುವಾಂಬ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆ

ಬೋಗಾದಿ ಪಪಂಗೆ 7.69 ಲಕ್ಷ ರೂ.ಗಳ ಉಳಿತಾಯ ಬಜೆಟ್



ಮೈಸೂರು, ಫೆ. 23– ಬೋಗಾದಿ ಪಟ್ಟಣ ಪಂಚಾಯಿತಿಗೆ 7.69 ಲಕ್ಷ ರೂ. ಉಳಿತಾಯ ಬಜೆಟ್ ಮಂಡಿಸಲಾಗಿದೆ.

ಪಟ್ಟಣ ಪಂಚಾಯಿತಿಯ ಆಡಳಿತಾಧಿಕಾರಿ ಕೆ.ಎ. ಮಹೇಶ್‌ಕುಮಾರ್ ಅವರು ಇಂದು ನಡೆದ ಬಜೆಟ್ ಸಭೆಯಲ್ಲಿ 2024–25ನೇ ಸಾಲಿನ ಬಜೆಟ್ ಮಂಡಿಸಿದರು.


ಪಟ್ಟಣ ಪಂಚಾಯಿತಿಗೆ 716.44 ಲಕ್ಷ ರೂ. ಆದಾಯವನ್ನು ನಿರೀಕ್ಷಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 1,227 ಲಕ್ಷ ರೂ. ಸೇರಿದಂತೆ ಪಪಂನ ಒಟ್ಟು ಆದಾಯ 1943.44 ಲಕ್ಷ ರೂ. ನಿರೀಕ್ಷಿಸಿರುವುದಾಗಿ ಅವರು ತಮ್ಮ ಬಜೆಟ್‌ನಲ್ಲಿ ತಿಳಿಸಿದ್ದಾರೆ.

ನಾಗರಿಕ ಸೌಕರ್ಯಗಳು, ಒಳಚರಂಡಿ ವ್ಯವಸ್ಥೆ, ನೀರು ಸರಬರಾಜು, ದುರಸ್ತಿ ನಿರ್ವಹಣೆ, ನೈರ್ಮಲ್ಯ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆ, ಸಾರ್ವಜನಿಕ ಆರೋಗ್ಯ, ಬೀದಿ ದೀಪ ನಿರ್ವಹಣೆ, ರಸ್ತೆ–ಚರಂಡಿ ದುರಸ್ತಿ, ಕಚೇರಿ ವೆಚ್ಚಗಳು, ಹೊರ ಗುತ್ತಿಗೆ ಕಾರ್ಯಾಚರಣೆ, ರಾಷ್ಟ್ರೀಯ ಹಬ್ಬ, ಯುಜಿಡಿ ದುರಸ್ತಿ, ವೇತನ ಹಾಗೂ ಭತ್ಯೆ, ಜನಗಣತಿ ವೆಚ್ಚ ಹಾಗೂ ಇತರ ವೆಚ್ಚಗಳಿಗಾಗಿ 551.40 ಲಕ್ಷ ರೂ. ಮೀಸಲಿಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಧಿ (ಶೇ. 24.10), ಇತರ ಹಿಂದುಳಿದ ವರ್ಗಗಳ ಕಲ್ಯಾಣ ಅಭಿವೃದ್ಧಿ ನಿಧಿ (ಶೇ. 7.25), ವಿಕಲ ಚೇತನರ ಕಲ್ಯಾಣ ಅಭಿವೃದ್ಧಿ ನಿಧಿ (ಶೇ. 5)ಗಳಿಗಾಗಿ 42.84 ಲಕ್ಷ ರೂ., ವೇತನ ಭತ್ಯೆಗಳಿಗಾಗಿ 148.50 ಲಕ್ಷ, ಬೀದಿ ದೀಪ ಮತ್ತು ನೀರು ಸರಬರಾಜು ವಿದ್ಯುತ್ ಸ್ಥಾವರಗಳ ಬಿಲ್ ಪಾವತಿಗಾಗಿ 650 ಲಕ್ಷ ರಸ್ತೆ ಚರಂಡಿ, ಯುಜಿಡಿ, ನೀರು ಸರಬರಾಜು, ಪಾರ್ಕ್ ಅಭಿವೃದ್ಧಿ ಕಾಮಗಾರಿಗಳು, ಸ್ಮಶಾನ ಅಭಿವೃದ್ಧಿ, ಸಾರ್ವಜನಿಕ ಶೌಚಾಲಯ ಹಾಗೂ ಇತರ ಅಭಿವೃದ್ಧಿ ಕಾಮಗಾರಿಗಳಿಗಾಗಿ 543 ಲಕ್ಷ ರೂ. ಸೇರಿ ಒಟ್ಟು ಅಂದಾಜು ವೆಚ್ಚ 1935.74 ಲಕ್ಷ ರೂ.ಗಳಾಗಿದ್ದು, ಒಟ್ಟಾರೆ 7.69 ಲಕ್ಷ ರೂ. ಉಳಿತಾಯ ಬಜೆಟ್ ಮಂಡಿಸಲಾಗಿದೆ. ಈ ಸಭೆಯಲ್ಲಿ ಪಪಂ ಮುಖ್ಯಾಧಿಕಾರಿ ಬಸವರಾಜು ಮಾತನಾಡಿದರು. ಕಂದಾಯ ನಿರೀಕ್ಷಕ ಡಿ.ಎನ್. ವಿಜಯಕುಮಾರ್, ಸಹಾಯಕ ಅಭಿಯಂತರ ಹರ್ಷ, ಹಿರಿಯ ಆರೋಗ್ಯ ನಿರೀಕ್ಷಕ ಪುನೀತ್ ಕುಮಾರ್, ಅಕೌಂಟೆಂಟ್ ಕೆ.ಎನ್. ಪ್ರಕಾಶ್ ಮತ್ತು ಕುಮಾರ್ ಉಪಸ್ಥಿತರಿದ್ದರು.



ಮೈಸೂರಿನ ಉದ್ಯಮಿ ಸ್ವೀಟ್ ಮಹೇಶ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಬಿಜೆಪಿ ಮುಖಂಡರಾದ ಎಲ್.ಚೌಡಪ್ಪ, ಭೂಮಿ ನಾರಾಯಣ್, ಕಿರಣ್ ಮಾದೇಗೌಡ, ಪ್ರದೀಪ್, ಯತೀಶ್, ಚಂದ್ರು, ಕಿರಣ್, ಅವಿನಾಶ್, ದಿನೇಶ್, ಶ್ರೀನಿವಾಸ್, ಅಭಿಲಾಷ್, ಅಭಿಜಿತ್, ನಟರಾಜ್ ದಿಲೀಪ್, ಬೋರಪ್ಪ ಮತ್ತಿತರರು ಅಭಿನಂದಿಸಿ, ಶುಭಾಶಯ ಕೋರಿದರು.

ಶಿವಸೇನೆಯ ಹಿರಿಯ ನಾಯಕ, ಮಹಾರಾಷ್ಟ್ರದ ಮಾಜಿ ಸಿಎಂ ಮನೋಹರ್ ಜೋಶಿ ವಿಧಿವಶ



ನವದೆಹಲಿ: ಶಿವಸೇನೆಯ ಹಿರಿಯ ನಾಯಕ ಹಾಗೂ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಮನೋಹರ್ ಜೋಶಿ ವಿಧಿವಶರಾಗಿದ್ದಾರೆ. ಅವರಿಗೆ 86 ವರ್ಷ ವಯಸ್ಸಾಗಿತ್ತು.

ಕೆಲವು ತಿಂಗಳ ಹಿಂದೆ ಮನೋಹರ್ ಜೋಶಿ ಮೆದುಳಿನ ರಕ್ತಸ್ರಾವದಿಂದ ಹಿಂದೂಜಾ ಆಸ್ಪತ್ರೆಗೆ ದಾಖಲಾಗಿದ್ದರು. ಬಳಿಕ ಅವರು ಚೇತರಿಸಿಕೊಂಡ ನಂತರ ಅವರನ್ನು ಡಿಸ್ಚಾರ್ಜ್ ಮಾಡಲಾಗಿತ್ತು. ಅನಾರೋಗ್ಯದ ಹಿನ್ನೆಲೆಯಲ್ಲಿ ಕಳೆದ ಹಲವು ದಿನಗಳಿಂದ ಮನೋಹರ್ ಜೋಶಿ ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದರು.

ಮನೋಹರ್ ಜೋಶಿ ಅವರು ರಾಯಗಡ ಜಿಲ್ಲೆಯ ನಂಡ್ವಿ ಗ್ರಾಮದಲ್ಲಿ 1937ರ ಡಿಸೆಂಬರ್ 2 ಜನಿಸಿದರು. ಎಂಎ ಮತ್ತು ಎಲ್‌ಎಲ್‌ಬಿ ಪದವಿಗಳನ್ನು ಮುಂಬೈ ವಿಶ್ವವಿದ್ಯಾಲಯದಿಂದ ಪಡೆದರು. ಜೋಶಿ ಅವರು 1995ರಿಂದ 1999ರವರೆಗೆ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. ಅವಿಭಜಿತ ಶಿವಸೇನಾದಿಂದ ರಾಜ್ಯದಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದ ಮೊದಲ ನಾಯಕರಾಗಿದ್ದರು. ಸಂಸತ್ ಸದಸ್ಯರಾಗಿಯೂ ಸೇವೆ ಸಲ್ಲಿದ್ದ ಇವರು ವಾಜಪೇಯಿ ಸರ್ಕಾರ ಅಧಿಕಾರದಲ್ಲಿದ್ದಾಗ 2002ರಿಂದ 2004ರವರೆಗೆ ಲೋಕಸಭಾ ಸ್ಪೀಕರ್ ಆಗಿಯೂ ಸೇವೆ ಸಲ್ಲಿದ್ದರು.

ಬೇಸಿಗೆಯಲ್ಲಿ ಅಗ್ನಿ ಅವಘಡ, ಕಾಡ್ಗಿಚ್ಚು ಮುನ್ನೆಚ್ಚರಿಕೆ

ಅಗ್ನಿಶಾಮಕ ದಳದಿಂದ ಅರಣ್ಯ ಸಿಬ್ಬಂದಿಗೆ ತರಬೇತಿ



ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಆಲನಹಳ್ಳಿ ಅರಣ್ಯ ಇಲಾಖೆಯ ಟ್ರೀ ಪಾರ್ಕ್‌ನಲ್ಲಿ ಕಾಡ್ಗಿಚ್ಚು ತಡೆ ಶಿಬಿರದಲ್ಲಿ ಅಗ್ನಿಶಾಮಕ ಠಾಣೆಯ ಅಧಿಕಾರಿ ನಾಗರಾಜ ಅರಸ್ ಅವರು ಮಾಹಿತಿ ನೀಡಿದರು.

ಮೈಸೂರು, ಫೆ.23(ಎಂಟಿವೈ)– ಬೇಸಿಗೆಯಲ್ಲಿ ಸಂಭವಿಸಬಹುದಾದ ಅಗ್ನಿ ಅವಘಡ, ಕಾಡ್ಗಿಚ್ಚು ತಡೆಗಾಗಿ ಶುಕ್ರವಾರ ಮೈಸೂರು ವಲಯದ ಅರಣ್ಯ ಸಿಬ್ಬಂದಿಗೆ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸುವ ಪ್ರಾತ್ಯಕ್ಷಿಕೆ ನೀಡಿ, ತರಬೇತಿ ನೀಡಿದರು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಆಲನಹಳ್ಳಿ ಅರಣ್ಯ ಇಲಾಖೆಯ ಟ್ರೀ ಪಾರ್ಕ್ ಬೆಳಗ್ಗೆ ಆಯೋಜಿಸಿದ್ದ ಬೆಂಕಿ ನಂದಿಸುವ ಅಣಕು ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆಯ ಮುಂಚೂಣಿ ಸಿಬ್ಬಂದಿ ಸೇರಿದಂತೆ ಅಧಿಕಾರಿಗಳಿಗೂ ಬೆಂಕಿ ಅವಘಡ ಸಂಭವಿಸಿದಾಗ ಕೈಗೊಳ್ಳಬೇಕಾದ ಕ್ರಮ, ಬೆಂಕಿ ನಂದಿಸಲು ಯಾವ ದಿಕ್ಕಿನಿಂದ ಕಾರ್ಯಾಚರಣೆ ಆರಂಭಿಸಬೇಕು. ಗಾಳಿ ಯಾವ ದಿಕ್ಕಿನಲ್ಲಿ ಬೀಸುತ್ತಿದೆ ಎಂದು ಗುರುತಿಸುವುದು ಹಾಗೂ ಬೆಂಕಿಯಿಂದ ಭುಗಿಲೇಳುವ ಹೊಗೆ ಪ್ರಮಾಣ ಸೇರಿದಂತೆ ಗಮನಿಸಬೇಕಾದ ಮಾಹಿತಿಯನ್ನು ವಿವರಿಸಿದರು. ಈ ವೇಳೆ ಅಗ್ನಿಶಾಮಕ ವಾಹನಗಳಿಂದ ಬೆಂಕಿ ನಂದಿಸಲು ವಿಧಾನದ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದರು. ಅಗ್ನಿಶಾಮಕಾಧಿಕಾರಿ ನಾಗರಾಜ್ ಅರಸ್ ವಿವರಣೆ ನೀಡಿದರು.

ಡಿಸಿಎಫ್ ಡಾ. ಕೆ.ಎನ್.ಬಸವರಾಜು ಮಾತನಾಡಿ, ಬೇಸಿಗೆ ವೇಳೆ ಅರಣ್ಯ ಸಂಪತ್ತನ್ನು ರಕ್ಷಣೆ ಮಾಡುವುದು ಸವಾಲಿನ ಕೆಲಸವಾಗಿದೆ. ಈ ಹಿಂದಿನಿಂದಲೂ ಅರಣ್ಯ ಸಿಬ್ಬಂದಿ ಬೇಸಿಗೆಯಲ್ಲಿ ವನ್ಯ ಸಂಪತ್ತಿನ ಸಂರಕ್ಷಣೆಯಲ್ಲಿ ಹಲವು ಸವಾಲು ಎದುರಿಸುತ್ತಾ ಕಾರ್ಯನಿರ್ವಹಿಸುತ್ತಾ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಅರಣ್ಯ ಸಿಬ್ಬಂದಿಗಳಿಗೆ ಅಗ್ನಿ ಶಾಮಕ ಸಿಬ್ಬಂದಿಗಳಿಂದ ಅಗ್ನಿ ಅವಘಡಗಳ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮ ಕುರಿತಂತೆ ತರಬೇತಿ ನೀಡಲಾಗಿದೆ. ಇಂದು ನಡೆದ ತರಬೇತಿ ಕಾರ್ಯದಲ್ಲಿ ಮೈಸೂರು ವಿಭಾಗದ ಅರಣ್ಯ ಸಿಬ್ಬಂದಿಗಳು ಪಾಲ್ಗೊಂಡು ಬೆಂಕಿ ಪ್ರಕರಣವನ್ನು ಹೇಗೆ ನಿಭಾಯಿಸಬೇಕು ಎಂದು ಕಲಿತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಎಸಿಎಫ್ ಲಕ್ಷ್ಮೀಕಾಂತ್, ಆರ್‌ಎಫ್‌ಒ, ಡಿಆರ್‌ಎಫ್‌ಒ, ಗಾರ್ಡ್ ಹಾಗೂ ವಾಚರ್‌ಗಳು ಉಪಸ್ಥಿತರಿದ್ದರು.

ನಿಖರ ಅಂಕಿ ಅಂಶ ಇಲ್ಲದಿದ್ದರೆ ದುರ್ಬಳಕೆಗೆ ನಾಂದಿಯಾಗುತ್ತದೆ ಪ್ರಾಧ್ಯಾಪಕ ಪ್ರೊ.ಆನಂದ್ ಅಭಿಪ್ರಾಯ



ಮೈಸೂರಿನ ಮಾನಸಗಂಗೋತ್ರಿಯ ಇನ್ಸ್‌ಟಿಟ್ಯೂಟ್ ಆಫ್ ಡೆವಲಪ್ ಮೆಂಟ್ ಸ್ಟಡೀಸ್‌ನ ಪ್ರೊ.ಆರ್.ಪಿ.ಮಿಶ್ರಾ ಸಭಾಂಗಣದಲ್ಲಿ ಶುಕ್ರವಾರ ಆರಂಭವಾದ ಸಾಮಾಜಿಕ ವಿಜ್ಞಾನದಲ್ಲಿ ಅಂಕಿ ಅಂಶಗಳ ಅನ್ವಯ ಕುರಿತ ಎರಡು ದಿನಗಳ ಪ್ರಾದೇಶಿಕ ಕಾರ್ಯಾಗಾರವನ್ನು ಮೈಸೂರಿನ ಮಾನಸ ಗಂಗೋತ್ರಿಯ ಬಿ.ಎನ್.ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್‌ನ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಉದ್ಘಾಟಿಸಿದರು.

ಮೈಸೂರು, ಫೆ.23(ಬಿಎಲ್‌ಯು)– ಪ್ರಸ್ತುತ ಸಮಾಜದಲ್ಲಿ ಅಂಕಿ ಅಂಶಗಳಿಗೆ ಬಹಳ ಮಹತ್ವವಿದ್ದು, ನಿಖರ ಅಂಕಿ ಅಂಶಗಳಿಲ್ಲದಿದ್ದರೆ ತಪ್ಪು ಮಾಹಿತಿ ನೀಡುವ ಹಾಗೂ ದುರ್ಬಳಕೆ ಮಾಡಿಕೊಳ್ಳುವ ಪ್ರಕರಣಗಳು ನಡೆಯುತ್ತವೆ ಎಂದು ಮೈಸೂರಿನ ಮಾನಸ ಗಂಗೋತ್ರಿಯ ಬಿ.ಎನ್.ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್‌ನ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸಗಂಗೋತ್ರಿಯ ಇನ್ಸ್‌ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್‌ನ ಪ್ರೊ.ಆರ್.ಪಿ.ಮಿಶ್ರಾ ಸಭಾಂಗಣದಲ್ಲಿ ಆರಂಭವಾಗಿರುವ ಸಾಮಾಜಿಕ ವಿಜ್ಞಾನದಲ್ಲಿ ಅಂಕಿ ಅಂಶಗಳ ಅನ್ವಯ ಕುರಿತ ಎರಡು ದಿನಗಳ ಪ್ರಾದೇಶಿಕ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ವಿಚಾರವಾದರೂ ಅಂಕಿ ಅಂಶಗಳ ಫಲಿತಾಂಶ ಬಂದ ನಂತರ ಮಾತ್ರ ಅಂತಿಮ ನಿರ್ಣಯಕ್ಕೆ ಬರಲು ಸಾಧ್ಯ ಎಂದರು.

ಪ್ರತಿಯೊಂದು ವಿಚಾರದ ಸತ್ಯ ಅರಿಯಲು, ಪಾರದರ್ಶಕತೆ ಕಾಪಾಡಲು ಅಂಕಿ ಅಂಶಗಳು ಪ್ರಮುಖ ಪಾತ್ರ ವಹಿಸುತ್ತವೆ. ಜೊತೆಗೆ ಯಾವುದೇ ವಿಚಾರ ಮಂಡನೆ ಮಾಡಬೇಕೆಂದರೂ ಅಂಕಿ ಅಂಶಗಳಿದ್ದರೆ ಮಾತ್ರ ಆ ವಿಚಾರಕ್ಕೆ ಮಹತ್ವವಿರುತ್ತದೆ ಎಂದು ಪ್ರೊ.ಆನಂದ್ ಹೇಳಿದರು.

ನಿಖರತೆ ಹಾಗೂ ಗುಣಮಟ್ಟ ತಿಳಿಯಬೇಕಾದರೆ ಅಂಕಿ ಅಂಶಗಳೇ ಪ್ರಧಾನವಾಗಿರುತ್ತವೆ. ಅಂಕಿ ಅಂಶಗಳಿಲ್ಲದಿದ್ದರೆ ತಪ್ಪು ಮಾಹಿತಿ ನೀಡುವ ಸಾಧ್ಯತೆ ಇರುತ್ತದೆ. ಜೊತೆಗೆ ದುರ್ಬಳಕೆ ಆಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಯಾವುದೇ ವಿಶ್ವವಿದ್ಯಾನಿಲಯದ ಜೀವನಾಡಿ ಹಾಗೂ ಘನತೆಯ ಸಂಕೇತವೆಂದರೆ ಅದು ಸಂಶೋಧನೆ. ಈ ನಿಟ್ಟಿನಲ್ಲಿ ಸಂಶೋಧನೆಯ ಗುಣಮಟ್ಟ ಹೆಚ್ಚಿಸಿಕೊಳ್ಳಲು ಇಂತಹ ಕಾರ್ಯಾಗಾರಗಳನ್ನು ಮಾಡುವುದು ಅತ್ಯವಶ್ಯ ಪ್ರೊ.ಆನಂದ್ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ.ಮಹದೇವನ್, ಇನ್ಸ್‌ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್‌ನ ನಿರ್ದೇಶಕ ಪ್ರೊ.ಎಸ್.ಜೆ.ಮಂಜುನಾಥ್, ಪ್ರಾಧ್ಯಾಪಕ ಡಾ.ಹೆಚ್.ಆರ್.ಶ್ಯಾಮ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

4ನೇ ಟೆಸ್ಟ್: ಇಂಗ್ಲೆಂಡ್‌ಗೆ ಜೋ ರೂಟ್ ಶತಕದ ಆಸರೆ



ರಾಂಚಿ, ಫೆ.23– ಜೋ ರೂಟ್ ಅವರ ಭರ್ಜರಿ ಶತಕದ ನೆರವಿನಿಂದ ಭಾರತ ವಿರುದ್ಧದ 4ನೇ ಟೆಸ್ಟ್ ಪಂದ್ಯದ ಮೊದಲ ದಿನದಂತ್ಯಕ್ಕೆ ಇಂಗ್ಲೆಂಡ್ 7 ವಿಕೆಟ್ ನಷ್ಟಕ್ಕೆ 302 ರನ್ ಗಳಿಸಿದೆ.

ಇಲ್ಲಿನ ಜೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್‌ಗೆ ಝಾಕ್ ಕ್ರೌಲಿ ಹಾಗೂ ಬೆನ್ ಡಕೆಟ್ 47 ರನ್‌ಗಳ ಉತ್ತಮ ಆರಂಭ ಒದಗಿಸಿದರು. ಆದರೆ ಈ ಮೊತ್ತಕ್ಕೆ 10 ರನ್ ಸೇರಿಸುವಷ್ಟರಲ್ಲಿ ಝಾಕ್ ಕ್ರೌಲಿ 42, ಬೆನ್ ಡಕೆಟ್ 11 ಹಾಗೂ ಓಲಿ ಪೋಪ್ ಖಾತೆ ತೆರೆಯದೇ ಪೆವಿಲಿಯನ್ ಸೇರಿಕೊಂಡರು. ಆಗ ತಂಡದ ಮೊತ್ತ 57 ರನ್ ಆಗಿತ್ತು. ನಂತರ ಬಂದ ಜಾನಿ ಬೈರ್ ಸ್ಟೋವ್ 38, ಬೆನ್ ಸ್ಟೋಕ್ಸ್ 3 ರನ್ ಗಳಿಸಿ ಬೇಗ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ಜೋ ರೂಟ್ ಮತ್ತು ಬೆನ್ ಫಾಕ್ಸ್ 113 ರನ್‌ಗಳ ಜೊತೆ ಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. ಆದರೆ ಈ ವೇಳೆ 47 ರನ್ ಗಳಿಸಿದ್ದ ಬೆನ್ ಫಾಕ್ಸ್ 47ರನ್ ಗಳಿಸಿ ಔಟಾಗುವ ಮೂಲಕ 3 ರನ್ ಗಳಿಂದ ಅರ್ಧಶತಕ ವಂಚಿತರಾದರು. ನಂತರ ಬಂದ ಟಾಮ್ ಹಾರ್ಟ್ಲೀ 13ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ತಾಳ್ಮೆಯ ಆಟವಾಡಿದ ಜೋ ರೂಟ್ ಟೆಸ್ಟ್ ಕ್ರಿಕೆಟ್ ವೃತ್ತಿ ಜೀವನದ 31ನೇ ಶತಕ ಸಿಡಿಸಿ ಮಿಂಚಿದರು. ಮತ್ತೊಂದೆಡೆ ರೂಟ್‌ಗೆ ಉತ್ತಮ ಸಾಥ್ ನೀಡಿದ ಆಲಿ ರಾಬಿನ್ಸನ್ 31 ರನ್ ಗಳಿಸಿ ಅಜೇಯರಾ ಗುಳಿದರೇ, ರೂಟ್ 9 ಬೌಂಡರಿ ಒಳಗೊಂಡ 106 ರನ್ ಗಳಿಸಿ 2ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಭಾರತದ ಪರ ಪಾದರ್ಪಣೆ ಪಂದ್ಯದಲ್ಲೇ ಆಕಾಶ್ ದೀಪ್ 3 ವಿಕೆಟ್ ಕಿತ್ತು ಮಿಂಚಿದರೇ, ಮೊಹಮ್ಮದ್ ಸಿರಾಜ್ 2, ರವೀಂದ್ರ ಜಡೇಜಾ ಹಾಗೂ ರವಿಚಂದ್ರನ್ ಅಶ್ವಿನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ದಲಿತರಿಗೆ ಮೀಸಲಾದ ಅನುದಾನ ಗ್ಯಾರಂಟಿ ಯೋಜನೆಗಳಿಗೆ ಬಳಕೆ

ಕಾಂಗ್ರೆಸ್ ಸರ್ಕಾರದ ವಿರುದ್ಧ ಮೈಸೂರು ಜಿ.ಪಂ. ಮುಂದೆ ಬಿಜೆಪಿ ಪ್ರತಿಭಟನೆ



ಮೈಸೂರು, ಫೆ.23(ಬಿಎಲ್‌ಯು)– ದಲಿತ ಸಮುದಾಯದ ಯೋಜನೆಗಳಿಗೆ ಮೀಸಲಿಟ್ಟಿದ್ದ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಂಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಕಾರ್ಯಕರ್ತರು ಮೈಸೂರಿನ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಇಂದು ಪ್ರತಿಭಟನೆ ನಡೆಸಿದರು.

ನೂರಾರು ಸಂಖ್ಯೆಯಲ್ಲಿ ಸೇರಿದ್ದ ಬಿಜೆಪಿ ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಏನಿಲ್ಲಾ, ಏನಿಲ್ಲಾ ಕಾಂಗ್ರೆಸ್ ಸರ್ಕಾರದಲ್ಲಿ ದಲಿತರಿಗೆ ಏನೇನು ಇಲ್ಲ, ಎಸ್ ಸಿ–ಎಸ್ ಟಿ, ಟಿಫ್‌ಸಿ ನಿಯಮಗಾಳಿಗೆ ತೂರಿ ದಲಿತರ ಅನುದಾನ ದುರ್ಬಳಕೆ ಮಾಡಿಕೊಂಡು ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ, ದಲಿತ ವಿದ್ಯಾರ್ಥಿಗಳಿಗೆ ಸಮರ್ಪಕ ವಿದ್ಯಾರ್ಥಿ ವೇತನ ನೀಡದ ದಲಿತ ದ್ರೋಹಿ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ, ಒಳ ಮೀಸಲಾತಿ ವಿರುದ್ಧ ಒಳಸಂಚು ಮಾಡುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ ಘೋಷಣಾ ಫಲಕಗಳನ್ನು ಹಿಡಿದು ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಸರ್ಕಾರ ದಲಿತರಿಗೆ ಅನ್ಯಾಯ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ದಲಿತರಿಗೆ ಮೀಸಲಿಟ್ಟಿದ್ದ ಟಿಎಸ್‌ಪಿಯ 11,144 ಕೋಟಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಂಡು ದಲಿತ ಸಮುದಾಯದ ಹಿತ ಬಲಿ ಕೊಟ್ಟಿದೆ. ದಲಿತರ ಹಿತರಕ್ಷಣೆ ಮಾಡಬೇಕಿದ್ದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅನ್ಯಾಯದ ವಿರುದ್ಧ ಸೊಲ್ಲೆತ್ತಿಲ್ಲ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಾಜಿ ಶಾಸಕ ಹರ್ಷವರ್ಧನ್,ಶಿವಣ್ಣ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಸೇರಿದಂತೆ ಬಿಜೆಪಿಯ ಹಲವು ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಲೋಕಸಭಾ ಚುನಾವಣೆ: ಬಂಡೀಪುರದಲ್ಲಿ ಹಿರಿಯ ಅಧಿಕಾರಿಗಳ ಸಭೆ

● ಉಭಯ ಜಿಲ್ಲೆಗಳ ಡಿಸಿ, ಜಿ.ಪಂ ಸಿಇಒ, ಎಸ್ಪಿ, ತಹಶೀಲ್ದಾರ್ ಇತರೆ ಅಧಿಕಾರಿಗಳು ಭಾಗಿ ● ಅರಣ್ಯ ಇಲಾಖೆಯ ಸಹಕಾರದಿಂದ ಜಂಟಿ ಕಾರ್ಯಾಚರಣೆ ನಿರ್ಧಾರ ● ಚುನಾವಣಾ ಅಕ್ರಮ ತಡೆಗೆ ಗಡಿಯಲ್ಲಿ ತೀವ್ರ ಕಟ್ಟೆಚ್ಚರ; ಚೆಕ್‌ಪೋಸ್ಟ್‌ಗಳ ನಿರ್ಮಾಣ



ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದ ಸಭಾಂಗಣದಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಹಿರಿಯ ಅಧಿಕಾರಿಗಳು ಮಹತ್ವದ ಸಭೆ ನಡೆಸಿದರು.

ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರ ತಮಿಳುನಾಡು ಹಾಗೂ ಕೇರಳ ಗಡಿ ಭಾಗ ಒಳಗೊಂಡಿದೆ. ಅಲ್ಲದೆ, ಮೈಸೂರು ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳೂ ಸೇರಿವೆ. ಈ ಹಿನ್ನೆಲೆಯಲ್ಲಿ ಎರಡೂ ಜಿಲ್ಲೆಗಳ ಅಧಿಕಾರಿಗಳು ಸಮನ್ವಯತೆಯಿಂದ ಚುನಾವಣಾ ಕಾರ್ಯ ನಡೆಸಬೇಕಾಗಿದೆ. ಚಾಮರಾಜನಗರ ಜಿಲ್ಲೆ ಮೈಸೂರು, ಮಂಡ್ಯ, ತಮಿಳುನಾಡು ಗಡಿಗೆ ಹೊಂದಿಕೊಂಡಿದೆ. ಕಳೆದ ಚುನಾವಣೆ ವೇಳೆ ಎದುರಾದ ಸವಾಲುಗಳನ್ನು ಅವಲೋಕಿಸಿ, ಈ ಬಾರಿ ಪರಿಣಾಮಕಾರಿ ತಪಾಸಣೆ ನಡೆಸಲು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ನಡುವೆ ಸಂಚರಿಸುವ ವಾಹನಗಳ ತಪಾಸಣಾ ವ್ಯವಸ್ಥೆಯಲ್ಲೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ತಪಾಸಣೆಯಿಂದ ಪ್ರಯಾಣಿಕರಿಗೆ ತೊಂದರೆಯಾಗುವುದನ್ನು ತಡೆಗಟ್ಟಲು ಒಂದು ಸ್ಥಳದಲ್ಲಿ ಮಾತ್ರ ತಪಾಸಣೆ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ. ಒಂದು ಮಾರ್ಗದಲ್ಲಿ ಸಂಚರಿಸುವ ವಾಹನವನ್ನು ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲೂ ತಡೆದು ತಪಾಸಣೆ ನಡೆಸುವುದಕ್ಕಿಂತ ಆಗಮನ ಮತ್ತು ನಿರ್ಗಮನ ಪಾಯಿಂಟ್‌ನಲ್ಲಿ ಒಂದೆಡೆ ಚಾಮರಾಜನಗರ ಜಿಲ್ಲೆಯ ಅಧಿಕಾರಿಗಳು ಮತ್ತೊಂದೆಡೆ ಮೈಸೂರು ಭಾಗದ ಅಧಿಕಾರಿಗಳು ತಪಾಸಣೆ ನಡೆಸುವ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ. ಸಭೆಯಲ್ಲಿ ಎರಡು ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಎಸ್ಪಿಗಳು, ಅಬಕಾರಿ, ವಾಣಿಜ್ಯ ತೆರಿಗೆ ಸೇರಿದಂತೆ ಇನ್ನಿತರ ಅಧಿಕಾರಿಗಳು ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಂಡು ಸಮನ್ವಯದಿಂದ ಕಾರ್ಯಾಚರಣೆ ನಡೆಸುವುದಕ್ಕೆ ನಿರ್ಧರಿಸಲಾಗಿದೆ.

- ಶಿಲ್ಪಾನಾಗ್, ಜಿಲ್ಲಾಧಿಕಾರಿಗಳು, ಚಾಮರಾಜನಗರ

ಮೈಸೂರು,ಫೆ.23(ಎಂಟಿವೈ)– ಲೋಕಸಭಾ ಚುನಾವಣೆ ಘೋಷಣೆಗೆ ದಿನಗಣನೆ ಆರಂಭವಾಗಿದ್ದು, ಮೈಸೂರು, ಚಾಮರಾಜನಗರದ ಹಿರಿಯ ಅಧಿಕಾರಿಗಳು ಗಡಿ ಜಿಲ್ಲೆಗಳಲ್ಲಿ ಕೈಗೊಳ್ಳಬೇಕಾದ ಎಚ್ಚರಿಕಾ ಕ್ರಮ ಕುರಿತಂತೆ ಸದ್ದಿಲ್ಲದೆ ಸಿದ್ಧತೆ ಮಾಡಿಕೊಳ್ಳುವ ಪ್ರಕ್ರಿಯೆ ಆರಂಭಿಸಿದ್ದಾರೆ.

ಲೋಕಸಭಾ ಚುನಾವಣೆಯನ್ನು ಪ್ರಮುಖ ರಾಜಕೀಯ ಪಕ್ಷಗಳು ಪ್ರತಿಷ್ಠೆಯಾಗಿ ಪರಿಗಣಿಸಿದ್ದು, ಗೆಲುವಿಗೆ ಮತದಾರರನ್ನು ಓಲೈಸಿಕೊಳ್ಳಲು ಆಮಿಷವೊಡ್ಡುವುದು, ಉಡುಗೊರೆ ರೂಪದಲ್ಲಿ ವಿವಿಧ ವಸ್ತುಗಳನ್ನು ವಿತರಿಸುವ ಸಾಧ್ಯತೆ ಇರುವುದರಿಂದ ಎರಡೂ ಜಿಲ್ಲೆಗಳ ಜಿಲ್ಲಾಡಳಿತ, ನ್ಯಾಯ ಸಮ್ಮತ, ಪಾರದರ್ಶಕ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿವೆ.

ಫೆ.20ರಂದು ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಇಲಾಖೆಯ ಸಭಾಂಗಣದಲ್ಲಿ ಕರ್ನಾಟಕ, ತಮಿಳುನಾಡು ಹಾಗೂ ಕೇರಳ ರಾಜ್ಯಗಳ ಗಡಿ ಜಿಲ್ಲೆಗಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಸಭೆ ನಡೆಸಿ, ಚುನಾವಣಾ ಅಕ್ರಮ ಹಾಗೂ ನಕ್ಸಲ್ ಚಟುವಟಿಕೆ ಹತ್ತಿಕ್ಕುವ ಸಂಬಂಧ ಚರ್ಚೆ ನಡೆಸಲಾಗಿತ್ತು. ಈ ಹಿನ್ನೆಲೆಯಲ್ಲಿ ಶುಕ್ರವಾರ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಚಾಮರಾಜನಗರದ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿ.ಪಂ ಸಿಇಒ ಕೆ.ಎಂ.ಗಾಯತ್ರಿ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಮೈಸೂರು ಎಸ್ಪಿ ಸೀಮಾ ಲಾಟ್ಕರ್, ಚಾ.ನಗರ ಎಸ್ಪಿ ಪದ್ಮಿನಿ ಸಾಹು, ತಹಶೀಲ್ದಾರ್‌ಗಳಾದ ರಮೇಶ್‌ಬಾಬು, ಶಿವಕುಮಾರ್ (ನಂಜಗೂಡು), ಶ್ರೀನಿವಾಸ್(ಹೆಚ್.ಡಿ.ಕೋಟೆ), ಬಸವ ರಾಜು(ಚಾ.ನಗರ), ಮಂಜುಳಾ (ಕೊಳ್ಳೇಗಾಲ), ಗುರುಪ್ರಸಾದ್(ಹನೂರು), ಜಯಪ್ರಕಾಶ್ (ಯಳಂದೂರು), ಆಹಾರ ಮತ್ತು ನಾಗರಿಕ ಸರಬರಾಜು ಜಂಟಿ ನಿರ್ದೇಶಕಿ ಕುಮುದಾ, ಎಸಿಎಫ್ ನವೀನ್, ಕಂದಾಯ ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕ್ಯಾಂಪಸ್‌ನಲ್ಲಿ ಸಭೆ ನಡೆಸಿ, ಲೋಕಸಭಾ ಚುನಾವಣೆಯಲ್ಲಿ ಅಕ್ರಮ ತಡೆಗೆ ಕೈಗೊಳ್ಳಬೇಕಾದ ಕ್ರಮ ಕುರಿತಂತೆ ಸುದೀರ್ಘ ಚರ್ಚೆ ನಡೆಸಿದರು.

ಚುನಾವಣಾ ಅಧಿಸೂಚನೆ ಹೊರಡಿಸುತ್ತಿದ್ದಂತೆ ಕರ್ನಾಟಕ–ತಮಿಳುನಾಡು, ಕರ್ನಾಟಕ–ಕೇರಳ ಗಡಿ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಬೇಕು. ಮತದಾರರಿಗೆ ಹಂಚಲು ತರುವ ಯಾವುದೇ ವಸ್ತುಗಳನ್ನು ವಶಪಡಿಸಿಕೊಳ್ಳಲು ಜಂಟಿ ಕಾರ್ಯಾಚರಣೆ ನಡೆಸಬೇಕು. ಅರಣ್ಯ ಇಲಾಖೆಯ ಸಹಕಾರ ಪಡೆದು ವಾಹನಗಳ ತಪಾಸಣೆ ನಡೆಸಬೇಕು. ಕಾಡಂಚಿನ ಕುಗ್ರಾಮಗಳಲ್ಲಿ ಪಾರದರ್ಶಕ ಹಾಗೂ ನ್ಯಾಯ ಸಮ್ಮತ ಮತದಾನ ಪ್ರಕ್ರಿಯೆ ನಡೆಸಲು ಕ್ರಮ ಕೈಗೊಳ್ಳಬೇಕಾಗಿದೆ. ಪ್ರಮುಖವಾಗಿ ನೆರೆ ರಾಜ್ಯಗಳಿಂದ ಅಕ್ರಮವಾಗಿ ಹಣ, ಮದ್ಯ ಸರಬರಾಜು ಸೇರಿದಂತೆ ಇನ್ನಿತರ ಚಟುವಟಿಕೆಗಳ ಮೇಲೆ ನಿಗಾ ಇಡುವಂತೆ ಉಭಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಜಿಲ್ಲಾಡಳಿತ ಬಯಸುವ ಸಹಕಾರವನ್ನು ನೀಡುವ ಭರವಸೆಯನ್ನು ಅರಣ್ಯಾಧಿಕಾರಿಗಳು ನೀಡಿದ್ದಾರೆ.

ಗ್ರಾಮ ಸಹಾಯಕ ಹುದ್ದೆಗೆ ಅರ್ಜಿ ಆಹ್ವಾನ

ಮಂಡ್ಯ,ಫೆ.23– ಮಂಡ್ಯ ತಾಲೂಕಿನ ಕೊತ್ತತ್ತಿ ಹೋಬಳಿಯ ಸೂನಗನಹಳ್ಳಿ ವೃತ್ತ, ಬೇವಿನಹಳ್ಳಿ ವೃತ್ತ, ಬಸರಾಳು ಹೋಬಳಿಯ ಮುತ್ತೇಗೆರೆ ವೃತ್ತ ಮತ್ತು ಕಸಬಾ ಹೋಬಳಿಯ ಮಂಡ್ಯ ವೃತ್ತ ಸೇರಿ ಒಟ್ಟು ನಾಲ್ಕು ಗ್ರಾಮ ಸಹಾಯಕ ಹುದ್ದೆಗಳು ಖಾಲಿಯಿದ್ದು, ಈ ನಾಲ್ಕು ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿದಾರರಿಗೆ ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 25 ವರ್ಷ ತುಂಬಿರಬೇಕು. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಮಾ.7ರಂದು ಕೊನೆಯ ದಿನಾಂಕವಾಗಿದ್ದು, ಮಂಡ್ಯ ತಾಲೂಕು ಕಚೇರಿಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಸಂಜೆ 5.30 ಗಂಟೆಯೊಳಗೆ ಅರ್ಜಿ ಸಲ್ಲಿಸಬೇಕು. ನಿಗದಿತ ದಿನಾಂಕದ ನಂತರ ಸ್ವೀಕೃತಿಯಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಮಂಡ್ಯ ತಾಲೂಕಿನ ತಹಶೀಲ್ದಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಡ್ಯದಲ್ಲಿ ಅಕ್ರಮ ಗಣಿಗಾರಿಗೆ ತಡೆಯಲು ಅಧಿಕಾರಿಗಳು ವಿಫಲ

ದಿಶಾ ಸಭೆಯಲ್ಲಿ ಸಂಸದೆ ಸುಮಲತಾ ಅಸಮಾಧಾನ



ಸಂಸದೆ ಸುಮಲತಾ ಅಂಬರೀಶ್ ಅಧ್ಯಕ್ಷತೆಯ ಕೊನೆಯ ದಿಶಾ ಸಭೆಯಾಗಿದ್ದರಿಂದ ಜಿಲ್ಲಾಡಳಿತದಿಂದ ಸಂಸದರಿಗೆ ಸನ್ಮಾನಿಸಿ, ಗೌರವಿಸಲಾಯಿತು. ಜಿಲ್ಲಾಧಿಕಾರಿ ಡಾ.ಕುಮಾರ್, ಜಿಲ್ಲಾ ಪಂಚಾಯಿತಿ ಸಿಇಓ ತನ್ವೀರ್ ಆಸೀಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಮತ್ತಿತರರು ಇದ್ದರು.

ಮಂಡ್ಯ, ಫೆ.23– ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ನಮಗೆ ನಿರಂತರ ದೂರು ಬರುತ್ತಿದ್ದು, ಅದನ್ನು ತಡೆಯುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಸಂಸದೆ ಸುಮಲತಾ ಅಂಬರೀಶ್. ಗಣಿ ಮಾಲೀಕರಿಂದ ವಸೂಲಿ ಆಗಬೇಕಿರುವ ರಾಜಧನವನ್ನು ಅಧಿಕಾರಿಗಳು ಏಕೆ ಸಂಗ್ರಹಿಸಿಲ್ಲ. ಪ್ರತಿ ಸಭೆ ನಡೆದಾಗ ಡ್ರೋಣ್ ಸರ್ವೇ ಒಂದೇ ಕಾರಣ ಹೇಳುವ ನೀವು ಸರ್ವೆ ಮಾಡೋಕೆ ಏಕೆ ನಿರ್ಲಕ್ಷ್ಯ ಮಾಡುತ್ತಿದ್ದೀರಿ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಶುಕ್ರವಾರ ನಗರದ ಕಾವೇರಿ ಸಭಾಂಗಣದಲ್ಲಿ ನಡೆದ ದಿಶಾ ಸಭೆಯಲ್ಲಿ ಮಾತನಾಡಿದ ಅವರು, ಡ್ರೋಣ್ ಸರ್ವೇ ಮಾಡುವುದು ಯಾವಾಗ? ಇದಲ್ಲದೇ ರಾಜಧನ ಯಾವಾಗ ವಸೂಲಿ ಮಾಡುವಿರಿ? ಸಣ್ಣ ಪುಟ್ಟ ಬಾಕಿ ಉಳಿಸಿಕೊಂಡರೆ ಅದರ ವಸೂಲಿ ಹೇಗೆ? ಕೋಟಿ ಕೋಟಿ ಬಾಕಿ ಉಳಿಸಿಕೊಂಡಿರುವ ಗಣಿ ಮಾಲೀಕರಿಂದ ರಾಜಧನ ವಸೂಲಿಗೆ ಏಕೆ ಹಿಂದೇಟು ಹಾಕುತ್ತಿದ್ದೀರಿ ಎಂದು ಪ್ರಶ್ನಿಸಿದರು.

ಸಂಸದೆ ಮಾತಿಗೆ ಧ್ವನಿಗೂಡಿಸಿದ ಶಾಸಕ ರವಿಕುಮಾರ್, ಮಂಡ್ಯ ಕ್ಷೇತ್ರದಲ್ಲೂ ಗಣಿ ಮಾಲೀಕರಿಂದ ಸಾಕಷ್ಟು ಬಾಕಿ ಉಳಿದಿದೆ. ಅದರ ವಸೂಲಿಗೆ ಕ್ರಮ ಏನು ಕೈಗೊಂಡಿದ್ದೀರಿ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅಧಿಕಾರಿಗಳನ್ನು, ಡ್ರೋಣ್ ಸರ್ವೇ ಆಗಬೇಕಿದೆ. ಈಗಾಗಲೇ ಎರಡು ನೋಟೀಸ್ ಕೊಟ್ಟಿದ್ದೇವೆ ಎಂದರು.

ಸುಮಲತಾರನ್ನ ಹೊಗಳಿದ ಸೋಮಶೇಖರ್: ಸಂಸದೆ ಸುಮಲತಾ ಅವರ ಈ ಅವಧಿಯ ಕಡೆಯ ದಿಶಾ ಸಭೆಯಲ್ಲಿ ದಿಶಾ ಸಮಿತಿಯ ನಾಮನಿರ್ದೇಶಿತ ಸದಸ್ಯರಾದ ಅಖಿಲ ಕರ್ನಾಟಕ ಅಂಬರೀಷ್ ಅಭಿಮಾನಿಗಳ ಸಂಘದ ಅಧ್ಯಕ್ಷ ಬೇಲೂರು ಸೋಮಶೇಖರ್ ಮಾತನಾಡಿ, ತಮ್ಮ ಭಾಷಣದುದ್ದಕ್ಕೂ ಸುಮಲತಾರನ್ನು ಹೊಗಳಿದರು.

ಸಂಸದರಾಗಿ ಐದು ವರ್ಷದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಸಾಕಷ್ಟು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದ್ದಾರೆ. ಸುಮಲತಾ ಅವರು ಮತ್ತೊಮ್ಮೆ ಸಂಸದರಾಗಿ ಆಯ್ಕೆಯಾಗಬೇಕು. ಆ ಮೂಲಕ ಅಭಿವೃದ್ಧಿ ಕೆಲಸಗಳನ್ನ ಅವರ ಅಮೃತ ಹಸ್ತದಿಂದಲೇ ಉದ್ಘಾಟನೆ ಮಾಡಬೇಕು ಎಂದರು.

ಕೈ ಶಾಸಕರ ಸಾಮೂಹಿಕ ಗೈರು: ಕಳೆದ 5 ವರ್ಷದಲ್ಲಿ ನಡೆದ ಸಂಸದೆ ಸುಮಲತಾ ನೇತೃತ್ವದ ದಿಶಾ ಸಭೆಯಲ್ಲಿ 2023ರವರೆಗೆ ದಿಶಾ ಸಭೆಯನ್ನು ಪ್ರತಿನಿಧಿ ಸಬೇಕಿದ್ದ ಜೆಡಿಎಸ್ ಶಾಸಕರು ಅನೇಕ ಸಭೆಗಳಿಗೆ ಗೈರು ಹಾಜರಾಗಿದ್ದರು. ಇದೀಗ ಜೆಡಿಎಸ್ ಶಾಸಕರ ಹಾದಿ ತುಳಿದಿರುವ ಜಿಲ್ಲೆಯ ಕಾಂಗ್ರೆಸ್ ಶಾಸಕರು ಕಳೆದೊಂದು ವರ್ಷದಿಂದ ನಡೆದಿರುವ ಅನೇಕ ದಿಶಾ ಸಭೆಗಳಿಗೆ ಗೈರು ಹಾಜರಾಗಿ, ಸಂಸದರ ವಿರುದ್ಧ ಅಸಹಕಾರ ಚಳುವಳಿ ಮುಂದುವರೆಸಿದ್ದಾರೆ. ಇಂದಿನ ಸಭೆಗೆ ಕೇವಲ ಗಣಿಗ ರವಿಕುಮಾರ್ ಮಾತ್ರ ಹಾಜರಾಗಿದ್ದು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಡೆಯುತ್ತಿರುವ ಎರಡನೇ ದಿಶಾ ಸಭೆಗೂ ಜಿಲ್ಲೆಯ ಉಳಿದ ಶಾಸಕರುಗಳು ಗೈರಾಗಿದ್ದರು.

ಬಿಂಡಿಗನವಿಲೆ ಚನ್ನಕೇಶವ ಗರುಡದೇವರ ಬ್ರಹ್ಮ ರಥೋತ್ಸವ



ಬಿಂಡಿಗನವಿಲೆ ಗ್ರಾಮದಲ್ಲಿ ಶ್ರೀ ಚನ್ನಕೇಶವ ಗರುಡ ದೇವರ ಬ್ರಹ್ಮ ರಥೋತ್ಸವವು ವೈಭವದಿಂದ ನೆರವೇರಿತು.

ನಾಗಮಂಗಲ, ಫೆ.23– ತಾಲೂಕಿನ ಬಿಂಡಿಗನವಿಲೆ ಗ್ರಾಮದ ಇತಿಹಾಸ ಪ್ರಸಿದ್ದ ಶ್ರೀ ಚನ್ನಕೇಶವ ಗರುಡ ದೇವರ ಬ್ರಹ್ಮ ರಥೋತ್ಸವವೂ ವೈಭವದಿಂದ ನೆರವೇರಿತು. ಕಳೆದ ಒಂದು ವಾರ ಹಿಂದೆ ಗರುಡ ಪಟ ಹಾರಿಸಿ ಅಂಕುರಾರ್ಪಣೆಯೊಂದಿಗೆ ಪ್ರಾರಂಭವಾದ ರಥೋತ್ಸವದ ಕಾರ್ಯಕ್ರಮಗಳು ಪ್ರತಿನಿತ್ಯ ಕೇಶವನಿಗೆ ವೈಖಾನಸಗಮದಲ್ಲಿ ಅಭಿಷೇಕದೊಂದಿಗೆ ಪೂಜೆಗಳು ಅನುಚಾನವಾಗಿ ನಡೆದವು.

ನಂತರ ಗುರುವಾರ ಸ್ವಾಮಿಯನ್ನು ದೇವಾಲಯದ ಪ್ರಾಕಾರದಲ್ಲಿ ಸಕಲ ವೇದಗಳೊಂದಿಗೆ ಮೆರವಣಿಗೆ ಮಾಡಿ ಗೋವಿಂದ ನಾಮಸ್ಮರಣೆಯೊಂದಿಗೆ, ರಥೋತ್ಸವಕ್ಕೆ ತಾಲೂಕು ದಂಡಾಧಿಕಾರಿ ನಯೀಮುನ್ನೀಸಾ ಚಾಲನೆ ನೀಡಿದರು.

ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಹೊರ ಊರುಗಳಿಂದ ಬಂದ ಭಕ್ತಾದಿಗಳು ಬಕ್ತಿ ಬಾವ ಪರವಶರಾಗಿ ರಥವನ್ನು ಎಳೆದು ಪುನೀತರಾದರು. ನಂತರ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳನ್ನು ಇದೇ ವೇಳೆ ಸನ್ಮಾನಿಸಿ, ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಪರಿಶಿಷ್ಟರ ಮೀಸಲು ಹಣ ಗ್ಯಾರಂಟಿ ಯೋಜನೆಗೆ ದುರ್ಬಳಕೆ: ಬಿಜೆಪಿ ಪ್ರತಿಭಟನೆ

ಮಂಡ್ಯ,ಫೆ.23– ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮೀಸಲು ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಕಾಂಗ್ರೆಸ್ ಸರ್ಕಾರ ದುರ್ಬಳಕೆ ಮಾಡಿಕೊಂಡಿದೆ ಎಂದು ಆಪಾಧಿಸಿ ಬಿಜೆಪಿ ಪಕ್ಷದ ಎಸ್ಸಿ ಮೋರ್ಚಾ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಪಕ್ಷದ ಕಾರ್ಯಕರ್ತರು, ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಮೂಲಕ ರಾಜ್ಯಪಾಲರಿಗೆ ಮನವಿ ರವಾನಿಸಿದರು.

ಜೈ ಭೀಮ್ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ಗೆ ಜೈ ಘೋಷಣೆ ಕೂಗಿ, ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಿ.ಪರಮೇಶ್ವರ್, ಎಚ್.ಸಿ.ಮಹದೇವಪ್ಪ, ಪ್ರಿಯಾಂಕ ಖರ್ಗೆ ದಲಿತ ವಿರೋಧಿಯಾಗಿದ್ದಾರೆ ಎಂದು ಆರೋಪಿಸಿದರು.

ಬಳಿಕ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಇಂದ್ರೇಶ್ ಮಾತನಾಡಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದ್ದ ಎಸ್‌ಸಿ, ಎಸ್‌ಪಿ ಮತ್ತು ಟಿಎಸ್‌ಪಿ ಅನುದಾನದಲ್ಲಿ 11,114 ಕೋಟಿ ರೂ.ಅನ್ನು ಐದು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿರುವುದಾಗಿ ಕಾಂಗ್ರೆಸ್ ಸರ್ಕಾರ ಲಿಖಿತ ರೂಪದಲ್ಲಿ ನೀಡಿದೆ, ಅದೇ ರೀತಿ ಸಚಿವರು ಗ್ಯಾರಂಟಿ ಯೋಜನೆಯಲ್ಲೆ ಪರಿಶಿಷ್ಟರಿಗೆ ಮೀಸಲಿರಿಸಿದ್ದ ಹಣವನ್ನು ಪರಿಶಿಷ್ಟರಿಗೆ ನೀಡುವ ಮಾತು ಆಡಿದ್ದಾರೆ, ಮತ್ತೊಂದೆಡೆ ಗ್ಯಾರಂಟಿ ಫಲಾನುಭವಿಗಳಲ್ಲಿ ಪರಿಶಿಷ್ಟರನ್ನು ಗುರುತಿಸುವ ಕೆಲಸ ಮಾಡಿಲ್ಲ ಎಂಬ ಹೇಳಿಕೆ ಸರ್ಕಾರದಿಂದ ಹೊರ ಬಿದ್ದಿದೆ. ಇಂತಹ ನಡೆ ಸಂವಿಧಾನ ವಿರೋಧಿಯಾಗಿದೆ, ಸಮುದಾಯಕ್ಕೆ ಮೀಸಲಿಟ್ಟು ಹಣವನ್ನು ಬೇರೆ ಉದ್ದೇಶಕ್ಕೆ ಬಳಕೆ ಮಾಡಿರುವುದು ಎಸ್‌ಸಿಪಿ ಕಾಯ್ದೆಯ ಉಲ್ಲಂಘನೆಯಾಗಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಟಿ.ಶ್ರೀಧರ್, ಅಶೋಕ್ ಜಯರಾಮ್, ಎಸ್.ಮಲ್ಲೇಶ್, ನಿತ್ಯಾನಂದ, ಸಿ.ಟಿ.ಮಂಜುನಾಥ್, ಶಿವಲಿಂಗಯ್ಯ, ಸಿದ್ದರಾಜುಗೌಡ, ಉದಯಕುಮಾರ್, ಎನ್.ವಸಂತ್‌ಕುಮಾರ್, ಲೋಕೇಶ್ ಭಾಗವಹಿಸಿದ್ದರು.



ಮಂಡ್ಯ ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಪತ್ರ ರವಾನಿಸಿದರು.

ಆಲಭುಜನಹಳ್ಳಿ ಗ್ರಾಮದಲ್ಲಿ ಬಸವೇಶ್ವರ ಸ್ವಾಮಿ ಬಸವಪ್ಪ ಶಿವೈಕ್ಯ

ದೇವಸ್ಥಾನದಲ್ಲಿ ಧಾರ್ಮಿಕ ವಿಧಿವಿಧಾನಗಳ ಮೂಲಕ ಅಂತ್ಯಕ್ರಿಯೆ

ಭಾರತೀನಗರ, ಫೆ.23– ಸಮೀಪದ ಆಲಭುಜನಹಳ್ಳಿ ಗ್ರಾಮದಲ್ಲಿ ಶ್ರೀ ಬಸವೇಶ್ವರಸ್ವಾಮಿಯ ಬಸವಪ್ಪ ಅನಾರೋಗ್ಯದಿಂದ ಶಿವೈಕ್ಯವಾಗಿದೆ.

ಕಳೆದ ಮೂರು ವರ್ಷಗಳ ಹಿಂದೆ ರಾಮನಗರದಿಂದ ತರಲಾಗಿದ್ದ ಶ್ರೀ ಬಸವೇಶ್ವರಸ್ವಾಮಿಯ ಬಸವಪ್ಪ ತೀವ್ರ ಅನಾರೋಗ್ಯದಿಂದ ಮೃತಪಟ್ಟಿರುವುದು ಭಕ್ತಾದಿಗಳಿಗೆ ನೋವು ತಂದಿದೆ.

ಕುಲದೇವರ ಭಕ್ತಾಧಿಗಳು ಬಸವಪ್ಪನ ಅಂತಿಮ ದರ್ಶನ ಪಡೆದು ಪೂಜೆ ಸಲ್ಲಿಸಿದರು. ನಂತರ ಗ್ರಾಮದ ಮುಖಂಡರು, ಯಜಮಾನರು ಬಸವಪ್ಪನ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಿ ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಿ ದೇವಸ್ಥಾನದ ಬಳಿ ಹಾಲು, ಮೋಸರಿನಿಂದ ಅಭಿಷೇಕ ಮಾಡಿದ ಬಳಿಕ ವಿಭೂತಿಗಟ್ಟಿ, ಉಪ್ಪು, ಬಿಲ್ವಪತ್ರೆ ಪಂಚದ್ರವ್ಯಗಳಿಂದ ಅಂತ್ಯಸಂಸ್ಕಾರ ನೆರವೇರಿಸಿದರು.



ಭಾರತೀನಗರ ಸಮೀಪದ ಆಲಭುಜನಹಳ್ಳಿ ಗ್ರಾಮದಲ್ಲಿ ಶಿವೈಕ್ಯವಾದ ಶ್ರೀ ಬಸವೇಶ್ವರಸ್ವಾಮಿಯ ಬಸವಪ್ಪಗೆ ಭಕ್ತಾದಿಗಳು ಅಂತಿಮ ಪೂಜೆ ಸಲ್ಲಿಸಿದರು.

ಮೈಸೂರಿನ ವಿವಿಧ ಬಡಾವಣೆಯಲ್ಲಿ ಜಾತ್ರಾ ಸಂಭ್ರಮ

- ಮಂಡಿ ಮೊಹಲ್ಲಾದಲ್ಲಿ ಏಳುಕೊಳ್ಳದ ಶ್ರೀ ರೇಣುಕಾ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಜಾತ್ರಾ ಮಹೋತ್ಸವ; ವಿವಿಧ ಪೂಜಾ ಕೈಂಕರ್ಯ
- ರಾಮಾನುಜ ರಸ್ತೆಯ ಶ್ರೀ ಎಲ್ಲಮ್ಮತಾಯಿ ಜಾತ್ರಾ ವಿಶೇಷ; ಮಂಡಿ ಮೊಹಲ್ಲಾ ಶ್ರೀ ಚಿಕ್ಕಲಿಂಗೇಶ್ವರ ಸ್ವಾಮಿ ಆರಾಧನಾ ಮಹೋತ್ಸವ





ಮಂಡಿ ಮೊಹಲ್ಲಾದಲ್ಲಿ ಏಳುಕೊಳ್ಳದ ಶ್ರೀ ರೇಣುಕಾ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ದೇವಸ್ಥಾನದ ಜಾತ್ರಾ ಮಹೋತ್ಸವ ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದ ಬೇಬಿ ಮಠದ ಪೀಠಾಧಿಪತಿ ಶ್ರೀ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಭಾಗವಹಿಸಿ, ಪೂಜೆ ಸಲ್ಲಿಸಿದರು. ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮಸಂಸ್ಥೆ ಟ್ರಸ್ಟ್ ಪದಾಧಿಕಾರಿಗಳು ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ ನಾಳೆ(ಫೆ.24) ನಡೆಯುವ ದೇವಿಯರ ಉತ್ಸವದಲ್ಲಿ ಭಾಗವಹಿಸುವ ಭಕ್ತಾಧಿಗಳನ್ನು ಕಾಣಬಹುದು.

ಮೈಸೂರು, ಫೆ.23(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಹಬ್ಬದ ವಾತಾವರಣ ಮನೆ ಮಾಡಿದ್ದು, ಗ್ರಾಮ ದೇವರುಗಳ ಜಾತ್ರಾ ಮಹೋತ್ಸವ ಭಕ್ತಿ–ಭಾವದಿಂದ ನೆರವೇರುತ್ತಿದೆ.

ಮಂಡಿ ಮೊಹಲ್ಲಾದಲ್ಲಿ ಏಳುಕೊಳ್ಳದ ಶ್ರೀ ರೇಣುಕಾ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ದೇವಸ್ಥಾನದ 77ನೇ ವರ್ಷದ ಜಾತ್ರಾ ಮಹೋತ್ಸವ ನಿನ್ನೆಯಿಂದ ಆರಂಭಗೊಂಡಿದ್ದು, ಎರಡನೇ ದಿನವಾದ ಶುಕ್ರವಾರ ದೇವಿಗೆ ಬೆಳಗ್ಗೆಯಿಂದಲೇ ಶ್ರೀ ನವಗ್ರಹ, ಶ್ರೀ ಪರಶುರಾಮ ಮತ್ತು ಶ್ರೀ ದೇವಿಯವರುಗಳಿಗೆ ವಿಶೇಷ ಪೂಜೆ ಪಂಚಾಮೃತಾಭಿಷೇಕ, ಹೋಮಗಳು, ಪೂರ್ಣಾಹುತಿ, ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ಜರುಗಿದವು. ನಾಳೆ(ಫೆ.24) ಮಾಘಶುದ್ಧ ಹುಣ್ಣಿಮೆ ದಿನವಾಗಿದ್ದು, ಬೆಳಗ್ಗೆಯಿಂದಲೇ ವಿಶೇಷ ಪೂಜಾ ಕೈಂಕರ್ಯದೊಂದಿಗೆ ಅನ್ನ ಸಂತರ್ಪಣೆ, ದೇವಿಯರ ಉತ್ಸವ ಹಾಗೂ ಉಯ್ಯಾಲೋತ್ಸವ ನೆರವೇರಲಿದೆ. ದೇವಿಯರ ಉತ್ಸವ ಮಂಡಿ ಮೊಹಲ್ಲಾದ ಪ್ರಮುಖ ಬೀದಿಗಳಲ್ಲಿ ಸಾಗಲಿದ್ದು, ಸಂಜೆ 6 ಗಂಟೆಯಿಂದ ರಾತ್ರಿ 8.30ರವರೆಗೆ ನಡೆಯಲಿದೆ.

ದೇವಿಯ ಅನುಗ್ರಹ ಪಡೆಯಿರಿ: ಶ್ರೀ ರೇಣುಕಾ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ದೇವಸ್ಥಾನಕ್ಕೆ ಭೇಟಿ ನೀಡಿದ ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದ ಬೇಬಿ ಮಠದ ಪೀಠಾಧಿಪತಿ ಶ್ರೀ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಮಾತನಾಡಿ, ದೇವಿಯ ಮುಂದೆ ನಾವೆಲ್ಲರೂ ಮಕ್ಕಳಂತೆ ಶರಣಾದರಷ್ಟೇ ದೇವಿಯ ಅನುಗ್ರಹ ದೊರೆಯುವುದು. ನಾನು, ನನ್ನದು ಎಂಬುದನ್ನು ಬಿಟ್ಟು ನೆಮ್ಮದಿ–ಸಂತೋಷದಿಂದ ಜೀವನದ ನಡೆಸುವ ಮೂಲಕ ನಮ್ಮ ಅಂತರಂಗದಲ್ಲೇ ದೇವರನ್ನು ಕಾಣಬಹುದಾಗಿದೆ. ಜಾತಿ–ಮತಗಳೆನ್ನದೆ ಎಲ್ಲರೊಡಗೂಡಿ ಅನ್ಯೋನ್ಯತೆಯಿಂದ ಬದುಕುವಂತೆ ಭಕ್ತರಿಗೆ ಕಿವಿಮಾತು ಹೇಳಿದರು. ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮಸಂಸ್ಥೆ ಟ್ರಸ್ಟ್ ಅಧ್ಯಕ್ಷ ಜಿ.ನಾಗರಾಜ್, ಉಪಾಧ್ಯಕ್ಷ ಎನ್.ಶಿವು, ಪ್ರಧಾನ ಕಾರ್ಯದರ್ಶಿ ಹೆಚ್.ಬಿ.ಸತೀಶ್‌ಕುಮಾರ್, ಖಜಾಂಚಿ ಶಿವಕುಮಾರ್ ಪಿ.ಭಂಡಾರಿ, ಸಹ ಕಾರ್ಯದರ್ಶಿ ಎಸ್.ಹರೀಶ್, ಅರ್ಚಕರಾದ ಹೆಚ್.ಎಸ್.ಸುಬ್ರಹ್ಮಣ್ಯಶಾಸ್ತ್ರಿ, ಬಿ.ವಿ.ಶ್ರೀಧರ್, ಎಸ್.ಶ್ರೀಧರ್ ಉಪಸ್ಥಿತರಿದ್ದರು.

ಶ್ರೀ ಎಲ್ಲಮ್ಮತಾಯಿ ಅಮ್ಮನವರ ಜಾತ್ರಾ ಮಹೋತ್ಸವಕ್ಕೆ ಚಾಲನೆ: ನಗರದ ರಾಮಾನುಜ ರಸ್ತೆಯಲ್ಲಿರುವ ಶ್ರೀ ಎಲ್ಲಮ್ಮತಾಯಿ ಅಮ್ಮನವರ 20ನೇ ವರ್ಷದ ಜಾತ್ರಾ ಮಹೋತ್ಸವಕ್ಕೆ ಶುಕ್ರವಾರ ವಿದ್ಯುಕ್ತ ಚಾಲನೆ ದೊರೆಯಿತು. ಅಗ್ರಹಾರದ ಸೀತಾರಾಮರಾವ್ ರಸ್ತೆಯಲ್ಲಿರುವ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದಿಂದ ಅಮ್ಮನವರ ಕಳಸವನ್ನು ವೀರಭದ್ರ ಕುಣಿತ, ಮಂಗಳವಾದ್ಯ ಸಮೇತ ಅಮ್ಮನವರ ನಿಲಯಕ್ಕೆ ತಂದು ಪ್ರತಿಷ್ಠಾಪಿಸುವ ಮೂಲಕ ಮೂರು ದಿನಗಳ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು.

ನಾಳೆ(ಫೆ.24) ಬೆಳಗ್ಗೆಯಿಂದ ಶ್ರೀ ಗಣಹೋಮ, ನವಗ್ರಹ ಹೋಮ, ಶ್ರೀ ರೇಣುಕಾದೇವಿ ಹೋಮ, ಶ್ರೀ ದುರ್ಗಾ ಹೋಮ ಮತ್ತು ಶ್ರೀ ಮೃತ್ಯುಂಜಯ ಹೋಮದೊಂದಿಗೆ ಪೂರ್ಣಾಹುತಿ ನೆರವೇರಲಿದೆ. ನಂತರ ಸತ್ಯನಾರಾಯಣ ಪೂಜೆ ನಡೆಯಲಿದ್ದು, ಶ್ರೀ ಎಲ್ಲಮ್ಮ ಚರಿತ್ರೆ ಮತ್ತು ಚೌಡಿಕೆ ನಾದ ನಂತರ ಮಹಾಮಂಗಳಾರತಿ ನೆರವೇರಲಿದೆ. ಹಾಗೆಯೇ ಅನ್ನಸಂತರ್ಪಣೆಯನ್ನು ಹಮ್ಮಿಕೊಳ್ಳಲಾಗಿದೆ. ಶ್ರೀ ಎಲ್ಲಮ್ಮತಾಯಿ ಅಮ್ಮನವರ ಜಾತ್ರಾ ಮಹೋತ್ಸವದಲ್ಲಿ ಕಿರಣ್‌ಕುಮಾರಸ್ವಾಮಿ, ಮನುದೀಕ್ಷಿತ್, ನಿಜಗುಣಶಾಸ್ತ್ರಿ, ರವಿಕುಮಾರ್, ಶಿವಬೀರಪ್ಪ, ನಾಗೋಜಿರಾವ್, ಬಾಲು, ರವಿ ಮತ್ತಿತರರು ಪಾಲ್ಗೊಂಡಿದ್ದರು.

ಶ್ರೀ ಚಿಕ್ಕಲಿಂಗೇಶ್ವರ ಸ್ವಾಮಿ ದೇವಸ್ಥಾನ: ಮಂಡಿ ಮೊಹಲ್ಲಾದ ಉಪ್ಪಿನಗೆರಿ 1ನೇ ಮೇನ್‌ನಲ್ಲಿರುವ ಶ್ರೀ ಚಿಕ್ಕಲಿಂಗೇಶ್ವರ ಸ್ವಾಮಿ ದೇವಸ್ಥಾನದ 87ನೇ ವರ್ಷದ ಆರಾಧನಾ ಮಹೋತ್ಸವ ಭಕ್ತಿಯಿಂದ ನಡೆಯುತ್ತಿದೆ. ಫೆ.20 ರಿಂದ 27ರವರೆಗೆ ನಡೆಯುವ ಆರಾಧನಾ ಮಹೋತ್ಸವದಲ್ಲಿ ಶುಕ್ರವಾರ ಮೈಸೂರಿನ ಶ್ರೀ.ಕೃ.ರಾಮಚಂದ್ರ ಅವರಿಂದ ಹರಿಭಕ್ತಿಸಾರ ಕಾವ್ಯ ವಾಚನ ಕಾರ್ಯಕ್ರಮ ನಡೆಯಿತು. ದೇವಸ್ಥಾನದ ಆವರಣದಲ್ಲಿ ನಡೆದ ಕಾವ್ಯ ವಾಚನ ಕಾರ್ಯಕ್ರಮದಲ್ಲಿ ಹಲವಾರು ಭಕ್ತರು ಭಾಗವಹಿಸಿದ್ದರು. ಇದಕ್ಕೂ ಮುನ್ನ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.



ಶ್ರೀ ಚಿಕ್ಕಲಿಂಗೇಶ್ವರ ಸ್ವಾಮಿ ದೇವಸ್ಥಾನದ ಆರಾಧನಾ ಮಹೋತ್ಸವ ಹರಿಭಕ್ತಿಸಾರ ಕಾವ್ಯವಾಚನ ಕಾರ್ಯಕ್ರಮ ನಡೆಯಿತು.



ರಾಮಾನುಜ ರಸ್ತೆಯಲ್ಲಿರುವ ಶ್ರೀ ಎಲ್ಲಮ್ಮತಾಯಿ ಅಮ್ಮನವರ ಜಾತ್ರಾ ಮಹೋತ್ಸವಕ್ಕೆ ಶುಕ್ರವಾರ ವಿದ್ಯುಕ್ತ ಚಾಲನೆ ದೊರೆಯಿತು.

ಅಪಾರ ಭಕ್ತ ಸಮೂಹ

ಮಂಡಿ ಮೊಹಲ್ಲಾದ ಶ್ರೀ ರೇಣುಕಾ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವ, ಶ್ರೀ ಚಿಕ್ಕಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಆರಾಧನಾ ಮಹೋತ್ಸವ ಹಾಗೂ ರಾಮಾನುಜ ರಸ್ತೆಯಲ್ಲಿರುವ ಶ್ರೀ ಎಲ್ಲಮ್ಮತಾಯಿ ಅಮ್ಮನವರ ಜಾತ್ರಾ ಮಹೋತ್ಸವ ಸೇರಿದಂತೆ ಹಲವೆಡೆ ಗ್ರಾಮ ದೇವರುಗಳ ಜಾತ್ರಾ ಮಹೋತ್ಸವಗಳು ಅದ್ದೂರಿಯಾಗಿ ನಡೆಯುತ್ತಿದ್ದು, ಅಪಾರ ಭಕ್ತ ಸಮೂಹ ಭಾಗವಹಿಸುತ್ತಿದೆ. ಸಂಜೆಯಾಗುತ್ತಿದ್ದಂತೆ ದೇವಾಲಯಗಳಿಗೆ ತಂಡೋಪ ತಂಡವಾಗಿ ಆಗಮಿಸುತ್ತಿರುವ ಭಕ್ತಾಧಿಗಳು ಹರಕೆಗಳನ್ನು ತೀರಿಸಿ, ಪೂಜೆ ಸಲ್ಲಿಸಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥನೆ ಸಲಿಸುತ್ತಿದ್ದಾರೆ.

ನೀರಾ ತಯಾರಿಸಲು ಅನುಮತಿಗೆ ಸರ್ಕಾರದ ಗಂಭೀರ ಚಿಂತನೆ

ಬೆಂಗಳೂರು, ಫೆ.23(ಕೆಎಂಶಿ)–ಸೇಂದಿ, ಸಾರಾಯಿ ಉಪ ಕಸುಬಾಗಿಸಿಕೊಂಡಿದ್ದ ಸಮುದಾಯಕ್ಕೆ ನೀರಾ ತಯಾರಿಸಲು ಅನುಮತಿ ನೀಡುವ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಶೀಲಿಸುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನ ಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಬಿ.ಕೆ.ಹರಿಪ್ರಸಾದ್ ಮತ್ತಿತರರ ಪ್ರಸ್ತಾವಕ್ಕೆ ಮಧ್ಯೆ ಪ್ರವೇಶಿಸಿ ಮಾತನಾಡಿದ ಅವರು, ಎಸ್.ಎಂ ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ಸೆಕೆಂಡ್ಸ್ ಮದ್ಯ ತಡೆಗೆ ಭಾರೀ ಒತ್ತಡ ಬಂದಿತ್ತು. ಇದನ್ನು ಕೃಷ್ಣ ಅವರು ಗಂಭೀರವಾಗಿ ತೆಗೆದುಕೊಂಡು ಪಾನೀಯ ನಿಗಮ ಆರಂಭಿಸಿದ್ದು, ಇಂದು ದೊಡ್ಡ ಪ್ರಮಾಣದಲ್ಲಿ ಪಾನೀಯ ನಿಗಮದಿಂದ ಆದಾಯ ಬರುತ್ತಿದೆ ಎಂದರು. ಸೇಂದಿ ಮತ್ತು ಸಾರಾಯಿ ನಿಷೇಧದ ನಂತರ ಈ ಕಸುಬಿನಲ್ಲಿ ತೊಡಗಿಸಿಕೊಂಡಿದ್ದವರಿಗೆ ಪರ್ಯಾಯ ವ್ಯವಸ್ಥೆಗೆ ಸರ್ಕಾರ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ, ಆದರೂ ಅಪಸ್ವರ ಕೇಳಿಬಂದ ಹಿನ್ನೆಲೆಯಲ್ಲಿ ನೀರಾ ಮಾರಾಟಕ್ಕೆ ಅನುಮತಿ ನೀಡುವ ಮೂಲಕ ಅವರ ಬದುಕಿಗೆ ದಾರಿ ಮಾಡಿಕೊಡುವ ಚಿಂತನೆ ಇದೆ ಎಂದರು.

ಕಾರ್ಮಿಕರ ಪಟ್ಟಿಯಲ್ಲಿರುವವರು ಫೆರಾರಿ ಕಾರಿರುವವರು! ಜಿಎಸ್‌ಟಿ ಪಾವತಿಸುವವರು!! ದೊಡ್ಡ ಜಮೀನ್ದಾರರು!!!

- ವಿಧಾನಪರಿಷತ್‌ನಲ್ಲಿ ಅಚ್ಚರಿ ವಿಚಾರ ಬಹಿರಂಗಪಡಿಸಿದ ಕಾರ್ಮಿಕ ಸಚಿವ ಸಂತೋಷ್ ಲಾಡ್
- ಕಾರ್ಮಿಕರ ಇಲಾಖೆಯಡಿ ಲಭ್ಯವಿರುವ ಸೌಕರ್ಯಗಳ ಪಡೆಯುವ ಉದ್ದೇಶ



ಬೆಂಗಳೂರು, ಫೆ.23(ಕೆಎಂಶಿ)– ಫೆರಾರಿ ಕಾರು ಹೊಂದಿರುವವರು, ಜಿಎಸ್ಟಿ ಪಾವತಿಸುವವರು, ಜಮೀನುದಾರರು ಸೇರಿದಂತೆ ಆರ್ಥಿಕ ಸುಸ್ಥಿತಿಯಲ್ಲಿರುವವರೇ ಕಾರ್ಮಿಕ ಇಲಾಖೆಯಲ್ಲಿ ತಮ್ಮ ಹೆಸರುಗಳನ್ನು ನೋಂದಣಿ ಮಾಡಿಕೊಂಡಿದ್ದಾರೆಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಬಹಿರಂಗಪಡಿಸಿದ್ದಾರೆ. ವಿಧಾನಪರಿಷತ್‌ನ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಯು.ಬಿ.ವೆಂಕಟೇಶ್ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಕಾರ್ಮಿಕ ಇಲಾಖೆಯಡಿ ಹೆಚ್ಚಿನ ಸವಲತ್ತುಗಳು ಸಿಗುತ್ತಿರುವ ಕಾರಣ ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಸ್ಥಿತಿವಂತರೇ ಕಾರ್ಮಿಕ ಇಲಾಖೆಯಡಿ ಹೆಸರುಗಳನ್ನು ನೊಂದಾಯಿಸಿಕೊಳ್ಳುತ್ತಿದ್ದಾರೆ, ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಕಾರ್ಮಿಕ ಸೇವಾ ಕೇಂದ್ರದ ಮೂಲಕ ತನಿಖೆ ಮಾಡಿಸಲಾಗುವುದು ಎಂದರು.

2007ರಲ್ಲಿ ಕಾರ್ಮಿಕರ ಮಂಡಳಿ ಸ್ಥಾಪನೆಯಾಗಿತ್ತು, ಪ್ರಾರಂಭದಲ್ಲಿ ಮೂರು ಲಕ್ಷ ಕಾರ್ಮಿಕರು ನೋಂದಣಿ ಮಾಡಿಕೊಂಡಿದ್ದರು, 2007ರಲ್ಲಿ ಇದರ ಸಂಖ್ಯೆ 12 ಲಕ್ಷ ಇದ್ದು, ಕಾರ್ಮಿಕರ ಸಂಖ್ಯೆ ಇದ್ದಕ್ಕಿದ್ದಂತೆ 39 ಲಕ್ಷಕ್ಕೆ ಏರಿಕೆಯಾಯಿತು. ಇದೀಗ ಇದು 51 ಲಕ್ಷಕ್ಕೆ ಏರಿಕೆಯಾಗಿದೆ ಎಂದು ಮಾಹಿತಿ ನೀಡಿದರು, ಕೆಲವು ಕಾರ್ಮಿಕರ ನೋಂದಣಿಗೆ ಒತ್ತಡಗಳು ಇರುತ್ತವೆ, 51 ಲಕ್ಷದಲ್ಲಿ 46 ಲಕ್ಷ ಕಾರ್ಮಿಕರು ಅರ್ಹರಿದ್ದರೆ ಉಳಿದವರು ಅನರ್ಹರಾಗಿದ್ದಾರೆ.

ಹಾವೇರಿ ಜಿಲ್ಲೆಯಲ್ಲಿ 3 ಲಕ್ಷ ಕಾರ್ಮಿಕರಲ್ಲಿ 2.7 ಲಕ್ಷ ಕಾರ್ಮಿಕರು ಅನರ್ಹರಿದ್ದಾರೆ, ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ನೋಂದಣಿಯಾಗಿರುವ ಕಾರ್ಮಿಕರು ಅರ್ಹರೋ ಅಥವಾ ಅನರ್ಹರೋ ಎಂಬುದನ್ನು ಅಂಬೇಡ್ಕರ್ ಸೇವಾ ಕೇಂದ್ರದ ಮೂಲಕ ತನಿಖೆ ಮಾಡಿಸು ತ್ತೇವೆ ಎಂದರು.

ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ಹೊರಗುತ್ತಿಗೆ ಪಡೆದುಕೊಂಡು ತನಿಖೆ ಮಾಡಿಸುತ್ತೇವೆ. ಯಾವುದೇ ಒಬ್ಬ ಕಾರ್ಮಿಕ ನೋಂದಣಿ ಮಾಡಿಕೊಳ್ಳಬೇಕಾದರೆ ಗ್ರಾಮ ಪಂಚಾಯ್ತಿಯ ಪಿಡಿಒ ಸೇರಿದಂತೆ ವಿವಿಧ ಹಂತಗಳಲ್ಲಿ ಪರಿಶೀಲನೆಯಾದ ಬಳಿಕವೇ ಈ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. ಸರ್ಕಾರದ ಸವಲತ್ತು ಪಡೆಯುವ ಏಕೈಕ ಉದ್ದೇಶದಿಂದಲೇ ಆರ್ಥಿಕವಾಗಿ ಸದೃಢ ಇರುವವರು ಇದರಲ್ಲಿ ಸೇರಿಕೊಂಡಿದ್ದಾರೆ, ತನಿಖೆ ನಡೆದ ನಂತರ ಇದರ ಸತ್ಯಾಸತ್ಯತೆ ಗೊತ್ತಾಗಲಿದೆ ಎಂದರು.

ನಿಜವಾದ ಫಲಾನುಭವಿಗಳಿಗೆ ಸರ್ಕಾರದ ಸವಲತ್ತು ಸಿಗಬೇಕೆಂಬುದು ನಮ್ಮ ಉದ್ದೇಶ, ತನಿಖೆಯಲ್ಲಿ ಅನರ್ಹರು ಇದ್ದರೆ ಮುಲಾಜಿಲ್ಲದೆ ತೆಗೆದು ಹಾಕುತ್ತೇವೆ, ಒಂದು ವೇಳೆ ಇದರಲ್ಲಿ ಅಧಿಕಾರಿಗಳು ಶಾಮೀಲಾಗಿರುವುದು ಕಂಡುಬಂದರೆ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಕೆ ಕೊಟ್ಟರು.

ರೌಡಿಗಳ ಹತ್ತಿಕ್ಕಲು ಕಠಿಣ ಕ್ರಮ

● ಗೃಹ ಸಚಿವ ಡಾ.ಪರಮೇಶ್ವರ್ ಭರವಸೆ
● ಜನರ ಸುರಕ್ಷತೆಗೆ ಪೊಲೀಸರು ಸರ್ವ ರೀತಿ ಸಜ್ಜು



ಬೆಂಗಳೂರು, ಫೆ.23(ಕೆಎಂಶಿ)– ರೌಡಿಗಳ ಅಟ್ಟಹಾಸ ಹತ್ತಿಕ್ಕಲು ಪೊಲೀಸರು ಸಮರ್ಥ ವಾಗಿದ್ದು, ಪ್ರತಿಯೊಬ್ಬರಿಗೂ ಸುರಕ್ಷತೆ ಒದಗಿಸಲು ಇಲಾಖೆ ಸಿದ್ಧವಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧಾನಪರಿಷತ್‌ನಲ್ಲಿಂದು ಭರವಸೆ ನೀಡಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ನಾಗರಾಜ್ ಯಾದವ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರೌಡಿಗಳ ಚಲನವಲನಗಳ ಮೇಲೆ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದಾರೆ, ಪ್ರತಿ ಮೂರ್ನಾಲ್ಕು ತಿಂಗಳಿಗೊಮ್ಮೆ ಅವರ ಮನೆಗಳ ಮೇಲೆ ದಾಳಿ ನಡೆಸುತ್ತಾರೆ, ಕಾನೂನು ಮೀರಿ ವರ್ತನೆ ಮಾಡಿದರೆ ಕಾನೂನಿನ ಪ್ರಕಾರವೇ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ರೌಡಿಗಳ ಮನೆಯಲ್ಲಿ ಬಂದೂಕು, ಲಾಂಗ್ ಪತ್ತೆ: ಇತ್ತೀಚೆಗೆ ರೌಡಿಗಳ ಮನೆಗಳ ಮೇಲೆ ದಾಳಿ ನಡೆದಾಗ ಬಂದೂಕು, ಲಾಂಗ್ ಸೇರಿದಂತೆ ಮತ್ತಿತರ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ, ಅಲ್ಲದೆ ಆಯಾ ಪೊಲೀಸ್ ಠಾಣೆ ವ್ಯಾಪ್ತಿಗಳಲ್ಲಿ ರೌಡಿಶೀಟರ್‌ಗಳ ಚಲನ–ವಲನ ಗಳ ಬಗ್ಗೆ ಕಣ್ಣಿಡುವಂತೆ ಸೂಚನೆ ಕೊಡಲಾಗಿದೆ ಎಂದು ಸಚಿವರು ತಿಳಿಸಿದರು.

ಬೆಂಗಳೂರಲ್ಲಿ 7,500 ಕ್ಯಾಮರಾ ಅಳವಡಿಕೆ: ನಿರ್ಭಯ ಯೋಜನೆಯಡಿ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ, 655 ಕೋಟಿ ರೂ. ವೆಚ್ಚದಲ್ಲಿ ನಗರದಾದ್ಯಂತ 7,500 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇತ್ತೀಚೆಗೆ ಸಿಟಿ ಕಮಾಂಡ್ ಕಂಟ್ರೋಲ್ ರೂಮ್ ತೆರೆದಿದ್ದು, ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಪ್ರದೇಶಗಳಲ್ಲೂ ಈ ಕ್ಯಾಮೆರಾಗಳು ದಿನದ 24 ಗಂಟೆ ಕಾರ್ಯ ನಿರ್ವಹಿಸುತ್ತವೆ ಎಂದರು. ನಗರ ಪ್ರದೇಶಗಳಲ್ಲೂ ಸಿಸಿಟಿವಿ ಕ್ಯಾಮೆರಾಗಳ ಕಾರ್ಯ ನಿರ್ವಹಣೆ ಕುರಿತಂತೆ ಕಂಟ್ರೋಲ್ ರೂಮ್ ಮೂಲಕವೇ ನಿಯಂತ್ರಣ ಮಾಡುವ ವ್ಯವಸ್ಥೆಯೂ ಇದೆ, ಎಲ್ಲಾದರೂ ಸಿಸಿಟಿವಿ ಕ್ಯಾಮೆರಾಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದಿದ್ದರೆ ಇಲ್ಲಿಂದಲೇ ನಿರ್ದೇಶನ ನೀಡಬಹುದು, ಇದರಿಂದ ಅಪರಾಧ ನಿಯಂತ್ರಿಸಲು ಸಾಧ್ಯವಾಗುತ್ತದೆ.

ಸೇಫ್ಟಿ ಹೈ ಲ್ಯಾಂಡ್: ಇತ್ತೀಚೆಗೆ ಸೇಫ್ಟಿ ಹೈಲ್ಯಾಂಡ್ ಎಂಬ ವಿನೂತನ ಯೋಜನೆಯನ್ನು ಜಾರಿ ಮಾಡಿದ್ದೇವೆ. ಇದರಡಿಯಾರಾದರೂ ಹಲ್ಲೆ ನಡೆಸುವುದು, ಬ್ಯಾಗ್ ಕಿತ್ತುಕೊಂಡು ಹೋಗುವುದು, ನಡುರಸ್ತೆಯಲ್ಲೇ ಆಭರಣ ದೋಚುವುದು ಕಂಡುಬಂದರೆ ತಕ್ಷಣವೇ ಟೆಲಿಫೋನ್ ನಂತೆ ಕಾಣುವ ಘಟಕಕ್ಕೆ ತೆರಳಿ ಬಟನ್ ಒತ್ತಿದರೆ, ಕೇವಲ 5 ನಿಮಿಷದೊಳಗೆ ಸ್ಥಳಕ್ಕೆ ಪೊಲೀಸರು ಆಗಮಿಸುತ್ತಾರೆ. ಇದರಲ್ಲಿ ಪ್ರತಿಯೊಂದು ಮಾಹಿತಿಗಳು ದಾಖಲಾಗುವುದ ರಿಂದ ಅಪರಾಧ ಎಸಗಿದವರು ಅಷ್ಟು ಸುಲಭವಾಗಿ ತಲೆಮರೆಸಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ವಿವರಿಸಿದರು.

ರಾಷ್ಟ್ರದಲ್ಲೇ ಮೊದಲು ಸೈಬರ್ ಕ್ರೈಂ ಠಾಣೆ ಆರಂಭ: ಇಡೀ ರಾಷ್ಟ್ರದಲ್ಲೇ ಸೈಬರ್ ಕ್ರೈಂ ಠಾಣೆಗಳನ್ನು ಆರಂಭಿಸಿದ ಮೊದಲ ನಗರ ಬೆಂಗಳೂರು, ಪ್ರಾರಂಭದಲ್ಲಿ ಸೈಬರ್ ಅಪರಾಧ ಎಸಗಿದವರ ವಿರುದ್ಧ ನಿರ್ದಿಷ್ಟ ಠಾಣೆಗಳಲ್ಲಿ ಮಾತ್ರ ದೂರು ನೀಡಲು ಅವಕಾಶವಿತ್ತು. ಇದನ್ನು ಬದಲಾಯಿಸಿ ಎಲ್ಲಾ ಠಾಣೆಗಳಲ್ಲೂ ದೂರು ನೀಡುವ ಅವಕಾಶ ಕಲ್ಪಿಸಲಾಗಿದೆ, ಇದಕ್ಕಾಗಿ ಹೊಯ್ಸಳ ತಂಡದವರಿಗೆ ವಿಶೇಷ ತರಬೇತಿ ನೀಡಲಾಗುತ್ತದೆ. ಸಾರ್ವಜನಿಕರ ರಕ್ಷಣೆಗಾಗಿ 112 ಸಹಾಯವಾಣಿ ಆರಂಭಿಸಿದ್ದೇವೆ, ಇದಕ್ಕೆ ಸರಿಯಾದ ಮಾಹಿತಿ ಕೊಟ್ಟರೆ ಅಪರಾಧ ಸ್ಥಳಕ್ಕೆ ತಕ್ಷಣವೇ ಪೊಲೀಸರು ಆಗಮಿಸಿ ಅಪರಾಧಿಗಳನ್ನು ಹಿಡಿಯಲು ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಬೆಂಗಳೂರು ಮಹಾನಗರದಲ್ಲಿ ಅಪರಾಧ ನಿಯಂತ್ರಣಕ್ಕೆ ಸರ್ಕಾರ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದೆ. ಎಲ್ಲರಿಗೂ ಸುರಕ್ಷತೆ ಒದಗಿಸುವುದೇ ಗೃಹ ಇಲಾಖೆಯ ಪ್ರಮುಖ ಉದ್ದೇಶವಾಗಿದೆ ಎಂದು ಪರಮೇಶ್ವರ್ ಹೇಳಿದರು.

ಮಾ.3ರಂದು ಮೈಸೂರು ವಿವಿ 104ನೇ ಘಟಿಕೋತ್ಸವ

ಮೈಸೂರು, ಫೆ23– ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವವನ್ನು ಮಾ.3ರಂದು ಬೆಳಗ್ಗೆ10 ಗಂಟೆಗೆ ವಿವಿಯ ಕ್ರಾಫರ್ಡ್ ಭವನದಲ್ಲಿ ನಡೆಯಲಿದೆ ವಿವಿಯ ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಬೆಂಗಳೂರಿನ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ವಿಶ್ರಾಂತ ನಿರ್ದೇಶಕ ಡಾ..ಸಿ.ಎನ್.ಮಂಜುನಾಥ್ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ವಿವಿಯ ಸಮ ಕುಲಾಧಿಪತಿಗಳೂ ಆದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಉಪಸ್ಥಿತರಿರಲಿದ್ದಾರೆ.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಪರ್ಸ್ ಕಳ್ಳತನ

ಮೈಸೂರು, ಫೆ23(ಎಂಕೆ)– ಮೈಸೂರಿನ ಗ್ರಾಮಾಂತರ(ಸಬರ್‌ಬನ್) ಬಸ್ ನಿಲ್ದಾಣದಲ್ಲಿ ಮಹಿಳೆಯೊಬ್ಬರ ಪರ್ಸ್ ಕಳ್ಳತನವಾಗಿದ್ದು, ಅದರಲ್ಲಿದ್ದ 2.85 ಲಕ್ಷ ಮೌಲ್ಯದ ಚಿನ್ನಾಭರಣ ಕಳೆದುಕೊಂಡಿದ್ದಾರೆ. ಮಡಿಕೇರಿಯ ಪೊನ್ನಂಪೇಟೆ ಬಳಿಯ ಕಾನೂರು ಗ್ರಾಮದ ನಿವಾಸಿ ಎಂ.ಭಾಗ ಎಂಬುವರು ತಮ್ಮ ಸಹೋದರಿ ಭೇಟಿಗೆ ಮೈಸೂರಿಗೆ ಬಂದಿದ್ದಾರೆ. ವಾಪಸ್ ತೆರಳುವಾಗ ಬಸ್ ನಿಲ್ದಾಣದಲ್ಲಿ ತಮ್ಮ ಪರ್ಸ್ ಹಾಗೂ ಪರ್ಸ್‌ನಲ್ಲಿದ್ದ ಚಿನ್ನಾಭರಣ ಕಳ್ಳತನವಾಗಿದೆ ಎಂದು ಲಷ್ಕರ್ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ನೀರು ಒದಗಿಸುವ ಹೊಸ ಯೋಜನೆ

ಹರಿದು ಹೋಗುವುದನ್ನು ತಪ್ಪಿಸಬಹುದು ಹಾಗೂ ಭೂಗರ್ಭ ಜಲ ಹೆಚ್ಚಳಕ್ಕೂ ಸಹಕಾರಿಯಾಗುತ್ತದೆ ಎಂದರು. ಈಗಾಗಲೇ ಕೇಂದ್ರ ಮತ್ತು ರಾಜ್ಯದ ವಿವಿಧ ಯೋಜನೆಗಳ ಮೂಲಕ ಕೆರೆ ತುಂಬಿಸುವ ಕಾರ್ಯ ನಡೆದಿದೆ. ಈ ಬಾರಿಯ ಬಜೆಟ್‌ನಲ್ಲಿ ಇಲಾಖೆಗೆ 4 ಸಾವಿರ ಕೋಟಿ ರೂ. ಕಡಿತ ಮಾಡಲಾಗಿದೆ, ಮುಂದಿನ ದಿನಗಳಲ್ಲಿ ಹಣಕಾಸಿನ ಸಾಧ್ಯತೆ ನೋಡಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುತ್ತೇವೆ.

ನಮ್ಮ ಇಲಾಖೆಯಲ್ಲಿ ಈಗಾಗಲೇ 1.25 ಲಕ್ಷ ಕೋಟಿಯಷ್ಟು ಕಾಮಗಾರಿಗಳು ನಡೆಯುತ್ತಿವೆ. ಈಗ ನಡೆಯುತ್ತಿರುವ ಕಾಮಗಾರಿಗಳ ಗುತ್ತಿಗೆದಾರರಿಗೆ ಶೇಕಡ 10 ರಿಂದ 15ರಷ್ಟು ಬಿಲ್ ಪಾವತಿ ಮಾಡುವ ಪರಿಸ್ಥಿತಿ ಇದೆ. ಗುತ್ತಿಗೆದಾರರಿಗೆ ಹಣ ನೀಡಿದರೆ ಯೋಜನೆಗಳು ತ್ವರಿತಗತಿಯಲ್ಲಿ ಪೂರ್ಣಗೊಳ್ಳುತ್ತವೆ. ಕೇಂದ್ರದ ಅಸಹಕಾರದಿಂದ ನಾವು ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದ್ದೇವೆ. ಮುಂದಿನ ಹಣಕಾಸು ಪರಿಸ್ಥಿತಿ ನೋಡಿಕೊಂಡು ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದಾಗಿ ತಿಳಿಸಿದರು.

ಲೋಕಸಭೆಗೆ ನನ್ನ ಸ್ಪರ್ಧೆ ಖಚಿತ

ಸಿಗ್ತಿತ್ತು ಜೆಡಿಎಸ್ ನಾಯಕರು ಏನಾದರೂ ಹೇಳಬಹುದು ಆದರೆ ಅಧಿಕೃತವಾಗಬೇಕು. ಅಂತಿಮ ಘೋಷಣೆ ಆಗುವವರೆಗೂ ಮಾತನಾಡುವುದು ಸೂಕ್ತ ಅಲ್ಲ ಎಂದು ಹೇಳಿದರು. ಕಳೆದ 5 ವರ್ಷಗಳ ದಿಶಾ ಸಭೆಗಳಲ್ಲಿ ಹಲವು ವಿಷಯ ಚರ್ಚೆಯಾಗಿದೆ. ಚರ್ಚೆಯಾದ ವಿಷಯ ಎಷ್ಟರ ಮಟ್ಟಿಗೆ ಜಾರಿಯಾಗಿದೆ ಅನ್ನೋ ಬಗ್ಗೆ ವಿವರ ಕೇಳಬೇಕು. ಭ್ರೂಣ ಹತ್ಯೆ ಬಗ್ಗೆ ನಾನು 4 ವರ್ಷಗಳ ಹಿಂದೆಯೇ ಪ್ರಸ್ತಾಪ ಮಾಡಿದ್ದೆ. ಆದರೆ ಅದರ ವಿರುದ್ಧ ಸರಿಯಾದ ಕ್ರಮ ಆಗಲಿಲ್ಲ. ಭ್ರೂಣ ಹತ್ಯೆ ತಡೆಯಲು ಜಿಲ್ಲಾಡಳಿತ ವಿಫಲವಾಗಿದ್ದು ಬೇಸರ ತರಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೇಬಿಬೆಟ್ಟ ಟ್ರಯಲ್ ಬ್ಲಾಸ್ಟ್ ವಿಚಾರದ ಬಗ್ಗೆ ಮಾತನಾಡಿ, ಟ್ರಯಲ್ ಬ್ಲಾಸ್ಟ್‌ಗೆ ಕೋರ್ಟ್ ಆದೇಶ ಇದೆ. ಆದರೆ ವಾಸ್ತವ ಮಾಹಿತಿಯನ್ನು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಟ್ರಯಲ್ ಬ್ಲಾಸ್ಟ್‌ಗೆ ರೈತರ ವಿರೋಧ ಇದೆ. ರೈತರ ಮನವಿಯಲ್ಲಿ ನ್ಯಾಯ ಇದೆ. ನಾನು ಅವರೊಂದಿಗಿದ್ದು, ಟ್ರಯಲ್ ಬ್ಲಾಸ್ಟ್ ನಡೆಸಿದರೆ ಅನುಕೂಲಕ್ಕಿಂತ ಅನಾನುಕೂಲ ಜಾಸ್ತಿ ಆಗಲಿದೆ. ಟ್ರಯಲ್ ಬ್ಲಾಸ್ಟ್‌ಗೆ ಸ್ಟೇ ಆರ್ಡರ್ ತರಲು ರೈತ ಸಂಘ ಮುಂದಾಗಿದೆ. ಜಿಲ್ಲಾಡಳಿತಕ್ಕೆ ಮೇಲ್ಮನವಿ ಸಲ್ಲಿಸುವ ಅವಕಾಶ ಇಲ್ಲ ಎಂದರು.

ಪ್ರೊ.ಲೋಕನಾಥ್ ನೇಮಕಾತಿ ಊರ್ಜಿತ

ಹೊಸದಾಗಿ ಕುಲಪತಿ ನೇಮಕಾತಿಗೆ ಪ್ರಕ್ರಿಯೆ ಆರಂಭಿಸುವಂತೆ ಕೂಡ ಆದೇಶ ನೀಡಿತ್ತು. ಆದರೆ ಹೈಕೋರ್ಟ್ ಏಕ ಸದಸ್ಯ ಪೀಠದ ಆದೇಶವನ್ನು ಪ್ರೊ.ಲೋಕನಾಥ್ ಹೈಕೋರ್ಟ್ ದ್ವಿಸದಸ್ಯ ಪೀಠದಲ್ಲಿ ಪ್ರಶ್ನಿಸಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ ಹಿಂದಿನ ಮುಖ್ಯ ನ್ಯಾಯಮೂರ್ತಿಗಳಾದ ಪ್ರಸನ್ನ ವರಾಲೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಒಳಗೊಂಡ ದ್ವಿಸದಸ್ಯ ಪೀಠ ಏಕ ಸದಸ್ಯ ಪೀಠದ ಆದೇಶಕ್ಕೆ ತಡೆಯಾಜ್ಞೆ ನೀಡಿತ್ತು. ಹಾಗೆಯೇ ಪ್ರೊ.ಲೋಕನಾಥ್ ಕುಲಪತಿಯಾಗಿ ಮುಂದುವರೆಯುವಂತೆ ಕೂಡ ಮಧ್ಯಂತರ ಆದೇಶ ನೀಡಿ ವಿಚಾರಣೆ ಮುಂದೂಡಿತ್ತು. ತರುವಾಯ ನಡೆದ ವಿಚಾರಣೆ ವೇಳೆ ಪ್ರೊ.ಶರತ್ ಅನಂತಮೂರ್ತಿ ಪರ ವಕೀಲ ಪ್ರೊ.ರವಿವರ್ಮ ಕುಮಾರ್ ಪ್ರೊ.ಲೋಕನಾಥ್ ಅವರ ನೇಮಕಾತಿ ಅಸಿಂಧುಗೊಳಿಸುವಂತೆ ವಾದ ಮಂಡಿಸಿದ್ದರು. ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ದಿನೇಶ್ ಕುಮಾರ್ ನೇತೃತ್ವದ ದ್ವಿಸದಸ್ಯ ಪೀಠ ಪ್ರೊ.ಲೋಕನಾಥ್ ಅವರ ನೇಮಕಾತಿಯನ್ನು ಊರ್ಜಿತಗೊಳಿಸಿದೆ. ಪ್ರೊ.ಲೋಕನಾಥ್ ಕುಲಪತಿಯಾಗಿ ಮುಂದುವರೆಯುವಂತೆ ಆದೇಶ ಕೂಡ ನೀಡಿದೆ. ಈ ಮೂಲಕ ಪ್ರೊ.ಲೋಕನಾಥ್ ಕುಲಪತಿಯಾಗಿ ಮುಂದುವರೆಯಬಹುದಾಗಿದೆ.

ಜನರ ಆರೋಗ್ಯ ಸುಧಾರಿಸಲು ಶ್ರಮಿಸುವ ವೈದ್ಯರ ಆಯಸ್ಸು 60 ವರ್ಷ ಅಷ್ಟೇ!

● ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ವೈದ್ಯರ ಸೇವೆ ಸ್ಮರಣೆ ● ಸುಯೋಗ್ ಆಸ್ಪತ್ರೆಯಲ್ಲಿ ಉಚಿತ ಹೃದ್ರೋಗ ತಪಾಸಣೆ, ಆ್ಯಂಜಿಯೋಗ್ರಾಂ, ಆ್ಯಂಜಿಯೋಪ್ಲಾಸ್ಟಿ ಶಿಬಿರ ಉದ್ಘಾಟನೆ



ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯಲ್ಲಿ ಹಮ್ಮಿಕೊಂಡಿರುವ 3ನೇ ಉಚಿತ ಹೃದ್ರೋಗ ತಪಾಸಣಾ ಮತ್ತು ಆ್ಯಂಜಿಯೋಗ್ರಾಂ ಮತ್ತು ಆ್ಯಂಜಿಯೋಪ್ಲಾಸ್ಟಿ ಶಿಬಿರವನ್ನು ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಆದಿಚುಂಚನಗಿರಿ ಶಾಖಾಮಠದ ಶ್ರೀ ಸೋಮನಾಥೇಶ್ವರ ಸ್ವಾಮೀಜಿ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮತ್ತಿತರರಿದ್ದರು.

ಮೈಸೂರು, ಫೆ.23(ಎಂಕೆ)– ಮನುಷ್ಯರ ಸರಾಸರಿ ವಯಸ್ಸನ್ನು ಹೆಚ್ಚಿಸಲು ಹಗಲಿರುಳು ಶ್ರಮಿಸುವ ವೈದ್ಯರ ಸರಾಸರಿ ಆಯಸ್ಸು 60 ವರ್ಷ ಮಾತ್ರ. ಅವರ ಸೇವೆಯ ಮಹತ್ವವನ್ನು ತಿಳಿದರಷ್ಟೇ 'ವೈದ್ಯೋ ನಾರಾಯಣೋ ಹರಿಃ' ಎಂಬ ಪದದ ಅರ್ಥ ನಮಗೆ ಅರಿವಾಗುತ್ತದೆ ಎನ್ನುವ ಮೂಲಕ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ವೈದ್ಯರ ಸೇವೆಯನ್ನು ಸ್ಮರಿಸಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆಯಲ್ಲಿ ಹಮ್ಮಿಕೊಂಡಿರುವ 3ನೇ ಉಚಿತ ಹೃದ್ರೋಗ ತಪಾಸಣೆ, ಆ್ಯಂಜಿಯೋಗ್ರಾಂ ಮತ್ತು ಆ್ಯಂಜಿಯೋಪ್ಲಾಸ್ಟಿ ಶಿಬಿರ ಉದ್ಘಾಟಿಸಿ ಮಾತನಾಡಿದ ಶ್ರೀಗಳು, ಮನುಷ್ಯನ ಸರಾಸರಿ ವಯಸ್ಸಿನ ಪ್ರಮಾಣ 70 ವರ್ಷ. ಅದರಲ್ಲಿ ಪುರುಷರದ್ದು 65, ಮಹಿಳೆಯರದ್ದು 70 ವರ್ಷ. ಆದರೆ ವೈದ್ಯರದ್ದು ಮಾತ್ರ 60 ವರ್ಷವಾಗಿದೆ. ಮನುಷ್ಯನ ವಯಸ್ಸಿನ ಪ್ರಮಾಣವನ್ನು ಹೆಚ್ಚಿಸಲು ದುಡಿಯುತ್ತಿರುವ, ಆರೋಗ್ಯ ಕ್ಷೇತ್ರಕ್ಕಾಗಿ ತಮ್ಮ ಬದುಕನ್ನು ಮೀಸಲಿಟ್ಟಿರುವ ವೈದ್ಯರ ಸರಾಸರಿ ವಯಸ್ಸು 60 ವರ್ಷವಾಗಿರುವುದರಲ್ಲಿಯೇ ಅವರ ವೃತ್ತಿಯ ಒತ್ತಡ ಎಷ್ಟೆಂಬುದು ಅರಿವಾಗುತ್ತದೆ. ಇದು ನಮಗೆ ಅರ್ಥವಾದರೆ ವೈದ್ಯರ ಮೇಲಿನ ಗೌರವ ಇನ್ನಷ್ಟು ಹೆಚ್ಚಾಗಲಿದೆ ಎಂದು.

ದೇವರನ್ನು ಬಿಟ್ಟರೆ ತಾಯಿ–ತಂದೆಯೇ ದೇವರು. ತಾಯಿ–ತಂದೆಯರು ಬಿಟ್ಟಿದ್ದೆ ಆದರೆ, ದೇವರು ಕೊಟ್ಟ ಈ ದೇಹವನ್ನು ಸರಿಯಾದ ರೀತಿಯಲ್ಲಿ ಕಾಪಾಡಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ದೇಹವೆಂಬ ಇಂಜಿನ್ ಅನ್ನು ಸರಿಯಾದ ರೀತಿಯಲ್ಲಿ ಮತ್ತೆ ಫಿಕ್ಸ್ ಮಾಡುವ ಶಕ್ತಿ ನಮ್ಮನ್ನು ಭೂಮಿಗೆ ಕಳುಹಿಸಿಕೊಟ್ಟ ದೇವರಿಗೂ, ಜನ್ಮ ನೀಡಿದ ತಂದೆ–ತಾಯಿಗೂ ಇಲ್ಲ. ಇರುವುದು ವೈದ್ಯರಿಗೆ ಮಾತ್ರ. ಆದ್ದರಿಂದಲೇ ವೈದ್ಯರಿಗೆ 'ವೈದ್ಯೋ ನಾರಾಯಣೋ ಹರಿಃ' ಎಂದು ದೇವರಿಗೆ ಹೋಲಿಸಲಾಗುತ್ತದೆ.

ಯಾವ ವೈದ್ಯನ ಚಿಕಿತ್ಸಾಲಯ ಅಥವಾ ಆಸ್ಪತ್ರೆಯಲ್ಲಿರುವ ಗಿಡಗಳು ಒಣಗಿದ್ದರೆ ಅಂತಹವರ ಆಸ್ಪತ್ರೆಗೆ ಹೋಗಬೇಡಿ. ಏಕೆಂದರೆ ಒಂದು ಸಣ್ಣ ಗಿಡವನ್ನು ಆರೈಕೆ ಮಾಡದ ವೈದ್ಯ, ರೋಗಿಗಳ ಆರೈಕೆ ಮಾಡುತ್ತಾರೆಯೇ ಎಂಬ ಮಾತಿದೆ. ಆದರೆ ಸುಯೋಗ್ ಆಸ್ಪತ್ರೆಯ ಒಳಗೂ–ಹೊರಗೂ ಹಸಿರು ಗಿಡ–ಮರಗಳು ಸೆಳೆಯುತ್ತಿವೆ ಎಂದು ಶ್ಲಾಘಿಸಿದರಲ್ಲದೆ ದೇಹದಲ್ಲಿ ರೋಗ ಪ್ರಕಟವಾಗುವುದಕ್ಕೂ ಮುನ್ನವೇ ಸಣ್ಣ ಅಥವಾ ಸೂಕ್ಷ್ಮ ಸೂಚನೆ ನಮಗೆ ಕಾಣುತ್ತದೆ. ಅದನ್ನು ಪ್ರಾರಂಭದಲ್ಲೇ ಅರಿತು ಚಿಕಿತ್ಸೆ ಪಡೆದರೆ ಆಸ್ಪತ್ರೆಗಳಿಗೆ ಹೋಗುವ ಅನಿವಾರ್ಯತೆ ಇರುವುದಿಲ್ಲ ಎಂದು ಎಚ್ಚರಿಸಿದರು.

ಕೃತಿ ಬಿಡುಗಡೆ: ಇದೇ ವೇಳೆ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ರಚಿತ 'ಹಾರ್ಟ್ ಅಟ್ಯಾಕ್' ಕೃತಿಯನ್ನು ಬಿಡುಗಡೆ ಮಾಡಿದರು. ಆದಿಚುಂಚನಗಿರಿ ಶಾಖಾಮಠದ ಶ್ರೀ ಸೋಮನಾಥೇಶ್ವರ ಸ್ವಾಮೀಜಿ, ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ, ಸುಯೋಗ್ ಆಸ್ಪತ್ರೆ ಟ್ರಸ್ಟಿ ಸುಧಾ ಯೋಗಣ್ಣ, ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ, ವೈದ್ಯಕೀಯ ನಿರ್ದೇಶಕ ಡಾ.ಆರ್.ರಾಜೇಂದ್ರಪ್ರಸಾದ್, ನಿರ್ದೇಶಕಿಯರಾದ ಡಾ.ಸೀಮಾ ಯೋಗಣ್ಣ, ಡಾ.ಯಶಿತಾ ರಾಜ್ ಮತ್ತಿತರರು ಉಪಸ್ಥಿತರಿದ್ದರು.

ಮೂರನೇ ದಿನವೂ ಸರ್ವರ್ ಸಮಸ್ಯೆ

● ಮೈಸೂರು ಜಿಲ್ಲೆಯ 14 ಸೇರಿ ರಾಜ್ಯದ 265 ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ನೋಂದಣಿ ಕಾರ್ಯ ಸ್ಥಗಿತ ● ಸ್ವತ್ತುಗಳ ನೊಂದಣಿಯಾಗದೆ ಸರ್ಕಾರದ ಬೊಕ್ಕಸಕ್ಕೆ ನೂರಾರು ಕೋಟಿ ರೂ. ನಷ್ಟ ● ಪರದಾಡುತ್ತಿರುವ ಸಾರ್ವಜನಿಕರು



ಮೈಸೂರು, ಫೆ. 23 (ಆರ್‌ಕೆ)– ಕಾವೇರಿ 2.0 ಪೋರ್ಟಲ್‌ನಲ್ಲಿ ಉಂಟಾಗಿರುವ ತಾಂತ್ರಿಕ ದೋಷ ಸರಿಪಡಿಸದ ಕಾರಣ ಸ್ವತ್ತುಗಳ ನೋಂದಣಿಯಾಗದೇ ಕಳೆದ ಮೂರು ದಿನಗಳಿಂದ ರಾಜ್ಯಾದ್ಯಂತ ಜನರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಆಸ್ತಿಗಳ ಮಾರಾಟ, ಗುತ್ತಿಗೆ ಕರಾರು, ದಾನಪತ್ರ, ಒಡಂಬಡಿಕೆ, ವಿವಾಹ ನೋಂದಣಿಗಾಗಿ ಅಭಿವೃದ್ಧಿಪಡಿಸಿದ್ದ ಹೊಸ ಸಾಫ್ಟ್‌ವೇರ್, ಸಿಟಿಜನ್ ಲಾಗಿನ್‌ಗಳಾವು ಲಭ್ಯವಾಗದೇ ಸಾರ್ವಜನಿಕರು ಮೂರನೇ ದಿನವಾದ ಇಂದೂ ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ಹೈರಾಣಾದರು.

ಪರಿಣಾಮ ಉಪನೋಂದಣಾಧಿಕಾರಿಗಳು, ಕಚೇರಿ ಸೂಪರಿಂಟೆಂಡೆಂಟ್‌ಗಳು, ಅಕೌಂಟೆಂಟ್‌ಗಳು, ಗುಮಾಸ್ತರು, ಡಿಟಿಪಿ ಆಪರೇಟರ್‌ಗಳು, ಸಹಾಯಕರಿಗೆ ಕೆಲಸವೇ ಇಲ್ಲದಂತಾಗಿದೆಯಲ್ಲದೇ, ಕಚೇರಿಗಳ ಹೊರಗೆ ಡೀಡ್ ರೈಟರ್‌ಗಳು, ಕಂಪ್ಯೂಟರ್ ಸೆಂಟರ್‌ಗಳು, ಬ್ರೋಕರ್‌ಗಳಿಗೂ ವಹಿವಾಟು ನಡೆಯದೇ ಕಂಗಾಲಾಗಿದ್ದಾರೆ.

ಪ್ರತೀ ದಿನ ಜನರು ದಾಖಲೆ ಪತ್ರಗಳೊಂದಿಗೆ ಸಬ್ ರಿಜಿಸ್ಟ್ರಾರ್ ಕಚೇರಿಗೆ ಬಂದು ಸರ್ವರ್ ಡೌನ್ ಆಗಿರುವುದರಿಂದ ಇನ್ನೇನು ಸರಿ ಹೋಗಬಹುದೆಂದು ಕಾದು ಕಾದು ಸಂಜೆ ನಿರಾಸೆಯಿಂದ ಹಿಂದಿರುಗಿದರು.

ಮೈಸೂರು ನಗರದ 5 ಜಿಲ್ಲೆಯ 14 ಸಬ್ ರಿಜಿಸ್ಟ್ರಾರ್ ಕಚೇರಿಗಳ ಬಳಿ ದಿನನಿತ್ಯ ನೂರಾರು ಮಂದಿ ಜಮಾಯಿಸುತ್ತಾರೆ. ಅಲ್ಲೇ ಸುತ್ತಮುತ್ತಲಿನ ಅಂಗಡಿ–ಹೋಟೆಲುಗಳಲ್ಲಿ ತಿಂಡಿ, ಊಟ ಮಾಡಿ, ಕಾಫಿ ಟೀ ಕುಡಿದು ಕಾಲ ಕಳೆಯುತ್ತಿರುವುದು ಇಂದು ಕಂಡು ಬಂದಿತು.

ಬೆಂಗಳೂರಿನಲ್ಲಿರುವ ಸಾಫ್ಟ್‌ವೇರ್ ಯೂನಿಟ್‌ನಲ್ಲಿ ತಾಂತ್ರಿಕ ದೋಷ ಉಂಟಾಗಿದ್ದು, ಕಳೆದ ಮೂರು ದಿನಗಳಿಂದ ತಂತ್ರಜ್ಞರು ಎಷ್ಟೇ ಪ್ರಯತ್ನಿಸುತ್ತಿದ್ದರೂ ಸರಿಪಡಿಸಲು ಸಾಧ್ಯವಾಗದೇ ಕೈಚೆಲ್ಲಿದ್ದಾರೆ ಎಂದು ನೋಂದಣಿ ಇಲಾಖೆ ಮೂಲಗಳು ತಿಳಿಸಿವೆ. ಹಾಗಾಗಿ ರಾಜ್ಯದ 31 ಜಿಲ್ಲೆಗಳ 265 ಉಪನೋಂದಣಾಧಿಕಾರಿ ಕಚೇರಿಗಳ ಕಾರ್ಯ ಸಂಪೂರ್ಣ ಸ್ಥಗಿತಗೊಂಡಿದ್ದು, ಸ್ಟ್ಯಾಂಪ್ ಡ್ಯೂಟಿ, ನೋಂದಣಿ ಶುಲ್ಕ ಬರದೇ ಸರ್ಕಾರದ ಬೊಕ್ಕಸಕ್ಕೆ ನೂರಾರು ಕೋಟಿ ರೂ. ನಷ್ಟವಾದಂತಾಗಿದೆ.

ಮತ್ತೊಂದೆಡೆ ರಿಯಲ್ ಎಸ್ಟೇಟ್ ವಹಿವಾಟಿನ ಮೇಲೂ ಪರಿಣಾಮ ಬೀರಿ, ಬ್ಯಾಂಕ್ ವ್ಯವಹಾರಕ್ಕೂ ಪೆಟ್ಟು ಬಿದ್ದಂತಾಗಿದೆ. ನವದಂಪತಿ ವಿವಾಹ ನೋಂದಣಿ ಮಾಡಿಸಬೇಕೆಂಬ ಕಾಯ್ದೆ ಇದೆಯಾದರೂ ವಿವಾಹ ನೋಂದಣಿಯೂ ಆಗುತ್ತಿಲ್ಲ.

ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರಕ್ಕೆ ಗಂಧದ ಗುಡಿ ಫೌಂಡೇಷನ್ ವಿರೋಧ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಆರ್ಯನ್ ಮಾತನಾಡಿದರು.

ಮೈಸೂರು, ಫೆ.23(ಜಿಎ)–ಅಭಿವೃದ್ಧಿ ಹೆಸರಿನಲ್ಲಿ ಚಾಮುಂಡಿ ಬೆಟ್ಟವನ್ನು ಹಾಳು ಮಾಡುವ ಚಾಮುಂಡಿಬೆಟ್ಟದ ಅಭಿವೃದ್ಧಿ ಪ್ರಾಧಿಕಾರಕ್ಕೆ ನಮ್ಮ ವಿರೋಧವಿದೆ ಎಂದು ಗಂಧದಗುಡಿ ಫೌಂಡೇಶನ್ ರಾಜ್ಯಾಧ್ಯಕ್ಷ ಆರ್ಯನ್ ಗಂಧದಗುಡಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮುಂಡಿಬೆಟ್ಟದ ಅಭಿವೃದ್ಧಿಗೆ ನಮ್ಮ ವಿರೋಧವಿಲ್ಲ. ಆದರೆ, ಅಭಿವೃದ್ಧಿ ಹೆಸರಿನಲ್ಲಿ ಕಾಂಕ್ರಿಟೀಕರಣ ಮಾಡಬಾರದು. ಬೆಟ್ಟ ಭೌಗೋಳಿಕವಾಗಿ ಸೂಕ್ಷ್ಮವಾಗಿ ನಿರ್ಮಾಣವಾಗಿದ್ದು, ಕಾಂಕ್ರಿಟ್ ಕಟ್ಟಡಗಳ ಸಾಂದ್ರತೆ ತಡೆಯುವ ಸಾಮರ್ಥ್ಯ ಇಲ್ಲ ಎಂದರು.

ಈಗಾಗಲೇ ಬೆಟ್ಟದ ರಸ್ತೆ ಎರಡು ಬಾರಿ ಕುಸಿದಿದೆ. ಮತ್ತೆ ಬೆಟ್ಟದ ಮೇಲೆ ದೊಡ್ಡ ದೊಡ್ಡ ಕಟ್ಟಡಗಳನ್ನು ನಿರ್ಮಿಸಿದರೆ ಮತ್ತೆ ಕುಸಿಯುವ ಆತಂಕವಿದೆ. ಹೀಗಾಗಿ ಚಾಮುಂಡಿ ಬೆಟ್ಟವನ್ನು ವಾಣಿಜ್ಯದ ದೃಷ್ಟಿಯಲ್ಲಿ ನೋಡದೆ ಕೇವಲ ಧಾರ್ಮಿಕ ಕ್ಷೇತ್ರವಾಗಿ ನೋಡಬೇಕು. ಹೈಟೆಕ್ ಆಸ್ಪತ್ರೆ ನಿರ್ಮಾಣ ಮಾಡದೆ ಇರುವ ಕಟ್ಟಡದಲ್ಲೇ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಿ ಅನುಕೂಲ ಕಲ್ಪಿಸಬೇಕು ಎಂದರು.

ಚಾಮುಂಡಿ ಬೆಟ್ಟ ಹಲವು ಜೀವ ವೈವಿಧ್ಯ ಹೊಂದಿರುವ ಮೀಸಲು ಅರಣ್ಯ. ಅಲ್ಲಿ ಕಾಂಕ್ರೀಟೀಕರಣ ಮಾಡುವುದರಿಂದ ಜೀವ ವೈವಿಧ್ಯ ರಕ್ಷಣೆ ಸಾಧ್ಯವಿಲ್ಲ ಬೆಟ್ಟದ ಮೇಲೆ ನಡೆಯುತ್ತಿರುವ ವ್ಯಾಪಾರ ವಹಿವಾಟಿನಿಂದ ಪ್ಲಾಸ್ಟಿಕ್ ತ್ಯಾಜ್ಯ ಹೆಚ್ಚಾಗಿ ಕಾಡ್ಗಿಚ್ಚು ಸಂಭವಿಸುವ ಸಾಧ್ಯತೆ ಇದೆ. ಹೀಗಾಗಿ ಸಂಪೂರ್ಣವಾಗಿ ಪ್ಲಾಸ್ಟಿಕ್ ನಿಷೇಧ ಮಾಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಸದಸ್ಯರಾದ ಯಶೋಧಾ.ಆರ್, ಮನು, ರವಿಕೀರ್ತಿ ಉಪಸ್ಥಿತರಿದ್ದರು.

ಫೆ.28ರಿಂದ ರಾಷ್ಟ್ರೀಯ ರಂಗ ಉತ್ಸವ



ಮೈಸೂರು, ಫೆ.23(ಜಿಎ)–ಅಭಿಯಂತರರು ಮೈಸೂರು ಸಂಸ್ಥೆ ವತಿಯಿಂದ ಫೆ.28ರಿಂದ ಮಾ.3ರವರೆಗೆ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ರಾಷ್ಟ್ರೀಯ ರಂಗ ಉತ್ಸವ ಆಯೋಜಿಸಲಾಗಿದೆ ಎಂದು ಸಂಸ್ಥೆ ಅಧ್ಯಕ್ಷ ಸುರೇಶ್ ಬಾಬು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಟಕಕಾರ, ಸಾಹಿತಿ ಡಾ.ಕೆ.ವೈ.ನಾರಾಯಣಸ್ವಾಮಿ ರಂಗ ಉತ್ಸವ ಉದ್ಘಾಟಿಸುವರು. ಹಿರಿಯ ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸಲಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದರು.

28ರಂದು ಭೂಮಿ (ಇಂಗ್ಲಿಷ್), 29ರಂದು ಸರಸ ವಿರಸ ಸಮರಸ, ಮಾ.1ರಂದು #36 ಸತಿ ಸಾವಿತ್ರಿ ನಿವಾಸ, ಮಾ.2ರಂದು ಅಜ್ಞಾತನೊಬ್ಬನ ಆತ್ಮಚರಿತ್ರೆ, ಮಾ.3ರಂದು ಕಾಕಶಿ (ಹಿಂದಿ) ನಾಟಕ ಪ್ರದರ್ಶನವಾಗಲಿದೆ. ಪ್ರತಿದಿನ ಸಂಜೆ 7 ಗಂಟೆಗೆ ನಾಟಕ ಪ್ರದರ್ಶನವಿರಲಿದ್ದು, 100 ರೂ. ಟಿಕೆಟ್ ದರ ನಿಗದಿ ಮಾಡಲಾಗಿದೆ ಎಂದರು.

ಇದೇ ವೇಳೆ ರಾಷ್ಟ್ರೀಯ ರಂಗ ಉತ್ಸವದ ಪೋಸ್ಟರನ್ನು ರಂಗಕರ್ಮಿ ರಾಜಶೇಖರ ಕದಂಬ ಬಿಡುಗಡೆ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯ ಮುಸ್ತಾಫ, ಸದಸ್ಯ ಮಹದೇವಸ್ವಾಮಿ ಉಪಸ್ಥಿತರಿದ್ದರು.

ಫೆ.27, ಬೆಂಗಳೂರಲ್ಲಿ ರಾಜ್ಯ ಸರ್ಕಾರಿ ನೌಕರರ ಮಹಾ ಸಮ್ಮೇಳನ

7ನೇ ವೇತನ ಆಯೋಗದ ವರದಿ ಅನುಷ್ಠಾನ, ಹಳೆ ಪಿಂಚಣಿ ಪದ್ಧತಿ ಜಾರಿಗೆ ಆಗ್ರಹ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಪದಾಧಿಕಾರಿಗಳು ಮಾತನಾಡಿದರು.

ಮೈಸೂರು, ಫೆ.23(ಜಿಎ)– 7ನೇ ವೇತನ ಆಯೋಗದ ವರದಿ ಅನುಷ್ಠಾನ, ಹಳೆ ಪಿಂಚಣಿ ಯೋಜನೆ ಮರು ಜಾರಿ, ಆರೋಗ್ಯ ಸಂಜೀವಿನಿ ಲೋಕಾರ್ಪಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಫೆ.27ರಂದು ಬೆಂಗಳೂರಿನ ಅರಮನೆ ಮೈದಾನದ ಕೃಷ್ಣ ವಿಹಾರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಹಾ ಸಮ್ಮೇಳನ, ಪ್ರಜಾಸ್ನೇಹಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಜಿಲ್ಲಾಧ್ಯಕ್ಷ ಗೋವಿಂದರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಾಗಾರಕ್ಕೆ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಚಾಲನೆ ನೀಡುವರು. ನೌಕರರ ಆರೋಗ್ಯ ಹಾಗೂ ಒತ್ತಡ ನಿರ್ವಹಣೆ ಕುರಿತು ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ಕಾರ್ಯಾಗಾರ ನಡೆಸಿಕೊಡುವರು. ನಂತರ ಬೃಹತ್ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಂತ್ರಿಗಳು, ಸಂಸದರು, ಶಾಸಕರು ಭಾಗವಹಿಸಲಿದ್ದಾರೆ ಎಂದರು.

ಸಮ್ಮೇಳನದಲ್ಲಿ ಮೈಸೂರು ನಗರ ಹಾಗೂ ಜಿಲ್ಲೆಯಿಂದ 8ರಿಂದ 10 ಸಾವಿರ ನೌಕರರು ಭಾಗವಹಿಸುತ್ತಿದ್ದು, ಅಂದು ಬೆಳಗ್ಗೆ 6ರಿಂದ 7.30 ರವರೆಗೆ ಧನ್ವಂತರಿ ರಸ್ತೆಯ ಜಿಲ್ಲಾ ಸಂಘದ ಬಳಿಯಿಂದ ಸಾರಿಗೆ ವ್ಯವಸ್ಥೆ ಮಾಡಲಾಗಿದೆ ತಾಲೂಕು ನೌಕರರಿಗೆ ಆಯಾ ತಾಲೂಕುಗಳಲ್ಲೇ ಸಾರಿಗೆ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಖಜಾಂಚಿ ರಮೇಶ್ ಕುಮಾರ್, ಗೌರವಾಧ್ಯಕ್ಷ ಸುರೇಶ್, ಜಿಲ್ಲಾ ಕಾರ್ಯದರ್ಶಿ ರೇವಣ್ಣ, ನಿರ್ದೇಶಕರಾದ ಗಿರೀಶ್, ಶ್ರೀನಿವಾಸ್, ರೇವಣ್ಣ ಉಪಸ್ಥಿತರಿದ್ದರು.

ಮೈಸೂರು ತಾಲೂಕು, ಗ್ರಾಪಂ ಸಿಬ್ಬಂದಿ ಕ್ರೀಡಾಕೂಟ

ಮೈಸೂರು ಜಿಪಂ ಸಿಇಓ ಗಾಯತ್ರಿ ಚಾಲನೆ



ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಶುಕ್ರವಾರ ಜಿಲ್ಲಾ ಪಂಚಾಯ್ತಿ ವತಿಯಿಂದ ಆಯೋಜಿಸಿದ್ದ ತಾಲೂಕು ಪಂಚಾಯತ್ ಸಿಬ್ಬಂದಿಗಳ ಕ್ರೀಡಾಕೂಟವನ್ನು ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ ಉದ್ಘಾಟಿಸಿದರು.

ಮೈಸೂರು,ಫೆ.23(ಎಂಟಿವೈ)– ಮೈಸೂರು ಜಿಲ್ಲೆಯ ವಿವಿಧ ತಾಲೂಕು ಹಾಗೂ ಗ್ರಾಪಂ ಸಿಬ್ಬಂದಿಗಳಿಗಾಗಿ ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ವಿವಿಧ ಕ್ರೀಡೆಯಲ್ಲಿ ಕ್ರೀಡಾಪಟುಗಳು ಪಾಲ್ಗೊಂಡು ಗಮನ ಸೆಳೆದರು.

ಜಿಲ್ಲಾ ಪಂಚಾಯಿತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ತಾಲೂಕು ಪಂಚಾಯತ್, ಗ್ರಾಮ ಪಂಚಾಯತ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗಗಳ ಕ್ರೀಡಾಕೂಟದಲ್ಲಿ ಬಿಸಿಲನ್ನು ಲೆಕ್ಕಿಸದೆ, ಕಚೇರಿ ಕೆಲಸದ ಜಂಜಾಟದಿಂದ ದೂರ ಸರಿದು ನೆಚ್ಚಿನ ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕ್ರೀಡಾ ಸ್ಫೂರ್ತಿ ಮೆರೆದರು.

ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕ್ರೀಡಾಕೂಟವನ್ನು ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ ಚಾಲನೆ ನೀಡಿ ಮಾತನಾಡಿ, ಪ್ರತಿಯೊಬ್ಬರು ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಅನಿವಾರ್ಯ. ಕ್ರೀಡಾ ಚಟುವಟಿಕೆಗಳಲ್ಲಿ ಭಾಗಿಯಾದರೆ ಕಸರತ್ತು ಮಾಡಿದಂತಾಗುತ್ತದೆ. ಇದರಿಂದ ಆರೋಗ್ಯವಂತಾಗಲು ಸಾಧ್ಯ. ಶಾಲಾ–ಕಾಲೇಜು ಹಂತದಲ್ಲಿಯೇ ಬಹುತೇಕ ಎಲ್ಲರೂ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಉದ್ಯೋಗ ಮಾಡುತ್ತಿದ್ದರೂ ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದನ್ನು ಮುಂದುವರೆಸಬೇಕು ಎಂದು ಸಲಹೆ ನೀಡಿದರು.

ತಾಲೂಕು ಪಂಚಾಯ್ತಿ ಸಿಬ್ಬಂದಿಗಳಿಗಾಗಿ ಆಯೋಜಿಸಿರುವ ಕ್ರೀಡಾಕೂಟದಲ್ಲಿ ಅಧಿಕಾರಿ ವರ್ಗ ಹಾಗೂ ಸಿಬ್ಬಂದಿಗಳು ಯಾವುದೇ ಭೇದಭಾವವಿಲ್ಲದೆ, ಒಟ್ಟಿಗೆ ಕ್ರೀಡೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಕಚೇರಿ ಜಂಜಾಟ, ಕೆಲಸದ ಒತ್ತಡದಿಂದ ದೂರವಿದ್ದು ಕ್ರೀಡೆಗಳಲ್ಲಿ ತಲ್ಲೀನರಾಗಬೇಕು. ಸೋಲು–ಗೆಲುವು ಮುಖ್ಯವಲ್ಲ. ಎಲ್ಲರೂ ಕ್ರೀಡಾ ಸ್ಫೂರ್ತಿಯಿಂದ ಪಾಲ್ಗೊಳ್ಳುವಂತೆ ಸಲಹೆ ನೀಡಿದರು. ಈ ಸಂದರ್ಭದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಜಿ.ಪಂ. ಉಪಕಾರ್ಯದರ್ಶಿಗಳಾದ ಬಿ.ಎಂ.ಸವಿತಾ, ಡಾ.ಎಂ.ಕೃಷ್ಣರಾಜು, ಆಡಳಿತಾಧಿಕಾರಿ ಸಿದ್ಧಗಂಗಮ್ಮ, ಪ್ರಭಾರ ಮುಖ್ಯ ಯೋಜನಾಧಿಕಾರಿ ಬಿ.ಸೌಮಿತ್ರ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕ್ರೀಡೆಗಳಲ್ಲಿ ಮಿಂದೆದ್ದ ತಾಲೂಕು ಪಂಚಾಯ್ತಿ ಸಿಬ್ಬಂದಿ

ವರ್ಷಕ್ಕೊಮ್ಮೆ ನಡೆಸುವ ಕ್ರೀಡಾಕೂಟದಲ್ಲಿ ಮೈಸೂರು ಜಿಲ್ಲೆಯ ವಿವಿಧ ತಾಲೂಕು ಪಂಚಾಯ್ತಿಗಳ ಸಿಬ್ಬಂದಿ ಪಾಲ್ಗೊಂಡಿದ್ದರು. ಸಿಬ್ಬಂದಿಗಳಿಗಾಗಿ ಕ್ರಿಕೆಟ್, ವಾಲಿಬಾಲ್, ಓಟ, ರಿಲೇ, ವೇಗದ ನಡಿಗೆ, ಗುಂಡು ಎಸೆತ, ಚಮಚದ ಮೇಲೆ ನಿಂಬೆಹಣ್ಣು ಇಟ್ಟು ನಡಿಗೆ ಸೇರಿದಂತೆ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿತ್ತು ಬೆಳಗ್ಗೆ ಆರಂಭವಾದ ಕ್ರೀಡಾಕೂಟ ಸಂಜೆವರೆಗೂ ನಡೆಯಿತು.

ಬಿಜೆಪಿ ಕಾರ್ಯಕರ್ತರಿಂದ ಪ್ರತಿಭಟನೆ

ದುರುದ್ದೇಶದಿಂದ ಸಹಕಾರ ಸಂಘದ ಆಡಳಿತ ಮಂಡಳಿ ವಜಾ ಆರೋಪ

ಮಡಿಕೇರಿ, ಫೆ.23–ಹುದಿಕೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯನ್ನು ದುರುದ್ದೇಶದಿಂದ ವಜಾಗೊಳಿಸಿ, ಚುನಾವಣೆ ಮುಂದೂಡಲಾಗುತ್ತಿದೆ ಎಂದು ಆರೋಪಿಸಿ ಮಾಜಿ ಶಾಸಕ ಕೆ.ಜಿ.ಬೋಪಯ್ಯ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಮಡಿಕೇರಿಯ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು.

ವಿರಾಜಪೇಟೆ ಕ್ಷೇತ್ರದ ಶಾಸಕರ ಕುಮ್ಮಕ್ಕಿನಿಂದ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದ ಸಹಕಾರ ಸಂಘದಲ್ಲಿ ಅವ್ಯವಹಾರದ ಆರೋಪ ಹೊರಿಸಿ, ಆಡಳಿತ ಮಂಡಳಿಯನ್ನು ವಜಾಗೊಳಿಸಲಾಗಿದೆ. ಸಂಘದ ಕಾರ್ಯ ನಿರ್ವಹಣಾಧಿಕಾರಿಯನ್ನು ಅಮಾನತುಗೊಳಿಸಿ, ಸಹಕಾರ ಸಂಘಗಳ ಉಪನಿಬಂಧಕರನ್ನು ರಾತ್ರೋರಾತ್ರಿ ವರ್ಗಾವಣೆಗೊಳಿಸಲಾಗಿದೆ. ಸೋಲುವ ಭಯದಿಂದ ಚುನಾವಣೆಯನ್ನು ಮುಂದೂಡಲಾಗುತ್ತಿದೆ ಎಂದು ಪ್ರತಿಭಟನಾಕಾರರು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ಹುದಿಕೇರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯನ್ನು ದುರುದ್ದೇಶದಿಂದ ವಜಾಗೊಳಿಸಲಾಗಿದೆ ಎಂದು ಆರೋಪಿಸಿ ಮಾಜಿ ಶಾಸಕ ಕೆ.ಜಿ.ಬೋಪಯ್ಯ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಮಡಿಕೇರಿಯ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಇದೇ ವೇಳೆ ಪ್ರತಿಭಟನಾಕಾರರು ಸಹಕಾರ ಸಂಘದ ವಿಶೇಷ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಹುದಿಕೇರಿಯ ಸಹಕಾರ ಸಂಘದ ಚುನಾವಣೆಯ ದಿನಾಂಕ ನಿಗದಿಯಾಗಿದ್ದರೂ ಚುನಾವಣೆಯನ್ನು ಮುಂದೂಡುತ್ತಾ ಬರಲಾಗುತ್ತಿದೆ. ವಿರಾಜಪೇಟೆ ಕ್ಷೇತ್ರದ ಶಾಸಕರ ಊರಿನ ಸಹಕಾರ ಸಂಘದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತರು ಗೆಲುವು ಸಾಧಿಸುತ್ತಾರೆಂಬ ಭಯದಲ್ಲಿ ಚುನಾವಣೆಯನ್ನು ಮುಂದೂಡಲಾಗುತ್ತಿದೆ. ಹಾಲಿ ಆಡಳಿತ ಮಂಡಳಿಯನ್ನು ವಜಾಗೊಳಿಸಿ, ಅವ್ಯವಹಾರದ ಆರೋಪ ಮಾಡಲಾಗುತ್ತಿದೆ. ಅವಕಾಶವಿಲ್ಲದಿದ್ದರೂ ವಿಶೇಷ ಅಧಿಕಾರಿಯನ್ನು ನೇಮಕಗೊಳಿಸಲಾಗಿದೆ ಎಂದು ಆರೋಪಿಸಿದರು.

ಸಹಕಾರ ಸಂಘದ ಮಾಜಿ ಅಧ್ಯಕ್ಷ ಅಜ್ಜಿಕುಟ್ಟೀರ ಪ್ರವೀಣ್ ಮುತ್ತಪ್ಪ ಮಾತನಾಡಿ, ದುರುದ್ದೇಶದಿಂದ ಚುನಾವಣೆ ಮುಂದೂಡಲಾಗುತ್ತಿದೆ. ಸಂಘದ ಸಿಓ ಅಮಾನತು ಆದೇಶವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿಕಾಳಪ್ಪ, ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಮುಖಂಡರಾದ ಮನು ಮುತ್ತಪ್ಪ, ತಳೂರು ಕಿಶೋರ್ ಕುಮಾರ್, ಯಮುನಾ ಚಂಗಪ್ಪ ಸುವಿನ್ ಗಣಪತಿ, ಸುಬ್ರಮಣ್ಯ ಉಪಾಧ್ಯಾಯ ಮತ್ತಿತರರು ಪಾಲ್ಗೊಂಡಿದ್ದರು.

ಕಾಫಿ ಬೆಳೆಗಾರರ ವಿರುದ್ಧ ಜಾತಿ ನಿಂಧನೆ ಪ್ರಕರಣ

ಡಿಸಿ, ಎಸ್ಪಿ ಕಚೇರಿಗೆ ಮುತ್ತಿಗೆ: ಸಂಸದ ಎಚ್ಚರಿಕೆ



ಗೋಣಿಕೊಪ್ಪದಲ್ಲಿ ಸಂಸದ ಪ್ರತಾಪ್ ಸಿಂಹ ತಮ್ಮ ಆಡಳಿತ ಅವಧಿಯ ರಿಪೋರ್ಟ್ ಕಾರ್ಡ್ ಅನ್ನು ಬಿಡುಗಡೆಗೊಳಿಸಿದರು.

ಗೋಣಿಕೊಪ್ಪ, ಫೆ.23–ಕಾಫಿ ಬೆಳೆಗಾರರನ್ನು ಗುರಿಯಾಗಿಸಿಕೊಂಡು ಜಾತಿನಿಂಧನೆ ಪ್ರಕರಣ ದಾಖಲಿಸಲಾಗಿದ್ದು, ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕುವುದಾಗಿ ಸಂಸದ ಪ್ರತಾಪ್ ಸಿಂಹ ಎಚ್ಚರಿಸಿದರು.

ಬಿಜೆಪಿಗೆ ಬೆಂಬಲವಾಗಿರುವ ಬೆಳೆಗಾರರನ್ನು ಗುರಿಯಾಗಿಸಿಕೊಂಡು ಪ್ರಕರಣ ದಾಖಲಿಸಿರುವುದು ಸರಿಯಲ್ಲ. ಈ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆಯಲಾಗಿದೆ. 16 ಬೆಳೆಗಾರರ ಮೇಲೆ ಪ್ರಕರಣ ದಾಖಲಾಗಿದ್ದು, ಇಬ್ಬರನ್ನು ಬಂಧಿಸಲಾಗಿದೆ. ಹಣ ವಸೂಲಿಗಾಗಿ ಇಂತಹ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಬಿಜೆಪಿ ಸರ್ಕಾರವಿದ್ದಾಗ ಎನ್‌ಜಿಓಗಳಿಗೆ ಅವಕಾಶ ನೀಡುತ್ತಿರಲಿಲ್ಲ. ಆದರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಎನ್‌ಜಿಓಗಳು ಎಲ್ಲಿಂದಲೋ ಬಂದು ದಬ್ಬಾಳಿಕೆ ನಡೆಸುತ್ತಿದ್ದಾರೆ. ಕೂಲಿ ಕಾರ್ಮಿಕರಿಗೆ ಉತ್ತಮ ವಸತಿ ಕಲ್ಪಿಸಿರುವ ಬೆಳೆಗಾರರ ಮೇಲೆ ಕಾಳಜಿ ಮುಖ್ಯ. ಈ ಬಗ್ಗೆ ಸ್ಥಳೀಯ ಶಾಸಕರು ಗಮನ ಹರಿಸಬೇಕು ಎಂದು ತಿಳಿಸಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಅಲಂಕರಿಸಿದ ಕಾಲಘಟ್ಟದಲ್ಲಿ ಕಾಫಿ ಬೆಳೆಗಾರರಿಗೆ ಅನಾವಶ್ಯಕವಾಗಿ ಒಂದಲ್ಲ ಒಂದು ತೊಂದರೆ ನೀಡಲಾಗುತ್ತಿದೆ. ಸರ್ಕಾರಿ ಜಾಗ ಅತಿಕ್ರಮಣ ಎಂದು ತೆರವುಗೊಳಿಸಲಾಗಿದೆ. ಈಗಲೂ ಬೆಳೆಗಾರರ ಕೃಷಿ ಭೂಮಿಯನ್ನು ಅತಿಕ್ರಮಣದ ಹೆಸರಿನಲ್ಲಿ ಸರ್ಕಾರದ ವಶಕ್ಕೆ ಪಡೆಯಲು ಮುಂದಾಗುತ್ತಿರುವುದು ಬೆಳೆಗಾರರ ಮೇಲೆ ಮುಖ್ಯಮಂತ್ರಿಗೆ ಇರುವ ಮನಸ್ಥಿತಿಯನ್ನು ತೋರಿಸುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವನ್ಯಜೀವಿಗಳ ವಸ್ತುಗಳನ್ನು ವಶಕ್ಕೆ ಪಡೆಯುವ ಹುನ್ನಾರ ಕೂಡ ಕೊಡಗಿನ ಬೆಳೆಗಾರರ ಮೇಲೆ ನಡೆಯುತ್ತಿದೆ. ಕಾಂಗ್ರೆಸ್ ಸರ್ಕಾರ ವಶಕ್ಕೆ ಪಡೆಯುವುದಾಗಿ ಭಯ ಹುಟ್ಟಿಸಿ, ಮತ್ತೆ ತಡೆಯಾಜ್ಞೆ ತಂದಿದ್ದೇವೆ ಎಂದು ಪ್ರಚಾರ ಗಿಟ್ಟಿಸಿಕೊಳ್ಳುತ್ತಿರುವುದು ಸರಿಯಾದ ಕ್ರಮವಲ್ಲ. ಇಲ್ಲಿನ ಆಚರಣೆಯಲ್ಲಿ ಹಿರಿಯರ ಚಿಂತನೆ ವಿಶೇಷತೆಯಾಗಿದೆ. ಅಂತಹ ಹಿರಿಯರಿಗೆ ನಿಯಮ ಹೇಳುವಷ್ಟು ನಾಟಕೀಯ ಮನಸ್ಥಿತಿ ಬೇಡ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಕೆ.ಜಿ. ಬೋಪಯ್ಯ, ಬಿಜೆಪಿ ಮಂಡಲ ಅಧ್ಯಕ್ಷ ಮಾಚಿಮಂಡ ಸುವಿನ್ ಗಣಪತಿ, ಮಾಜಿ ಜಿಲ್ಲಾಧ್ಯಕ್ಷ ಮಾಚಿಮಾಡ ರವೀಂದ್ರ, ಪೊನ್ನಂಪೇಟೆ ಎಪಿಸಿಎಂಪಿಎಸ್ ಉಪಾಧ್ಯಕ್ಷ ಚೋಡುಮಾಡ ಶ್ಯಾಂ ಪೂಣಚ್ಚ, ಬಿಜೆಪಿ ಕೃಷಿ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯೆ ಯಮುನಾ ಚಂಗಪ್ಪ ಇದ್ದರು.

ಎಸ್‌ಸಿ ಮೋರ್ಚಾದಿಂದ ಪ್ರತಿಭಟನೆ



ರಾಜ್ಯ ಸರ್ಕಾರದ ವಿರುದ್ಧ ಕೊಡಗು ಜಿಲ್ಲಾ ಬಿಜೆಪಿ ಎಸ್‌ಸಿ ಮೋರ್ಚಾ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಮಡಿಕೇರಿ: ರಾಜ್ಯ ಸರ್ಕಾರ ದಲಿತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಕೊಡಗು ಜಿಲ್ಲಾ ಬಿಜೆಪಿ ಎಸ್‌ಸಿ ಮೋರ್ಚಾ ವತಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಕಳೆದ 9 ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ ದಲಿತ ಸಮುದಾಯದ ವಿಚಾರದಲ್ಲಿ ಮಾತಿನಲ್ಲಿ ಮಾತ್ರ ಕಾಳಜಿ ತೋರುತ್ತಿದೆ. ಉಳಿದಂತೆ ಎಲ್ಲಾ ಹಂತದಲ್ಲೂ ವಂಚಿಸುತ್ತಾ ಬಂದಿದೆ. ಎಸ್‌ಸಿ ಮತ್ತು ಎಸ್‌ಟಿ ಅಭಿವೃದ್ಧಿಗಾಗಿ ಮೀಸಲಿಟ್ಟ 11,140 ಸಾವಿರ ಕೋಟಿ ರೂ. ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಲಾಗಿದೆ. ಸಮಾಜ ಕಲ್ಯಾಣ ಸಚಿವರು ಕಾಂಗ್ರೆಸ್ ಹಿತ ಕಾಪಾಡಲು ಮಾತ್ರ ದಲಿತ ಸಮುದಾಯವನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ದೂರಿದರು.

ದಲಿತ ಸಮುದಾಯಕ್ಕಾಗಿ ಮೀಸಲಿಟ್ಟ ಹಣವನ್ನು ದಲಿತರಿಗೇ ವ್ಯಯ ಮಾಡಬೇಕು. ತಪ್ಪಿದಲ್ಲಿ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಪಿ.ಎಂ.ರವಿ, ಎಸ್‌ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷೆ ಕೆ.ಆರ್.ಮಂಜುಳಾ, ಜಿಲ್ಲಾಧ್ಯಕ್ಷ ಎಂ.ಎಂ.ಪರಮೇಶ್ವರ್, ಬಿಜೆಪಿ ವಕ್ತಾರ ಬಿ.ಕೆ.ಅರುಣ್ ಕುಮಾರ್, ಪ್ರಮುಖರಾದ ಸುಬ್ರಮಣ್ಯ ಉಪಾಧ್ಯಾಯ, ರಾಬಿನ್ ದೇವಯ್ಯ, ಬಿ.ಬಿ.ಭಾರತೀಶ್, ತಳೂರು ಕಿಶೋರ್ ಕುಮಾರ್, ಕನ್ನಿಕೆ, ಜಗದೀಶ್, ಯಮುನಾ ಚಂಗಪ್ಪ ಪಾಲ್ಗೊಂಡಿದ್ದರು.

ಮಹಿಳೆಯರ ಸುರಕ್ಷತೆಗೆ ಮಿಷನ್ ಶಕ್ತಿ ಬಲ: ನಟರಾಜು

ಮಡಿಕೇರಿ, ಫೆ.23–ಮಿಷನ್ ಶಕ್ತಿಯು ಮಹಿಳೆಯ ಸುರಕ್ಷತೆ, ಭದ್ರತೆ ಮತ್ತು ಸಬಲೀಕರಣಕ್ಕಾಗಿ ಮಧ್ಯಸ್ಥಿಕೆ ಕ್ರಮಗಳನ್ನು ಬಲಪಡಿಸುವ ಗುರಿ ಹೊಂದಿದ್ದು, ಮಹಿಳಾ ಮುಂಚೂಣಿ ಅಭಿವೃದ್ಧಿಗೆ ಮಿಷನ್ ಶಕ್ತಿಯು ಮಹಿಳೆಯರ ಸುರಕ್ಷತೆ ಮತ್ತು ಸಬಲೀಕರಣ ಎಂಬ ಎರಡು ಉಪಯೋಜನೆಗಳನ್ನು ಹೊಂದಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ನಟರಾಜು ತಿಳಿಸಿದರು.

ನಗರದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಅಧ್ಯಕ್ಷತೆಯಲ್ಲಿ ನಡೆದ ಮಿಷನ್ ಶಕ್ತಿ ಯೋಜನೆಯಡಿ ಜಿಲ್ಲಾ ಮಹಿಳಾ ಸಬಲೀಕರಣ ಘಟಕ ಹಾಗೂ ಬೇಟಿ ಬಚಾವೋ, ಬೇಟಿ ಪಡಾವೋ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಮಿಷನ್ ಶಕ್ತಿ ಸೇವೆಗಳಲ್ಲಿ ಪ್ರಮುಖವಾಗಿ ಹಿಂಸೆಯಿಂದ ಬಾಧಿತರಾದ ಮಹಿಳೆಯರಿಗೆ ಒನ್ ಸ್ಟಾಪ್ ಸೆಂಟ್ರಲ್‌ಗಳ ಮುಖಾಂತರ ತಾತ್ಕಾಲಿಕ ಆಶ್ರಯ ಕಾನೂನು ನೆರವು, ಮಾನಸಿಕ, ಸಾಮಾಜಿಕ, ಸಮಾಲೋಚನೆ, ವೈದ್ಯಕೀಯ ನೆರವು ಪೊಲೀಸ್ ಸೌಲಭ್ಯಗಳ ಮೂಲಕ ನಿರಂತರ ಸೌಲಭ್ಯ ಮತ್ತು ರಕ್ಷಣೆ ಒದಗಿಸಲಾಗುತ್ತದೆ ಎಂದು ಹೇಳಿದರು.

ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ಅಭಿವೃದ್ಧಿ ಮತ್ತು ಸಬಲೀಕರಣ ಗುರಿಯನ್ನು ಹೊಂದಿದೆ. 'ಬೇಟಿ ಬಚಾವೋ, ಬೇಟಿ ಪಡಾವೋ' ಯೋಜನೆಯನ್ನು ದೇಶದಲ್ಲಿ ಇಳಿಕೆಯಾಗುತ್ತಿರುವ ಹೆಣ್ಣು ಮಕ್ಕಳ ಲಿಂಗಾನುಪಾತವನ್ನು ಮಹಿಳೆಯರ ಸಬಲೀಕರಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಗುರಿಯಾಗಿಟ್ಟುಕೊಂಡು ಕಾರ್ಯಕ್ರಮ ಆರಂಭಿಸಲಾಗಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಮಾತನಾಡಿ, ಮಿಷನ್ ಶಕ್ತಿ ಯೋಜನೆಯಡಿ ಜಿಲ್ಲಾ ಮಹಿಳಾ ಸಬಲೀಕರಣ ಘಟಕ ಹಾಗೂ ಬೇಟಿ ಬಚಾವೋ, ಬೇಟಿ ಪಡಾವೋ ಯೋಜನೆ ಸಂಬಂಧಿಸಿದಂತೆ ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.




ಮಡಿಕೇರಿಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಅಧ್ಯಕ್ಷತೆಯಲ್ಲಿ ಮಿಷನ್ ಶಕ್ತಿ ಯೋಜನೆಯಡಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ ನಡೆಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ನಟರಾಜು ಇದ್ದರು.

ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಒಟ್ಟುಗೂಡಿ ಕಾರ್ಯನಿರ್ವಹಿಸಿದಾಗ ಮಹಿಳೆಯರ ಸುರಕ್ಷತೆ, ರಕ್ಷಣೆ ಹಾಗೂ ಲಿಂಗಾನುಪಾತವನ್ನು ಸರಿದೂಗಿಸಲು ಸಾಧ್ಯ ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಬಿ.ಪ್ರಸಾದ್ ಮಾತನಾಡಿ, ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಬೇಕು. ಸಮಾಜದಲ್ಲಿ ಇನ್ನೂ ಮುಖ್ಯವಾಹಿನಿಗೆ ಬರದವರನ್ನು ಗುರುತಿಸಿ ಸರ್ಕಾರದ ಸೌಲಭ್ಯವನ್ನು ತಲುಪಿಸಲು ಪ್ರಯತ್ನಿಸಬೇಕು. ಎಲ್ಲರನ್ನೂ ಒಳಗೊಂಡು ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಬೇಕು ಎಂದರು. ಜಿಪಂ ಉಪಕಾರ್ಯದರ್ಶಿ ಧನರಾಜ್, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಆನಂದ್, ಜಿಲ್ಲಾ ಉದ್ಯೋಗ ವಿನಿಮಯಾಧಿಕಾರಿ ಉಮಾ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಪುಟ್ಟರಾಜು, ಲೀಡ್ ಬ್ಯಾಂಕ್ ವ್ಯವಸ್ಥಾಪಕ ಗಂಗಾಧರ ನಾಯಕ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿ.ಟಿ.ವಿಸ್ಮಯಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಕೃಷ್ಣಪ್ಪ ಇತರರು ಇದ್ದರು.

ಕಾಫಿ ಗಿಡಗಳಿಗೆ ಆಕಸ್ಮಿಕ ಬೆಂಕಿ



ಮಡಿಕೇರಿ: ನಾಪೋಕ್ಲು ಬಳಿಯ ಬೇತು ಗ್ರಾಮದ ತೋಟವೊಂದರಲ್ಲಿ ಶುಕ್ರವಾರ ಆಕಸ್ಮಿಕ ಬೆಂಕಿ ಅವಘಡ ಸಂಭವಿಸಿ ಕಾಫಿ ಗಿಡಗಳು ಸುಟ್ಟು ಹೋಗಿದ್ದು, ಪಕ್ಕದ ತೋಟದ ಮಾಲೀಕರು ಹಾಗೂ ಕಾರ್ಮಿಕರ ಸಮಯ ಪ್ರಜ್ಞೆಯಿಂದ ಹೆಚ್ಚಿನ ಅನಾಹುತ ತಪ್ಪಿದೆ.

ಗ್ರಾಮದ ಶ್ರೀಮಕ್ಕಿ ದೇವಾಲಯಕ್ಕೆ ತೆರಳುವ ರಸ್ತೆಯ ಕೀತಿಯಂಡ ನಾಣಯ್ಯ ಅವರಿಗೆ ಸೇರಿದ ತೋಟದಲ್ಲಿ ಮಧ್ಯಾಹ್ನ ಆಕಸ್ಮಿಕವಾಗಿ ಬೆಂಕಿ ಅವಘಡ ಸಂಭವಿಸಿದ್ದು, ಇದರಿಂದ ಕೆಲ ಕಾಫಿ ಗಿಡಗಳು ಸುಟ್ಟು ಹೋಗಿವೆ.

ಇದೇ ವೇಳೆ ಪಕ್ಕದ ತೋಟದ ಮಾಲೀಕರಾದ ಮುಂಡಂಡ ಚೇತನ್, ತೋಟದ ಮೇಲ್ವಿಚಾರಕ ರಾಜೇಶ್, ನಾಪೋಕ್ಲುವಿನ ಆಟೋ ಚಾಲಕರಾದ ರಜಾಕ್, ಸುಕುಮಾರನ್ ಹಾಗೂ ಕಾರ್ಮಿಕರಾದ ಕುಮಾರ, ಮೋನಿಶ್ ಅವರು ತಕ್ಷಣ ಬಿಂದಿಗೆಯಲ್ಲಿ ನೀರು ತಂದು ಸುರಿದು ಬೆಂಕಿ ನಂದಿಸಿದರು. ಇದರಿಂದ ಹೆಚ್ಚಿನ ಅನಾಹುತ ತಪ್ಪಿದಂತಾಗಿದೆ. ತೋಟದ ಬದಿಯಲ್ಲೇ ವಿದ್ಯುತ್ ತಂತಿಗಳು ಹಾದು ಹೋಗಿದ್ದು, ತೆಂಗಿನ ಮರದ ಗರಿಗಳು ವಿದ್ಯುತ್ ತಂತಿಯ ಮೇಲೆ ಬಿದ್ದ ಪರಿಣಾಮ ಬೆಂಕಿ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಧರಣಿ



ಚಾಮರಾಜನಗರದ ಚಾಮರಾಜೇಶ್ವರ ಉದ್ಯಾನ ಮುಂಭಾಗದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು ಧರಣಿ ನಡೆಸಿದರು.

ಚಾಮರಾಜನಗರ, ಫೆ.23– ಗ್ಯಾರಂಟಿ ಯೋಜನೆಗಳ ಜಾರಿಗೆ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯ ಹಣ ದುರ್ಬಳಕೆ ಮಾಡಿಕೊಂಡು ದಲಿತರಿಗೆ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿ ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ನಗರದ ಶ್ರೀ ಚಾಮರಾಜೇಶ್ವರ ಉದ್ಯಾನ ಮುಂಭಾಗದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್ ನೇತೃತ್ವದಲ್ಲಿ ಧರಣಿ ನಡೆಸಿದ ಕಾರ್ಯಕರ್ತರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಎನ್.ಮಹೇಶ್ ಮಾತನಾಡಿ, ರಾಜ್ಯ ಸರ್ಕಾರ ದಲಿತರಿಗೆ ಮೀಸಲಿಟ್ಟಿದ್ದ ಎಸ್‌ಸಿಪಿ, ಟಿಎಸ್‌ಪಿ ಅನುದಾನದಲ್ಲಿ 11,144 ಸಾವಿರ ಕೋಟಿ ರೂ. ಅನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆಮಾಡಿಕೊಂಡು ಅನ್ಯಾಯ ಮಾಡುತ್ತಿದೆ. ಎಸ್‌ಸಿಪಿ, ಟಿಎಸ್‌ಪಿ ಅನುದಾನ ದುರ್ಬಳಕೆ ಆಗುತ್ತಿದ್ದರೂ ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೇಳುವ, ಪ್ರಶ್ನೆ ಮಾಡುವ ಧಮ್ ಇಲ್ಲ. ಇದೊಂದು ಮೋಸಗಾರ ಸರ್ಕಾರ, ದಲಿತ ವಿರೋಧಿ ನೀತಿ ಸರ್ಕಾರ ಎಂದು ಕಿಡಿಕಾರಿದರು.

ಸಿ.ಎಸ್.ನಿರಂಜನ್ ಕುಮಾರ್ ಮಾತನಾಡಿ, ಗ್ಯಾರಂಟಿ ಯೋಜನೆಗಳ ಜಾರಿಗೆ ಹಣ ಹೊಂದಿಸಲು ರಾಜ್ಯ ಸರ್ಕಾರ ಎಸ್‌ಸಿ, ಎಸ್‌ಟಿ ಸಮುದಾಯಗಳ ಮೀಸಲು ಹಣವನ್ನು ದುರ್ಬಳಕೆ ಮಾಡಿಕೊಂಡು ದಲಿತರಿಗೆ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕ ಎಸ್.ಬಾಲರಾಜು, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮೂಡ್ನಾಕೂಡು ಪ್ರಕಾಶ್, ಪಿ.ವೃಷಬೇಂದ್ರಪ್ಪ, ಹೊನ್ನೂರು ಮಹಾದೇವಸ್ವಾಮಿ, ಉಪಾಧ್ಯಕ್ಷ ಶಿವುವಿರಾಟ್, ನಗರ ಮಂಡಲ ಅಧ್ಯಕ್ಷ ಶಿವರಾಜ್, ಗ್ರಾಮಾಂತರ ಮಂಡಲ ಅಧ್ಯಕ್ಷ ಅರಕಲವಾಡಿ ಮಹೇಶ್, ಜಿಲ್ಲಾ ಎಸ್‌ಟಿ ಮೋರ್ಚಾ ಅಧ್ಯಕ್ಷ ಚಂದ್ರಶೇಖರ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮೂಡಳ್ಳಿ ಮೂರ್ತಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಕಮಲಮ್ಮ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಎನ್‌ರಿಚ್ ಮಹದೇವಸ್ವಾಮಿ ಮತ್ತಿತರರು ಭಾಗವಹಿಸಿದರು.

ಚಾ.ನಗರದಲ್ಲಿ ರೈತರ ಸಮಸ್ಯೆಗಳ ಆಲಿಕೆ

ತಹಶೀಲ್ದಾರ್ ನೇತೃತ್ವದಲ್ಲಿ ತಾಲೂಕು ಮಟ್ಟದ ಕುಂದುಕೊರತೆ ನಿವಾರಣಾ ಸಭೆ

ಚಾಮರಾಜನಗರ, ಫೆ.23–ನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ಶುಕ್ರವಾರ ನಡೆದ ತಾಲೂಕು ಮಟ್ಟದ ರೈತರ ಕುಂದುಕೊರತೆ ನಿವಾರಣಾ ಸಭೆಯಲ್ಲಿ ತಾಲೂಕಿನ ರೈತರ ಅಹವಾಲುಗಳನ್ನು ತಹಶೀಲ್ದಾರ್ ಬಸವರಾಜು ಆಲಿಸಿದರು.

ಸಭೆಯಲ್ಲಿ ಮಾತನಾಡಿದ ತಹಶೀಲ್ದಾರ್ ಬಸವರಾಜು, ರೈತರ ಕುಂದುಕೊರತೆ, ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಸಲುವಾಗಿ ತಾಲೂಕು ಮಟ್ಟದಲ್ಲಿ ನಡೆಯುತ್ತಿರುವ ಇದು ಪ್ರಥಮ ಸಭೆಯಾಗಿದೆ. ರೈತರ ಸಮಸ್ಯೆಗಳನ್ನು ನೇರವಾಗಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಡಳಿತದ ಮುಂದೆ ತರುವ ಬದಲು ತಾಲೂಕು ಮಟ್ಟದಲ್ಲೇ ಪರಿಹಾರ ಕಂಡುಕೊಳ್ಳುವುದು ಸಭೆಯು ಉದ್ದೇಶವಾಗಿದೆ ಎಂದರು.

ರೈತರೊಂದಿಗೆ ಸಮನ್ವಯ ಸಾಧಿಸಿ ಕಾಲಮಿತಿಯೊಳಗೆ ಇವರ ಸಮಸ್ಯೆಗಳನ್ನು ಪರಿಹರಿಸಲು ಈ ಸಭೆ ಅಧಿಕೃತ ವೇದಿಕೆಯಾಗಿದೆ. ಇದರಿಂದ ರೈತರು ಹಾಗೂ ಅಧಿಕಾರಿಗಳ ಬಾಂಧವ್ಯ ವೃದ್ಧಿಸಲಿದೆ. ನ್ಯಾಯ ದೊರಕಿಸುವ ಉದ್ದೇಶದಿಂದ ರೈತರಿಂದ ಸ್ವೀಕರಿಸುವ ಕುಂದುಕೊರತೆಗಳನ್ನು ಗಂಭೀರವಾಗಿ ಪರಿಗಣಿಸಿ, ಪಾರದರ್ಶಕವಾಗಿ ಸಮಸ್ಯೆ ಇತ್ಯರ್ಥಕ್ಕೆ ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು.



ಚಾಮರಾಜನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ಶುಕ್ರವಾರ ನಡೆದ ತಾಲೂಕು ಮಟ್ಟದ ರೈತರ ಕುಂದುಕೊರತೆ ನಿವಾರಣಾ ಸಭೆಯಲ್ಲಿ ತಹಶೀಲ್ದಾರ್ ಬಸವರಾಜು ರೈತರ ಅಹವಾಲು ಆಲಿಸಿದರು.

> ಜಮೀನುಗಳಿಗೆ ಹೋಗುವ ದಾರಿ ಒತ್ತುವರಿ ಸಂಬಂಧ ಪ್ರತಿದಿನ 8–10 ದೂರುಗಳು ದಾಖಲಾಗುತ್ತಿವೆ. ತಾಲೂಕು ಕಚೇರಿಯಲ್ಲಿ ಈ ವಿಚಾರಕ್ಕಾಗಿ ವಿಷಯ ನಿರ್ವಾಹಕರನ್ನು ನಿಯೋಜಿಸಲಾಗಿದೆ. ತಾಲೂಕಿನಲ್ಲಿ ಈಗಾಗಲೇ 400ಕ್ಕೂ ಹೆಚ್ಚು ದಾರಿ ಒತ್ತುವರಿ ಅರ್ಜಿಗಳನ್ನು ಪರಿಹರಿಸಲಾಗಿದೆ. 180 ಅರ್ಜಿ ಬಾಕಿ ಇವೆ.
>
> –ಬಸವರಾಜು, ತಹಶೀಲ್ದಾರ್

ಬಳಿಕ ರೈತರು ತಮ್ಮ ಅಹವಾಲುಗಳನ್ನು ಸಭೆಯಲ್ಲಿ ಮಂಡಿಸಿದರು. ತಾಲೂಕಿನ ಜನ್ನೂರು ಭಾಗದ ರೈತರೊಬ್ಬರು ಮಾತನಾಡಿ, ಬರ ಪರಿಸ್ಥಿತಿಯಲ್ಲಿ ಜನರಿಗೆ ಕುಡಿಯುವ ನೀರು ತುಂಬಾ ಅಗತ್ಯವಾಗಿದ್ದು, ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿ ಕೆರೆಗಳಿಗೆ ನೀರು ತುಂಬಿಸುವ ಪ್ರಕ್ರಿಯೆಯಲ್ಲಿ ವಿಳಂಬವಾಗುತ್ತಿದೆ. ಕಾಡುಪ್ರಾಣಿಗಳ ಉಪಟಳ ಅತಿಯಾಗಿದೆ. ಆದರೆ, ಯಾವುದೇ ಪರಿಹಾರ ದೊರೆತ್ತಿಲ್ಲ. ಪಶುಗಳಿಗೆ ಮೇವಿನ ಕೊರತೆಯಾಗಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ತಹಶೀಲ್ದಾರ್, ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಸಮಸ್ಯೆ ನಿವಾರಣೆಗೆ ಕ್ರಮವಹಿಸುವಂತೆ ಸೂಚಿಸಿದರು.

ಬೆಳೆ ವಿಮೆ, ಜಮೀನುಗಳಿಗೆ ರಸ್ತೆ ಮೇವು ಬ್ಯಾಂಕ್, ಜಾನುವಾರುಗಳಿಗೆ ಅನುಗುಣವಾಗಿ ಗೋಮಾಳ–ಗೋಶಾಲೆ, ಮಧ್ಯವರ್ತಿಗಳ ಹಾವಳಿ, ರೈತರ ಜಮೀನುಗಳಲ್ಲಿ ನೀರಿನ ಮೋಟಾರ್, ಪಂಪ್‌ಸೆಟ್ ಕಳ್ಳತನ, ಕಾಡುಪ್ರಾಣಿಗಳ ಹಾವಳಿ, ಬೆಳೆಗಳಿಗೆ ಬೆಂಬಲಬೆಲೆ, ವಿದ್ಯುತ್ ಸಮಸ್ಯೆ, ಇನ್ನಿತರ ಕುಂದು ಕೊರತೆಗಳು ಸಭೆಯಲ್ಲಿ ಮಂಡನೆಯಾದವು. ಇದೇ ವೇಳೆ ತಹಶೀಲ್ದಾರ್ ಬಸವರಾಜು, ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ರೈತ ಮುಖಂಡ ಹೊನ್ನೂರು ಪ್ರಕಾಶ್ ಮಾತನಾಡಿದರು. ತಾಲೂಕು ಮಟ್ಟದ ವಿವಿಧ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಕುಡಿದು ಗಲಾಟೆ ಮಾಡುತ್ತಿದ್ದ ಅಳಿಯನನ್ನು ಕೊಂದ ಮಾವ

ಚಾಮರಾಜನಗರ: ಕುಡಿದು ಗಲಾಟೆ ಮಾಡುತ್ತಿದ್ದ ಎಂದು ಮಾವ ಅಳಿಯನನ್ನು ಕೊಲೆ ಮಾಡಿರುವ ಘಟನೆ ಸಮೀಪದ ಜನ್ನೂರು ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ. ಹುಬ್ಬಳ್ಳಿ ಮೂಲದ ಉಮೇಶ್ ಅಲಿಯಾಸ್ ಗೋಧಿ (48) ಕೊಲೆಯಾದ ವ್ಯಕ್ತಿ. ಕೊಲೆ ಆರೋಪಿ ಮಾವ ನಂಜುಂಡಯ್ಯನನ್ನು ಪೊಲೀಸರು ಬಂಧಿಸಿದ್ದಾರೆ.

ಉಮೇಶ್ ನಂಜುಂಡಯ್ಯನ ಮಗಳನ್ನು ಕಳೆದ 4 ವರ್ಷದ ಹಿಂದೆ ಬೆಂಗಳೂರಿನಲ್ಲಿ ವಿವಾಹವಾಗಿದ್ದ. ಆದರೆ, ಈತ ಕಳೆದ 1 ವರ್ಷದಿಂದ ಹೆಂಡತಿ, ಅತ್ತೆ ಹಾಗೂ ಮಾವ ಅವರೊಂದಿಗೆ ಜನ್ನೂರು ಗ್ರಾಮದಲ್ಲೇ ವಾಸವಾಗಿದ್ದ.

ಉಮೇಶ್ ಪ್ರತಿದಿನ ಕುಡಿದು ಬಂದು ಹೆಂಡತಿ, ಅತ್ತೆ ಹಾಗೂ ಮಾವ ಅವರೊಂದಿಗೆ ಗಲಾಟೆ ಮಾಡುತ್ತಿದ್ದ. ಇದನ್ನು ಸಹಿಸಲಾರದೆ ಮಾವ, ಅಳಿಯ ಮಲಗಿದ್ದಾಗ ತಲೆಗೆ ಕೊಡಲಿಯಿಂದ ಒಡೆದು ಕೊಲೆ ಮಾಡಿದ್ದಾನೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಉದ್ದೇಶ್, ಸರ್ಕಲ್ ಇನ್ಸ್‌ಪೆಕ್ಟರ್ ಬಸವರಾಜು, ಪಿಎಸ್‌ಐ ಮಂಜುನಾಥ್ ನಾಯಕ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಈ ಸಂಬಂಧ ಕುದೇರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಗಮನ ಸೆಳೆದ ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರ



ಚಾಮರಾಜನಗರ, ಫೆ.23–ಬಾಬಾ ಸಾಹೇಬ್ ಅಂಬೇಡ್ಕರ್ ರಚಿಸಿರುವ ಸಂವಿಧಾನ ಎಲ್ಲಾ ಗ್ರಂಥಗಳಿಗಿಂತ ಶ್ರೇಷ್ಠವಾಗಿದೆ ಎಂದು ಜಿಪಂ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದ ಜಿಲ್ಲಾ ಚಿತ್ರ ಕಲಾವಿದರ ಸಂಘ, ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟ ಹಾಗೂ ಪವನ್ ಸೇವಾ ಟ್ರಸ್ಟ್ ವತಿಯಿಂದ ಸಂವಿಧಾನ ಜಾಗೃತಿ ಜಾಥಾ ಅಂಗವಾಗಿ 2 ದಿನ ನಡೆದ ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರದ ಸಮಾರೋಪದಲ್ಲಿ ಮಾತನಾಡಿದ ಅವರು, ಸಂವಿಧಾನ ಜಾಗೃತಿ ಜಾಥಾ ಕರ್ನಾಟಕದಲ್ಲಿ ಮಾತ್ರ ನಡೆಸಿದರೆ ಸಾಲದು, ಇಡೀ ದೇಶಾದ್ಯಂತ ದೊಡ್ಡ ಮಟ್ಟದಲ್ಲಿ ಜಾಥಾ ಆಗಬೇಕು ಎಂದರು.

ನಗರ ಪ್ರದೇಶ, ಗ್ರಾಮ ಪಂಚಾಯಿತಿ, ಶಾಲಾ–ಕಾಲೇಜು, ಸರ್ಕಾರಿ ಕಚೇರಿ, ಕೆಲವೇ ಬಡಾವಣೆಗಳಲ್ಲಿ ಜಾಥಾ ನಡೆಸಿದರೆ ಸಂವಿಧಾನದ ಆಶಯಗಳು ಎಲ್ಲರಿಗೂ ತಲುಪಲ್ಲ. ಹಾಗಾಗಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಎಲ್ಲಾ ಗ್ರಾಮ, ಬಡಾವಣೆಗಳಲ್ಲಿ ಜಾಥಾ ನಡೆಸುವ ಮೂಲಕ ಸರ್ವರಿಗೂ ಸಂವಿಧಾನದ ಜಾಗೃತಿ ಮೂಡಿಸುವಂತಾಗಬೇಕು ಎಂದು ತಿಳಿಸಿದರು.

ಮೈಸೂರು ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್‌ನ ಪ್ರಾಂಶುಪಾಲ ಕೆ.ಸಿ. ಮಹದೇವಶೆಟ್ಟಿ, ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್ ಮಾತನಾಡಿದರು.

ಗಮನ ಸೆಳೆದ ಚಿತ್ರಕಲಾ ಶಿಬಿರ: ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರದಲ್ಲಿ ಕಲಾವಿದರ ಪರಿಶ್ರಮದಿಂದ ಕ್ಯಾನ್ವಾಸ್ ಮೇಲೆ ಸಂವಿಧಾನದ ಆಶಯಗಳು, ಅಂಬೇಡ್ಕರ್ ಜೀವನ ಜೀವನ ಚರಿತ್ರೆಯ ಚಿತ್ರಗಳು ವೀಕ್ಷಕರ ಗಮನ ಸೆಳೆದವು. ಅಂತಾರಾಷ್ಟ್ರೀಯ ಜಾನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ ಮತ್ತು ತಂಡ ನಡೆಸಿಕೊಟ್ಟ ಅಂಬೇಡ್ಕರ್ ಜೀವನ ಚರಿತ್ರೆ, ಸಂವಿಧಾನದ ಆಶಯಗಳ ಗೀತಾ ಗಾಯನ ಕಾರ್ಯಕ್ರಮ ಮನಸೆಳೆಯಿತು. ಇದೇ ಸಂದರ್ಭದಲ್ಲಿ ಚಿತ್ರಕಲಾ ಶಿಬಿರದಲ್ಲಿ ಭಾಗವಹಿಸಿದ ಎಲ್ಲಾ ಚಿತ್ರ ಕಲಾವಿದರಿಗೆ ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಯಿತು.

ಕಬ್ಬು ಬೆಳೆಗಾರರಿಂದ ಅಣುಕು ಶವಯಾತ್ರೆ



ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಅಣುಕು ಶವಯಾತ್ರೆ ನಡೆಸಿದರು.

ಚಾಮರಾಜನಗರ, ಫೆ.23–ದೆಹಲಿ ಚಲೋ ವೇಳೆ ಪ್ರತಿಭಟನಾನಿರತ ರೈತರ ಮೇಲೆ ಅಶ್ರುವಾಯು ಸಿಡಿಸಿ ಯುವ ರೈತನ ಸಾವಿಗೆ ಪೊಲೀಸರು ಮತ್ತು ಕೇಂದ್ರ ಸರ್ಕಾರ ಕಾರಣ ಎಂದು ಆರೋಪಿಸಿ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಅಣುಕು ಶವಯಾತ್ರೆ ನಡೆಸಿದರು.

ಚಾಮರಾಜೇಶ್ವರ ದೇವಾಲಯ ಮುಂಭಾಗದಿಂದ ಅಣಕು ಶವಯಾತ್ರೆ ನಡೆಸಿದ ಪ್ರತಿಭಟನಾಕಾರರು, ಭುವನೇಶ್ವರಿ ವೃತ್ತದ ಬಳಿ ರಾಷ್ಟ್ರೀಯ ಹೆದ್ದಾರಿ ತಡೆ ನಡೆಸಿ ಕೇಂದ್ರ ಸರ್ಕಾರ ಹಾಗೂ ಪೊಲೀಸ್ ವಿರುದ್ಧ ಘೋಷಣೆ ಕೂಗಿದರು. ನಂತರ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳುತ್ತಿದ್ದಂತೆ ಪೊಲೀಸರು ಶವದ ಪ್ರತಿಕೃತಿಯನ್ನು ವಶಪಡಿಸಿಕೊಂಡರು. ಈ ವೇಳೆ ಪ್ರತಿಭಟನಾಕಾರರು, ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ನಂತರ ಜಿಲ್ಲಾಧಿಕಾಗೆ ಮನವಿ ಸಲ್ಲಿಸಿದರು.

ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜು ಪ್ರತಿಭಟನೆ ನೇತೃತ್ವ ವಹಿಸಿದ್ದರು. ಜಿಲ್ಲಾಧ್ಯಕ್ಷ ಪಿ.ಸೋಮಶೇಖರ, ಪ್ರಧಾನ ಕಾರ್ಯದರ್ಶಿಗಳಾದ ಎಚ್.ಮೂಕಳ್ಳಿ ಮಹದೇವಸ್ವಾಮಿ, ಕಿರಗಸೂರು ಶಂಕರ್, ಬಣ್ಣದಪುರ ನಾಗರಾಜು, ಉಪಾಧ್ಯಕ್ಷ ಪಟೇಲ್ ಶಿವಮೂರ್ತಿ, ಕಾಯಾಧ್ಯಕ್ಷ ಉಡಿಗಾಲ ರೇವಣ್ಣ, ತಾಲೂಕು ಸತೀಶ್ ನಂಜದೇವನಪುರ, ತಿ.ನರಸೀಪುರ ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ತಾಲೂಕು ಕಾರ್ಯದರ್ಶಿ ಉಡಿಗಾಲ ಸುಂದ್ರಪ್ಪ ಸಂಘಟನಾ ಕಾರ್ಯದರ್ಶಿ ಕುರುಬೂರು ಪ್ರದೀಪ್, ಉಡಿಗಾಲಪ್ರಸಾದ್, ರಘು ಉಡಿಗಾಲ ಇತರರು ಭಾಗವಹಿಸಿದ್ದರು.

ಅಪ್ರಾಪ್ತೆಗೆ ಲೈಂಗಿಕ ದೌರ್ಜನ್ಯ: ಅಪರಾಧಿಗೆ 20 ವರ್ಷ ಶಿಕ್ಷೆ

ಚಾಮರಾಜನಗರ, ಫೆ.23–ಅಪ್ರಾಪ್ತೆಯನ್ನು ಪ್ರೀತಿಸಿ ಮದುವೆಯಾಗುವುದಾಗಿ ನಂಬಿಸಿ, ಲೈಂಗಿಕ ದೌರ್ಜನ್ಯ ಎಸಗಿದ ಅಪರಾಧಿಗೆ ನಗರದ ವಿಶೇಷ ಪೋಕ್ಸೋ ನ್ಯಾಯಾಲಯ 20 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಕೊಳ್ಳೇಗಾಲ ತಾಲೂಕಿನ ಕೆ.ಎಸ್.ದೊಡ್ಡಿ ಗ್ರಾಮದ ರಾಜಪ್ಪ (26) ಶಿಕ್ಷೆಗೊಳಗಾದ ಅಪರಾಧಿ. ಈತ 2020ರಲ್ಲಿ 16 ವರ್ಷದ ಅಪ್ರಾಪ್ತೆಯನ್ನು ಪ್ರೀತಿಸುವುದಾಗಿ ನಂಬಿಸಿ, ತಮಿಳುನಾಡಿಗೆ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಈ ಸಂಬಂಧ ರಾಮಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಅಂದಿನ ಸರ್ಕಲ್ ಇನ್ಸ್‌ಪೆಕ್ಟರ್ ಮನೋಜ್‌ಕುಮಾರ್ ಈತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಲೋಕಪ್ಪ ಅಪರಾಧಿಗೆ ಪೋಕ್ಸೋ ಕಾಯ್ದೆಯಡಿ 20 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿದ್ದಾರೆ. ನೊಂದ ಬಾಲಕಿಗೆ ಕಾನೂನು ಸೇವಾ ಪ್ರಾಧಿಕಾರದಿಂದ 4 ಲಕ್ಷ ರೂ. ಪರಿಹಾರ ನೀಡುವಂತೆ ಆದೇಶಿಸಿದ್ದಾರೆ. ಸರ್ಕಾರಿ ಅಭಿಯೋಜಕ ಕೆ.ಯೋಗೇಶ್ ವಾದ ಮಂಡಿಸಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕು ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ಅಥವಾ ಸಂಜೆ 4 ರಿಂದ ರಾತ್ರಿ 9 ರವರೆಗೆ ಕುವೆಂಪುನಗರ
9535370330

ಮನೆ ಬಾಡಿಗೆಗೆ/ಮಾರಾಟಕ್ಕೆ
40x60, 3 ರೂಂ ಗ್ಯಾರೇಜ್‌ವುಳ್ಳ ಮನೆ ರಾಮಕೃಷ್ಣನಗರ ದಟ್ಟಗಳ್ಳಿ 3ನೇ ಹಂತ, 30x40, 20x30 ದಟ್ಟಗಳ್ಳಿ ವಸಂತನಗರ ರಾಮಕೃಷ್ಣನಗರ ಬೇಕಾಗಿದೆ MUDA ಸೈಟುಗಲು ಮನೆಗಳು ಕ್ರಯಕ್ಕೆ ಬೇಕಾಗಿದೆ. ಕೊಡುವ ಮಾಲೀಕರು ಸಂಪರ್ಕಿಸಿ:
9448938989

ಬೇಕಾಗಿದ್ದಾರೆ
ಮೊಬೈಲ್ ಟೆಕ್ನಿಷಿಯನ್ (ಅನುಭವ: 1 ವರ್ಷ)
ಅಧಿಕೃತ್ ಮೊಬೈಲ್ ಸರ್ವಿಸ್ ಸೆಂಟರ್
ಡಿ.ಡಿ.ಅರಸ್ ರಸ್ತೆ, ಮೈಸೂರು
9880910706

S.K.CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತ್ಯುತ್ತಮ ಗುಣಮಟ್ಟದಲ್ಲಿ Plan 3D ಎಲಿವೆಶನ್ ಸಹಿತ. ಹೊಸ ಮನೆ Construction ಮತ್ತು All ಇಂಜಿನಿಯರಿಂಗ್ ಸರ್ವಿಸ್ ಮಾಡಿ ಕೊಡಲಾಗುತ್ತದೆ.
9620528490

Muda Approved sites for Sale
"Ananda Sagara 30.40"Nithyananda Sagara 30.40 "Asset' shoppe (MMG) 30.40
All site's East face
JK **7892846068**

HOUSE FOR LEASE
At Vijayanagar 4th Stage, Near NPS School, 2BHK House in the First Floor with Site Outs & Coverd shed Car Parking
9686456679
9480792529

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಹೋಟೆಲ್ ಒಂದಕ್ಕೆ
* ದೋಸೆ ಮಾಸ್ಟರ್ ಹಾಗೂ ಕಾಫಿ ಮಾಸ್ಟರ್ ಬೇಕಾಗಿದ್ದಾರೆ.
9900661620

ಹೊಸ ಮನೆ ಮಾರಾಟಕ್ಕಿದೆ
ಉತ್ತರದಿಕ್ಕು 20x30 GF/FF ರೈಲ್ವೆ ಲೇಔಟ್, ಜೆ.ಪಿ.ನಗರ, ಮೈಸೂರು
8660108796
9538956060

HOUSE FOR SALE
Newly Constructed on MUDA approved 25x30 N/W Corner 3BHK Duplex Home at Koppalur J.P.Nagar, 85 Lakhs, Slightly Negotiable
9945046621

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

KHB SITE FOR SALE
60 x 40, SOUTH FACE, 2600/Sq Ft. KENCHALAGUDU, MYSURU, CONTACT
9632102676

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

ಮುಡಾ ಮನೆ ಮಾರಾಟಕ್ಕಿದೆ
20x30 ಮನೆ, ಪಶ್ಚಿಮ ದಿಕ್ಕು. ಸ್ಥಳ: ಹೆಬ್ಬಾಳ್ 1ನೇ ಹಂತ, ಮೈಸೂರು.
ಸಂಪರ್ಕಿಸಿ:
9980797799, 8088880763

Pay Just 3 Lakhs
& Own Your Dream Sites
- Balance through Bank Loan
- Behind Airport
- 600 to 1200 Sqft Area
- Starts from 9 Lakhs

Nidhi Estates **78991 28100** **99026 69880**

ದೈವ ಕೃಪಾ
ಅರಸುಗಳು ಲಿಂಗಾಯತ ಒಕ್ಕಲಿಗ, SC, ST ಗಾಣಿಗ, ಮರಾಠ, ಆಚಾರ್ ಮಡಿವಾಳ್ ಮೊದಲಿಯಾರ್ ಗೌಂಡರ್ ನಯನಕ್ಷತ್ರೀಯ ದೇವಾಂಗ ಕ್ರಿಶ್ಚಿಯನ್ ಬ್ರಾಹ್ಮಿನ್ಸ್ ವಧು ವರರಿಗೆ ಹಾಗೂ 2ನೇ ಸಂಬಂಧಕ್ಕೆ ಕೂಡಲೇ ಸಂಪರ್ಕಿಸಿ:
9902802154

ಮೈತ್ರಿ ಟ್ರಾವೆಲ್ಸ್
ಶಿರಡಿ ಬಸ್ ಪ್ರವಾಸ 5 ದಿನಗಳು 19-03-2024.
ಒಡಿಶಾ ವಿಮಾನ ಪ್ರವಾಸ ಪುರಿ, ಕೋನಾರ್ಕ್ ಭುವನೆಶ್ವರ 4 ದಿನಗಳು 02-04-2024
6360422209

ಸಾಲ / LOANS
* Housing Loan
* Construction Loan
* Mortgage Loan

Loans for MUDA, Corporation & Revenue Property.
98807-18980

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: **8861401315**

2/3 BHK BUDGET HOUSES
@ in upcoming Area from Prominent Engineers

SITE	AREA	BLDG	COST	DOWNPAYMENT (APPROXIMATE) FLEXIBLE
30 X50	Bannur Road	12.Sq	68Lakh	40 Lakh
30 X40	Hebbal	10.Sq	68Lakh	45 Lakh
30X50	Kote Road	12.Sq	54Lakh	28 Lakh
20X30	JP Nagar Ring Road	5.5.Sq	33Lakh	22 Lakh
40X60	Judicial Bogadi	16.Sq	155Lakh	120 Lakh

Also Contact For Sites - No Brokage
Also Contact For Building Plans - Licence
9886697052

RS CONSTRUCTION
Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ ಇಂದೇ ಸಂಪರ್ಕಿಸಿ
9538575009
7019151884

ಬೇಕಾಗಿದ್ದಾರೆ
ಮನೆ ಕೆಲಸ, ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ. ಸರಸ್ವತಿಪುರಂ.
Mob: **7411216781**

MUDA APPROVED LAYOUT SITE FOR SALE
NEAR DEEPA SCHOOL BOGADI
1325 Sq.ft. North Facing
Good Location
9483358399

OPPERTUNITY
OPENINGS FOR
- TELECALLERS (FEMALE Only)
- Sales Co-ordinator
- Marketing and Sales

8884888720
9880505651

HOUSE FOR SALE
20x30, 3 Floor building. 87 Lakhs slightly negotiable. S/F site E/D near Marimallappa Compound, Vijayanagar 4th Stage, 2nd Phase, Mysore. Contact:
Mob: **8073723223**

ಬೇಕಾಗಿದ್ದಾರೆ
ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಈ ತಕ್ಷಣ ಕೆಳಕಂಡ ಫೋನ್‌ಗೆ ಸಂಪರ್ಕಿಸಿ:
9606003196, 9449242509

ಮನೆ ಮಾರಾಟಕ್ಕಿದೆ
40x70, 28 ಚದರ 4 BHK, 120 ಲಕ್ಷ.
ಶ್ರೀರಾಂಪುರ ರಿಂಗ್ ರಸ್ತೆ, ಜೆ.ಪಿ. ನಗರ ರಿಂಗ್ ರಸ್ತೆ ಹತ್ತಿರ.
Mob: **9342288281**

Property for sale / lease
Semi commercial place 30x45 at Kuvempunagar. Suitable for Shops / Banks / ATM's / Societies / Office. Contact:
Mob: **9886448430**

ಬೇಕಾಗಿದ್ದಾರೆ
ಹೋಟೆಲ್‌ವೊಂದಕ್ಕೆ ಬ್ರಾಹ್ಮಣ ಶೈಲಿಯಲ್ಲಿ ಅಡುಗೆ ಮಾಡುವವರು ಬೇಕಾಗಿದ್ದಾರೆ.
ಸಂಪರ್ಕಿಸಿ:
9741862929, 7019556513

WANTED
Office Boy
Age 21-30 Yrs
Male Vijayanagar 4th Stage, Developer Office
9900783098

20x30,30x40 ಡ್ಯೂಪ್ಲೆಕ್ಸ್ ಮನೆಗಳು ಮಾರಾಟಕ್ಕಿವೆ
- ಕನಕದಾಸ ನಗರ
- ಶ್ರೀರಾಂಪುರ
- ವಿಜಯನಗರ 4ನೇ ಹಂತ

9341050560
9448425692
ಖರೀದಿದಾರರು ಮಾತ್ರ ಸಂಪರ್ಕಿಸಿ:

WANTED
Room Boys and Receptionist for Lodge.
8050936432, 9743221781/2

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: **9008711654**

25x40
Vidyaranyapuram
Semi-Commercial Site, West South Corner Old Demolish House for Sale, Price - 76 Lakhs
Near Apollo Pharmacy
8660105902

SITES for SALE
JP Nagar Ring Road
20 x 30 - 17 Lakhs,
30 x 40 - 33 Lakhs,
Near Gurur Bus Stop, Ramabainagar,Mysore.
DTCP approved (Corporation limits)
1.5 Kms from JP Nagar Ring Road
8660105902

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ
Salary+OT: 18800-68,000/-
9035022214
9035022290

100% ಕೆಲಸ
ಮೈಸೂರಿನ ಕೈಗಾರಿಕ ಪ್ರದೇಶಗಳಾದ ಹೂಟಗಳ್ಳಿ, ಮೇಟಗಳ್ಳಿ, ನಂಜನಗೂಡು, ಹೆಬ್ಬಾಳ ಮುಂತಾದ ಏರಿಯಾಗಳಲ್ಲಿರುವ ಕಂಪನಿಗಳಿಗೆ Production, Line incharge, Store Dept., Helpers, Packers ಮುಂತಾದ ಹುದ್ದೆಗಳಿಗೆ. 7th, 10th, PUC, ITI Diploma (Pass/Fail ಆದವರು ಬೇಕಾಗಿದ್ದಾರೆ. ಸಂಬಳ: 14000/- 45000 (ESI+PF+OT) ಯೊಂದಿಗೆ
9513829246,6364103418

REQUIRED
Part time Hindi Teachers are required.
Interview time 9.30 to 5.30
VITAL RECORDS PVT. LTD.
Address: #42, JCK Industrial Park, Metagalli Post, Near Preeti Granite, KRS Road, Mysore-570 016.
Call: **8867064586**

House for Sale
30x50 BHK, East face, near JP Nagar Ring Road, Mysore.
9611537157, 9738884777

ಬೇಕಾಗಿದ್ದಾರೆ
ನುರಿತ Accounts Assistant ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. (Tally ERP 9) ಬಗ್ಗೆ ಅನುಭವವಿರಬೇಕು. ಸಂಪರ್ಕಿಸಿ:
ಶೇಖರ್ **9945911118**
ಮನೋಜ್ **9036282500**

TO LET
1200 Sq.ft. ಇರುವ ಹೊಸ ಅಪಾರ್ಟ್‌ಮೆಂಟ್‌ಗಳು (Lease) ಭೋಗ್ಯಕ್ಕೆ ಇದೆ. (NPS School ಹತ್ತಿರ), ವಿಜಯನಗರ 4ನೇ ಹಂತ, ಮೈಸೂರು.
9880268501, 9844145987

ಹೊಸ ಮನೆ ಮಾರಾಟಕ್ಕಿದೆ
20x30 (Triplex), 4 BHK (S/E), full teak (Opp. Park), ಮಹಾಮನೆ ಸರ್ಕಲ್ ಹತ್ತಿರ, ದಟ್ಟಗಳ್ಳಿ, ಮೈಸೂರು.
9880268501, 9844145987

2 SITES FOR SALE
30x40 At OLIVE ENCLAVE ON MYS B'LORE HIGHWAY 4 KM FROM COLUMBIA 26 LAKHS
50X80 DATTAGALLI E/F (NEAR KEB CIRCLE RING ROAD)
9342125252

ಬೇಕಾಗಿದ್ದಾರೆ
(ಸರ್ಕಾರಿ ನೊಂದಾಯಿತ ಸಂಸ್ಥೆ)
Home Nursing ಕೆಲಸದಲ್ಲಿ ಅನುಭವವಿರುವ ಮಹಿಳಾ & ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. (ತುರ್ತಾಗಿ)
Salary : 15000 to 18000
6366104034
8970630124

ಮನೆ ಮಾರಾಟಕ್ಕಿದೆ
ಮೈಸೂರು ಶ್ರೀರಾಂಪುರ, ಕಂದಾಯ ನಗರ 1ನೇ ಹಂತ, 30x40 ಡ್ಯೂಪ್ಲೆಕ್ಸ್ ಹೊಸ ಮನೆ 4 room, 1 Gym Room.
Mob: **9945615736**

WANTED
ಅನುಭವವುಳ್ಳ ವ್ಹೀಲ್ ಅಲೈನ್‌ಮೆಂಟ್ ಟೆಕ್ನಿಷಿಯನ್ ಬೇಕಾಗಿದ್ದಾರೆ. ಸಂಪರ್ಕಿಸಿ:
MOB: **7204224437** (Nitesh)
ಎಕ್ಸ್‌ಟ್ರೀಮ್ ಡೀಟೈಲರ್ಸ್ ಮತ್ತು ವ್ಹೀಲ್ ಕೇರ್

ಸೈಟು ಮಾರಾಟಕ್ಕಿದೆ
ಮುಡಾ ಅಪ್ರೂವ್ಡ್ 30x40 - North, West 40x60 above S/E Corner. 40x60 W/F ರಿಂಗ್ ರೋಡ್ ಹತ್ತಿರ ಯೂನಿವರ್ಸಿಟಿ ಲೇಔಟ್ ಎದುರು 30x50 and above ವರ್ಕೂಡ್ ಹತ್ತಿರ 30x40 S/F ಏರ್‌ಪೋರ್ಟ್ ಹಿಂಭಾಗ.
Mob: **9900372792**

SITE FOR SALE
West facing 40x60 Maple Green Layout RT Nagar, Mysore
9480383030, 9880009261

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED
Immediate Requirement Accountant for the reputed Developer office in Mysuru Experience in Tally, GST, TDS ant ITR filling can apply for this.
8123548621

ತಕ್ಷಣ ಬೇಕಾಗಿದ್ದಾರೆ
ಹೆಸರಾಂತ MNC ಕಂಪನಿಗಳಿಗೆ 7th, SSLC, PUC, Any Degree , ITI, Diploma, M.Com, MA, MBA, Pass / Fail ಆದ ಯುವಕ ಯುವತಿಯರು Q/C Packing Helper, Data Entery, Cashier, billing Admin, HR Drivers ಬೇಕಾಗಿದ್ದಾರೆ. ಸಂಬಳ: 15,000 ರಿಂದ 45,000 (ESI+PF+OT) ಸೇರಿ.
9916641959,9741307322

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: **8880558064**

MUDA APPROVED SITE, BOGADI ROAD
28x30, 30x40
West & Corner (2 Sites)
Price: 46 / 62 Lakhs
Near Trends Apartment
8660105902

ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್
9591012944

40x41 Karle Habitat
MUDA APPROVED
South facing site for sale, near Dattagalli, Lingabudhi Palya. Price: 4300 / sq.ft.
Within Ring Road, Gated Community
8660105902

ನಿವೇಶನ ಮಾರಾಟಕ್ಕಿದೆ
ಸಿದ್ದಾರ್ಥ ನಗರದ ಗುರುರಾಜ ಬಡಾವಣೆಯ ಕಾವೇರಿ ಜೋಡಿ ರಸ್ತೆಯ ಪೂರ್ವ ದಿಕ್ಕಿನ ಬಸ್ ರೂಟ್‌ನ ನಿವೇಶನ
ಪೂರ್ವ ಪಶ್ಚಿಮ 50 ಅಡಿ
ಉತ್ತರ ದಕ್ಷಿಣ 40 ಅಡಿ
9900655615
9880479678

ತಕ್ಷಣ ಬೇಕಾಗಿದ್ದಾರೆ
ಖಾಲಿ ಇರುವ ಅವಕಾಶಗಳು
Earn (8500/- 20000/-) PM
ವಯೋಮಿತಿ Age (18-25) 10th, PUC, BBM, Diploma, ITI ಯಾದ ಹೊಸಬರಿಗೆ ಆದ್ಯತೆ ಯಾವುದೇ ಶುಲ್ಕ ಇರುವುದಿಲ್ಲ. ಪರಸ್ಥಳದವರಿಗೆ ಮಾತ್ರ ವಸತಿ ನೇರವಾಗಿ ಭೇಟಿಯಾಗಿ ಮೈಸೂರು
ANU: **9342827788**
(11 AM to 3PM)

ಪ್ರಮಾಣ ಪತ್ರ
ಮಂಡ್ಯ ಜಿಲ್ಲೆ ಪಾಂಡವಪುರ ಟೌನ್ ಬಸವನಗುಡಿ ಬೀದಿಯ ಲೇಟ್ ರಾಯಪ್ಪನವರ ಹೆಂಡತಿ ಅಣ್ಣಮ್ಮಳಾದ ನನ್ನ ಹೆಸರು ಎಲ್ಲಾ ದಾಖಲಾತಿಗಳಲ್ಲಿ ಆಧಾರ್ ಕಾರ್ಡ್ (8382–6401–1998) ನಲ್ಲಿ ಅಣ್ಣಮ್ಮ ಎಂದು ದಾಖಲಾಗಿದ್ದು, ಕರ್ನಾಟಕ ಸರ್ಕಾರದ ನಿರ್ಗತಿಕ ವಿಧವಾ ವೇತನದ ಮಂಜೂರಾತಿ ಪತ್ರದಲ್ಲಿ ಮೇರಿಯಮ್ಮ ಎಂದು ನಮೂದಾಗಿದ್ದು ಮೇಲ್ಕಂಡ ಎರಡು ಹೆಸರು ನನ್ನದೇ ಆಗಿರುತ್ತದೆ. ಎಂದು ನೋಟರಿಯವರ ಪ್ರಮಾಣಪತ್ರಕ್ಕೆ ಸಹಿ ಹಾಕಿರುತ್ತೇನೆ.
ಸಹಿ/– ಅಣ್ಣಮ್ಮ

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: **7829937469**
ONLINE TRAINING AVAILABLE



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಶುಂಠಿ ಕೃಷಿಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್ #203, ಬನ್ನಿಮಂಟಪ ಬಡಾವಣೆ, ಮೈಸೂರು–570 015
Mob: **80888-87802**

2.5 BHK HOME INTERIORS @
₹ 2.5 Lacs*
Home Space Mart
TALK TO OUR DESIGN TEAM
8197310113

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM ® 10yrs WARRANTY
ISO 9001:2015 Certified Depot
CALL **99012 91267** **98454 26862**

ತಕ್ಷಣ ಬೇಕಾಗಿದ್ದಾರೆ
ನಂಜನಗೂಡು ಮತ್ತು ಕಡಕೊಳ ಏರಿಯಾದಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ ಮತ್ತು ಡ್ರೈವರ್ Cum ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC, ಸಂಬಳ: 25000 ವಯೋಮಿತಿ – 45 ವರ್ಷದ ಒಳಗೆ ESI & PF ಸೌಲಭ್ಯವಿರುತ್ತದೆ.
9538567819
8310066229

ವಾಣಿಜ್ಯ ಜಾಗ ಬಾಡಿಗೆಗೆ ದೊರೆಯುತ್ತದೆ
1. ವಿಸ್ತೀರ್ಣ – 7000 + ಚದರ ಅಡಿ
2. ವಿಸ್ತೀರ್ಣ –8000+ ಚದರ ಅಡಿ

ಒಟ್ಟು ವಿಸ್ತೀರ್ಣ–15000+ಚದರ ಅಡಿ
ಸ್ಥಳ: ಎಂ.ಎಂ.ರಸ್ತೆ, ಬನ್ನೂರು (ಇಂದಿರಾ ಥಿಯೇಟರ್ ಹತ್ತಿರ)
9538189789
9986383555

SITES FOR SALE
30X40 W/F sites for 61 lakhs (Negotiable) at GATE WAY, Opp.to Manipal Hospital, Mysore - Bangalore Road
Contact:
8431050731, 8073280019

HOUSE FOR SALE
20X40 NEW DUPLEX HOUSE FOR SALE IN koppalur near jp Nagar ring road 50x80 site for sale in BEML Layout attached Srinagar
9880344263

ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಗಳಲ್ಲಿ Loan Recovery Telecalling ಮಾಡಲು ಮಹಿಳಾ ಟೆಲಿಕಾಲರ್ಸ್ ಬೇಕಾಗಿದ್ದಾರೆ. (ಮೈಸೂರಿನವರಿಗೆ ಮಾತ್ರ) ಪಿಯುಸಿ (PUC) ಪಾಸಾದವರಿಗೆ ಆದ್ಯತೆ
9845311066, 9980929313
9901945444

BEFORE DRILLING BOREWELL CONTACT
ಸಿ.ಟಿ. ಚಂದ್ರಶೇಖರ್
ಭೂ ವಿಜ್ಞಾನಿ
Ground Water Consultant
9448389090

Pre-University Layout
KHB ಕೆಂಚಲಗೂಡು ಪಕ್ಕದ ಲೇಔಟ್ 30x40 ಅಳತೆಯ ಸೈಟ್ ಸಂಖ್ಯೆ 100 East Face ಪೂರ್ವ ಮುಖದ MUDA ಖಾತೆ
7259135555

ಮನೆ ಮಾರಾಟಕ್ಕಿದೆ
ಲಾಲ್ ಬಹದ್ದೂರ್ ಶಾಸ್ತ್ರಿನಗರ 60x40 ಸೈಟಿನಲ್ಲಿ ಕಟ್ಟಿರುವ 6.5 ಚದುರ RCC ಮನೆ (ಬೋರ್‌ವೆಲ್ ಇದೆ)
Facing West, Near VTU Engeneering College
9740030216

ಕಳೆದಿದೆ
ದರ್ಶಿನಿ ಡಿ.ಸಿ. ಮೈಸೂರು ತಾಲ್ಲೂಕು ಕಸಬಾ ಹೊಬಳಿ, ಹಂಚ್ಯಾ ಗ್ರಾಮಕ್ಕೆ ಸೇರಿದ ಸರ್ವೆ ನಂ. 102/2, 102/3ರಲ್ಲಿ ಈಶ್ವರಿ ಲೇಔಟ್ ನಿವೇಶನ ನಂ. 44ರ ಮೂಲ ದಾಖಲಾತಿಗಳು ಕಳೆದು ಹೋಗಿರುತ್ತದೆ. ಸಿಕ್ಕಿದವರು ಸಂಪಕಿಸಿ:
9448453709

ತಕ್ಷಣ ಬೇಕಾಗಿದ್ದಾರೆ
TVS ಫ್ಯಾಕ್ಟರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC, ಸಂಬಳ: 16000 ವಯೋಮಿತಿ: 45 ವರ್ಷದ ಒಳಗೆ ESI & PF ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9620667819

SITE FOR SALE
40X45, North Face Site on Bogadi-Gaddige Main Road Near St. Francis School
Price: 65 Lakhs, (Brokers Excuse.)
9164427777

CHANGE OF NAME
I Sheetal Siddharth Wanjari W/o Dipakkumar Arvind Chaure R/a, No.C-188, RBI Township, Note Mudran Nagar, Mysore -570003, have chaged my name as Sheetal Dipakkumar Chaure on my own free will infront of Notary C. Mangala on 23-2-2024 at Mysore
Sd/- Sheetal Dipakkumar Chaure

ಮೈಸೂರು ಮಿತ್ರ ಓದುಗರ ಗಮನಕ್ಕೆ

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ

ಡಿ.ದೇವರಾಜ ಅರಸು, ಶ್ರೀ ಶಿವಕುಮಾರ ಸ್ವಾಮೀಜಿಗೆ 'ಭಾರತರತ್ನ' ನೀಡಿ

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ ಆಗ್ರಹ


ಮೈಸೂರು,ಫೆ23(ಆರ್.ಕೆ)–ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಮತ್ತು ಸಿದ್ದಗಂಗಾ ಮಠದ ಪೀಠಾಧಿಪತಿಗಳಾಗಿದ್ದ ಲಿಂಗೈಕ್ಯ ಡಾ। ಶ್ರೀ ಶಿವಕುಮಾರ ಸ್ವಾಮಿ ಅವರಿಗೆ ಮರಣೋತ್ತರವಾಗಿ 'ಭಾರತರತ್ನ' ಪ್ರಶಸ್ತಿ ನೀಡಬೇಕೆಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಒತ್ತಾಯಿಸಿದ್ದಾರೆ.

ಪತ್ರಕರ್ತರ ಭವನದಲ್ಲಿ ಇಂದು ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡುತ್ತಿದ್ದ ಅವರು ಕರ್ನಾಟಕ ರಾಜ್ಯದಲ್ಲಿ ತಳ ಸಮುದಾಯಕ್ಕೆ ನೆರವು ನೀಡುವುದರ ಜೊತೆಗೆ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸಿ ದೇವರಾಜ ಅರಸುರವರು ಸಫಲರಾಗಿದ್ದರು ಭೂಸುಧಾರಣಾ ಕಾಯ್ದೆ ಜಾರಿಗೆ ತಂದು ಉಳುವವನೇ ಭೂಮಿಯ ಒಡೆಯರನ್ನಾಗಿ ಮಾಡಿದ್ದ ಸರಳ, ಸಜ್ಜನಿಕೆಯ ಮುಖ್ಯಮಂತ್ರಿಗಳಾಗಿದ್ದರು ಎಂದರು.

ನಾಡಿನ ಸರ್ವತೋಮುಖ ಅಭಿವೃದ್ಧಿಗೆ ತನ್ನದೇ ಕೊಡುಗೆ ನೀಡಿದ್ದ ಅವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣಪುಟ್ಟ ಸಮುದಾಯಗಳ ಜೀವನ ಉತ್ತಮಪಡಿಸಿ ಕರ್ನಾಟಕವನ್ನು ಮಾದರಿ ರಾಜ್ಯವನ್ನಾಗಿಸಿದ ಕೀರ್ತಿಕೆ ಪಾತ್ರರಾಗಿದ್ದರು. ಅವರ ದೂರದೃಷ್ಟಿ ಪ್ರಗತಿಪರ ಯೋಜನೆಗಳು ಇಂದಿಗೂ ಪ್ರಸ್ತುತ ಎಂದೂ ಅವರು ತಿಳಿಸಿದರು. ಅದೇ ರೀತಿ ತುಮಕೂರಿನ ಸಿದ್ಧಗಂಗಾ ಮಠದ ಪೀಠಾಧಿಪತಿಗಳಾಗಿದ್ದ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿ ಅವರು ಲಕ್ಷಾಂತರ ಮಕ್ಕಳಿಗೆ ವಿದ್ಯೆ, ದಾಸೋಹ, ತರಬೇತಿ ನೀಡಿ ಜೀವನ ಕಟ್ಟಿಕೊಂಡಿದ್ದಾರೆ. ಮಠದ ಮೂಲಕ ಜಾತಿ–ಬೇಧ–ಮತ ಎನ್ನದೆ ಧಾರ್ಮಿಕ ಸಂಸ್ಕೃತಿ–ಸಂಸ್ಕಾರ ನೀಡಿ ಹಲವರ ಬದುಕಿಗೆ ದಾರಿ ದೀಪವಾಗಿದ್ದ ಶ್ರೀಗಳನ್ನು ನಡೆದಾಡುವ ದೇವರೆಂದೇ ಕರೆಯಲಾಗಿತ್ತು. ಸರ್ಕಾರ ಮಾಡಬೇಕಾದ ಕೆಲಸವನ್ನು ಮಠಾಧಿಪತಿಗಳಾಗಿ ಪೂರೈಸಿ ಸಮಾಜಕ್ಕೆ ಅತಿರಥ ಸೇವೆ ಸಲ್ಲಿಸಿದ್ದವರು ಶ್ರೀಗಳು ಎಂದು ವಿಶ್ವನಾಥ್ ನುಡಿದರು.

ಮುಖ್ಯಮಂತ್ರಿಗಳಾಗಿ ಸಾಧನೆ ಮಾಡಿದ್ದ ದಿವಂಗತ ಡಿ.ದೇವರಾಜ ಅರಸು ಹಾಗೂ ಸಂತರಾಗಿ ಅವಿರತ ಸೇವೆ ಸಲ್ಲಿಸಿದ್ದ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ ಮರಣೋತ್ತರ ಭಾರತರತ್ನ ಪ್ರಶಸ್ತಿ ನೀಡಬೇಕೆಂದು ಆಗ್ರಹಿಸಿದ ಅವರು ಈ ಸಂಬಂಧ ರಾಜ್ಯದ ಮುಖ್ಯಮಂತ್ರಿಗಳು, ಶಾಸಕರು ಧ್ವನಿ ಎತ್ತಬೇಕು, ರಾಜ್ಯದಿಂದ ಕೇಂದ್ರಕ್ಕೆ ಪತ್ರ ಬರೆದು ಒತ್ತಾಯಿಸಬೇಕು ಎಂದು ತಿಳಿಸಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ನಾನೂ ಕಾಂಗ್ರೆಸ್ ಟಿಕೆಟ್ ಅಕಾಂಕ್ಷಿ: ಎ.ಹೆಚ್.ವಿಶ್ವನಾಥ್



ಮೈಸೂರು, ಫೆ. 23(ಆರ್‌ಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ನಾನೂ ಸಹ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಾನು ಶಾಸಕನಾಗಿ, ಸಚಿವನಾಗಿ, ಸಂಸದನಾಗಿ, ವಿಧಾನಪರಿಷತ್ ಸದಸ್ಯನಾಗಿ ಕೆಲಸ ಮಾಡಿದವನು. ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ದುಡಿದಿದ್ದೇನೆ. ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗ, ಸಂಸದನಾಗಿದ್ದಾಗ ಮಾಡಿದ ಕೆಲಸ, ಜಾರಿಗೆ ತಂದ ಯೋಜನೆಗಳು ಇನ್ನು ಅಚ್ಚಳಿಯದಂತಿವೆ. ಇಷ್ಟೆಲ್ಲಾ ಮಾಡಿ ರಾಜಕೀಯದಲ್ಲಿ ಹಲವು ಮಜಲುಗಳನ್ನು ಕಂಡ ನಾನೂ ಏಕೆ 2024ರ ಲೋಕಸಭಾ ಚುನಾವಣೆಗೆ ಸ್ಪರ್ಧಿಸಬಾರದು? ಏಕೆ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಬಾರದು ಎಂದು ಪ್ರಶ್ನಿಸಿದರು.

ಬಿಜೆಪಿ ಸರ್ಕಾರದಲ್ಲಿ ಖಜಾನೆ ಭರ್ತಿಯಾಗಿತ್ತೆ?: ಬಿಜೆಪಿ ಅಧಿಕಾರದಲ್ಲಿದ್ದ ಅವಧಿಯಲ್ಲಿ ಕರ್ನಾಟಕ ರಾಜ್ಯದ ಖಜಾನೆ ಭರ್ತಿಯಾಗಿತ್ತೆ? ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ವಿಶ್ವನಾಥ್ ತಿರುಗೇಟು ನೀಡಿದ್ದಾರೆ. ರಾಜ್ಯ ಸರ್ಕಾರದ ಖಜಾನೆ ಖಾಲಿ ಯಾಗಿರೋದ್ರಿಂದ ದೇಗುಲಗಳ ಹುಂಡಿ ಹಣಕ್ಕೂ ಸರ್ಕಾರ ಕೈ ಹಾಕಿದೆ ಎಂಬ ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ನಿಮ್ಮಪ್ಪನನ್ನು ಜೈಲಿಗೆ ಹಾಕಿಸಿದ್ದೇ ನೀವು. ನೀವೇನು ಸತ್ಯವಂತರೇ ಎಂದು ಕಿಡಿಕಾರಿದರು.

ಮೀಸಲಾತಿ ವಿರೋಧ ಸರಿಯಲ್ಲ: ಸಹಕಾರಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿಯಾಗಬೇಕು. ನಾನು ಸಹಕಾರ ಸಚಿವನಾಗಿದ್ದಾಗ ಈ ಬಗ್ಗೆ ಪ್ರಯತ್ನಿಸಿದ್ದೆ. ಈಗ ಸಹಕಾರ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಅದಕ್ಕೆ ಶಾಸಕ ಜಿ.ಟಿ.ದೇವೇಗೌಡ ವಿರೋಧಿಸುತ್ತಿರುವುದು ಸರಿಯಲ್ಲ ಎಂದರು.

ಪತ್ನಿ, ಮಗ ಸಹಕಾರಿ ಕ್ಷೇತ್ರದಲ್ಲಿದ್ದಾರೆ. ನೀವೂ ಸಹ ಅದೇ ಕ್ಷೇತ್ರದಲ್ಲಿದ್ದು ಅಧಿಕಾರ ಅನುಭವಿಸಿದ್ದೀರಿ. ಮೀಸಲಾತಿ ವಿರೋಧಿಸುತ್ತಿರುವ ನೀವು ಕೇವಲ ಒಂದು ಸಮುದಾಯದ ಬೆಂಬಲ ಪಡೆದು ಶಾಸಕರಾಗಿದ್ದೀರಾ ಎಂದು ಅವರು ಜಿ.ಟಿ. ದೇವೇಗೌಡರನ್ನು ಪ್ರಶ್ನಿಸಿದರು.

67 ಸಾವಿರ ಸಹಕಾರ ಬ್ಯಾಂಕುಗಳ ಪೈಕಿ 42 ಸಾವಿರ ಬ್ಯಾಂಕುಗಳು ಲಾಭದಲ್ಲಿವೆ. ಲಾಭಾಂಶವನ್ನು ಅವರೇ ಹಂಚಿಕೊಳ್ಳುತ್ತಿದ್ದಾರೆ. ಹಾಗಾಗಿ ಸಹಕಾರಿ ಕ್ಷೇತ್ರದ ಮೀಸಲಾತಿಗೆ ಜಿಟಿಡಿ ವಿರೋಧಿಸುತ್ತಿದ್ದಾರೆ ಎಂದು ವಿಶ್ವನಾಥ್ ಆರೋಪಿಸಿದರು.

ಶಿಕ್ಷಕರ ಕ್ಷೇತ್ರದ ಚುನಾವಣೆ ದಿಕ್ಸೂಚಿ: ಶಿಕ್ಷಕರ ಕ್ಷೇತ್ರದ ಚುನಾವಣಾ ಫಲಿತಾಂಶವು ಲೋಕಸಭಾ ಚುನಾವಣೆಯ ದಿಕ್ಸೂಚಿ. ಕಳೆದ ಲೋಕಸಭಾ ಚುನಾವಣೆಯಲ್ಲೂ ಜೆಡಿಎಸ್–ಕಾಂಗ್ರೆಸ್ ಮೈತ್ರಿಯನ್ನು ಜನರು ತಿರಸ್ಕರಿಸಿದ್ದರು. ಪರಿಣಾಮ ಬಿಜೆಪಿ ದೊಡ್ಡ ಮಟ್ಟದ ಗೆಲುವು ಸಾಧಿಸಿತ್ತು. ಅದೇ ರೀತಿ ಈ ಬಾರಿಯ ಜೆಡಿಎಸ್–ಬಿಜೆಪಿ ಮೈತ್ರಿ ಕೂಟಕ್ಕೆ ಲಾಭವಾಗುವುದಿಲ್ಲ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಶ್ರೀ ಚಾಮುಂಡೇರಿ ದೇವಸ್ಥಾನದ ವಾರ್ಷಿಕೋತ್ಸವ, ಪಲ್ಲಕ್ಕಿ ಉತ್ಸವ

ಮೈಸೂರು, ಫೆ. 23– ಮೈಸೂರಿನ ಹೆಬ್ಬಾಳಿನಲ್ಲಿರುವ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಶ್ರೀ ಚಾಮುಂಡೇಶ್ವರಿ ದೇವಸ್ಥಾನ 33ನೇ ವರ್ಷದ ವಾರ್ಷಿಕೋತ್ಸವ ಮತ್ತು ಪಲ್ಲಕ್ಕಿ ಉತ್ಸವ ಫೆ. 24 ಮತ್ತು 25 ರಂದು ಏರ್ಪಡಿಸಲಾಗಿದೆ. ಫೆ. 24 ರಂದು ಸಂಜೆ 6.30ಕ್ಕೆ ಕಳಸ ಸ್ಥಾಪನೆ, ಗಣಪತಿ ಪೂಜೆ, 7ಕ್ಕೆ ಸ್ವಸ್ತಿವಾಚನ, 8ಕ್ಕೆ ನವಗ್ರ ಪೂಜೆ, ರಾತ್ರಿ 8.30ಕ್ಕೆ ದುರ್ಗಾಪೂಜೆ, 9ಕ್ಕೆ ಗಣಪತಿ ನವಗ್ರಹ ಮಹಾಮೃತ್ಯುಂಜಯ, ದುರ್ಗಾಹೋಮ, ರಾತ್ರಿ 10ಕ್ಕೆ ಪೂರ್ಣಾಹುತಿ. ಫೆ. 25 ರಂದು ಬೆಳಗ್ಗೆ 6.30 ಗಂಟೆಗೆ ಅಮ್ಮನವರಿಗೆ ಕುಂಭಾಭಿಷೇಕ, 8.30ಕ್ಕೆ ಅಲಂಕಾರ ಪೂಜೆ, ಬೆಳಗ್ಗೆ 10.30ಕ್ಕೆ ಪಲ್ಲಕ್ಕಿ ಉತ್ಸವ, ಮ. 12.15ಕ್ಕೆ ರಾಶಿ ಪೂಜೆ ನಡೆಯಲಿದೆ. ಬೆಳಗ್ಗೆ 11.20 ರಿಂದ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ. ಮ. 12.30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಿನಲ್ಲಿ ಕಾವೇರಿ ಕ್ರಿಯಾ ಸಮಿತಿ ಮಾನವ ಸರಪಳಿ ರಚಿಸಿ ಪ್ರತಿಭಟನೆ



ತಮಿಳುನಾಡಿಗೆ ನೀರು ಬಿಡದಂತೆ ಬಜೆಟ್ ಅಧಿವೇಶನದಲ್ಲಿ ಸುಗ್ರಿವಾಜ್ಞೆ ತರುವಂತೆ ಆಗ್ರಹಿಸಿ ಕಾವೇರಿ ಕ್ರಿಯಾ ಸಮಿತಿಯವರು ಮೈಸೂರಿನ ಪುರಭವನದ ಬಳಿ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿದರು.

ಮೈಸೂರು, ಫೆ.23(ಬಿಎಲ್‌ಯು)– ತಮಿಳುನಾಡಿಗೆ 5 ಟಿಎಂಸಿ ನೀರು ಬಿಡುವುದರಿಂದ ಕಾನೂನು ರಕ್ಷಣೆ ಪಡೆಯಲು ಹಾಲಿ ಬಜೆಟ್ ಅಧಿವೇಶನದಲ್ಲಿ ಸುಗ್ರಿವಾಜ್ಞೆ ತರುವಂತೆ ಆಗ್ರಹಿಸಿ ಕಾವೇರಿ ಕ್ರಿಯಾ ಸಮಿತಿಯವರು ಮೈಸೂರಿನ ಪುರಭವನದ ಬಳಿ ಇಂದು ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿದರು.

ತಮಿಳುನಾಡಿಗೆ 5 ಟಿಎಂಸಿ ನೀರು ಬಿಡುಗಡೆ ಮಾಡುವಂತೆ ಕಾವೇರಿ ನೀರು ನಿರ್ವಹಣಾ ಸಮಿತಿ ಆದೇಶ ನೀಡಿದೆ. ಕಾವೇರಿ ಜಲಾಯನ ಪ್ರದೇಶದ ಅಣೆಕಟ್ಟೆಗಳಲ್ಲಿ ಕುಡಿಯಲು ಮಾತ್ರ ನೀರು ಇರುವ ಕಾರಣ ತಮಿಳುನಾಡಿಗೆ ನೀರು ಬಿಡುಗಡೆ ಸಾಧ್ಯವಿಲ್ಲ ಎಂದು ಪ್ರತಿಭಟನಾಕಾರರು ತಿಳಿಸಿದರು. ರಾಜ್ಯ ಸರ್ಕಾರ ಬಜೆಟ್ ಅಧಿವೇಶನದಲ್ಲಿ ಸುಗ್ರಿವಾಜ್ಞೆ ತಂದು 5 ಟಿಎಂಸಿ ನೀರು ಬಿಡುಗಡೆ ಮಾಡದಂತೆ ಕಾನೂನು ರಕ್ಷಣೆ ಪಡೆಯಬಹುದು. ಆದರೆ ಈ ಬಗ್ಗೆ ರಾಜ್ಯ ಸರ್ಕಾರ ಉದಾಸೀನ ಧೋರಣೆ ತಳೆದಿದೆ ಎಂದು ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್ ಆಕ್ರೋಶ ವ್ಯಕ್ತಪಡಿಸಿದರು. ಸಾಂಕೇತಿಕವಾಗಿ ನಡೆದ ಪ್ರತಿಭಟನೆಯಲ್ಲಿ 20 ನಿಮಿಷಗಳ ಕಾಲ ಮಾನವ ಸರಪಳಿ ರಚಿಸಿ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು. ಕನ್ನಡಾಂಬೆ ವೇದಿಕೆ ಅಧ್ಯಕ್ಷ ರಾಜಶೇಖರ್, ಕಾವೇರಿ ಕ್ರಿಯಾ ಸಮಿತಿ ಸದಸ್ಯರಾದ ಹೊನ್ನೇಗೌಡ, ಸೋಮೇಗೌಡ, ರಾಮು, ಪುಷ್ಪ, ಮಂಜುಳ, ಭಾಗ್ಯ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಇಂದು ಭೈರವಿ ಗೌಡ್ತಿಯರ ಬಳಗದ ವಾರ್ಷಿಕೋತ್ಸವ ಸಮಾರಂಭ, ಸಾಧಕರಿಗೆ ಸನ್ಮಾನ

ಮೈಸೂರು, ಫೆ.23–ಭೈರವಿ ಗೌಡ್ತಿಯರ ಬಳಗದ ವಾರ್ಷಿಕೋತ್ಸವ ಸಮಾರಂಭವನ್ನು ಹೆಬ್ಬಾಳ್‌ನಲ್ಲಿರುವ ಲಕ್ಷ್ಮಿಕಾಂತ್ ದೇವಸ್ಥಾನದಲ್ಲಿ ನಾಳೆ ಶನಿವಾರ ಬೆಳಗ್ಗೆ 10:30 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಇದೇ ಸಂದರ್ಭದಲ್ಲಿ ಮೈಸೂರು ವಿಶ್ವ ವಿದ್ಯಾಲಯದ ಕುಲಸಚಿವರದ ಶೈಲಜಾ, ಸೂಪರಿಂಟೆಂಡೆಂಟ್ ಆಫ್ ಸೆಂಟ್ರಲ್ ಟ್ಯಾಕ್ಸ್ ಲಕ್ಷ್ಮಿ ಪಿ.ಗೌಡ, ರಾಜ್ಯಮಟ್ಟದ ಕ್ರೀಡಾಪಟು ಅನುಸೂಯ ವಿಜಯ ರಾಮೇಗೌಡ, ಗ್ಯಾಲಕ್ಸಿ ಮೆಂಬರ್ ಎಲ್‌ಐಸಿ ಆಫ್ ಇಂಡಿಯಾ ಶೋಭಾ ಮಂಜುನಾಥ್, ಅಂತರ ರಾಷ್ಟ್ರೀಯ ಯೋಗಪಟು ಕುಮಾರಿ ಖುಷಿರವರಿಗೆ ಸನ್ಮಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಭೈರವಿ ಗೌಡ್ತಿಯರ ಬಳಗದ ನಿರ್ದೇಶಕರಾದ ಹೇಮಾ ನಂದೀಶ್ ತಿಳಿಸಿದ್ದಾರೆ

ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವನ್ನು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರು ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ ಹಾಗೂ ಆದಿಚುಂಚನಗಿರಿ ಶಾಖ ಮಠದ ಶ್ರೀ ಶ್ರೀ ಸೋಮೇಶ್ವರನಾಥ ಮಹಾಸ್ವಾಮೀಜಿರವರು ನೆರವೇರಿಸಲಿದ್ದಾರೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿಕಟ ಪೂರ್ವ ನಗರಪಾಲಿಕಾ ಸದಸ್ಯರಾದ ಪ್ರೇಮಾ ಶಂಕರೇಗೌಡ , ಮುಖ್ಯ ಅತಿಥಿಗಳಾಗಿ ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿ ಶಿಲ್ಪಾನಾಗ್, ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಲಲಿತಾ ಜಿ.ಟಿ.ದೇವೇಗೌಡ, ಖ್ಯಾತ ವೈದ್ಯರಾದ ಡಾಕ್ಟರ್ ಅರ್ಪಿತ ಪ್ರತಾಪ್ ಸಿಂಹ, ಖ್ಯಾತ ಹಿನ್ನೆಲೆ ಗಾಯಕರು ಹಾಗೂ ಸಮಾಜ ಸೇವಕರಾದ ಅನಿತಾ ಸಾರ ಮಹೇಶ್, ಗೌರಿಹರೀಶ್ ಗೌಡ, ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ.

'ಮಾಧ್ಯಮ ರತ್ನ' ಪ್ರಶಸ್ತಿ ಪ್ರದಾನ

ಮೈಸೂರು, ಫೆ. 23– ಭೂಮಿಗಿರಿ ಪ್ರಕಾಶನ ಹಾಗೂ ಗಾನ ನಂದನ ಸಂಯುಕ್ತ ಆಶ್ರಯದಲ್ಲಿ ಫೆಬ್ರವರಿ 25ರ ಭಾನುವಾರ ಸಂಜೆ 4:30ಕ್ಕೆ ವಿಜಯನಗರದ ಒಂದನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಸಾಧಕ ಪತ್ರಕರ್ತರಿಗೆ ಮಾಧ್ಯಮ ರತ್ನ ಪ್ರಶಸ್ತಿ ಪ್ರಧಾನ ಹಾಗೂ ಗಾನ ನಂದನದ ಸವಿಗಾನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಚಿಂತಕರಾದ ಪ್ರೊ.ನಾಗಣ್ಣ ಕಾರ್ಯಕ್ರಮವನ್ನು ಉದ್ಘಾಟಿಸುವರು. ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸುವರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಪ್ರಶಸ್ತಿ ಪುರಸ್ಕೃತವನ್ನು ಅಭಿನಂದಿಸುವರು. ಮುಖ್ಯ ಅತಿಥಿಗಳಾಗಿ ಸಹಾಯಕ ಪ್ರಾಧ್ಯಾಪಕಿ ಡಾ. ಪಿ.ಕೆ. ಉಷಾ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ. ವೈ ಡಿ ರಾಜಣ್ಣ, ಭೂಮಿಗಿರಿ ಪ್ರಕಾಶನ ಹಾಗೂ ಗಾನ –ನಂದನ ಅಧ್ಯಕ್ಷ ಎನ್ ಬೆಟ್ಟೆಗೌಡ ಹಾಗೂ ಮಾಜಿ ಸಿಂಡಿಕೇಟ್ ಸದಸ್ಯ ಡಾ. ಈ.ಸಿ. ನಿಂಗರಾಜ್ ಗೌಡ ಭಾಗವಹಿಸುವರು. ಕನ್ನಡ ಪ್ರಭ ಛಾಯಾಗ್ರಾಹಕ ಅನುರಾಗ ಬಸವರಾಜ್, 'ಮೈಸೂರು ಮಿತ್ರ' ಪತ್ರಿಕಾ ಛಾಯಾಗ್ರಾಹಕ ಲಕ್ಷ್ಮೀನಾರಾಯಣ ಯಾದವ್, ವಿಜಯ ಕರ್ನಾಟಕದ ಸ್ಥಾನಿಕ ಸಂಪಾದಕ ರಮೇಶ್ ಉತ್ತಪ್ಪ, ಪ್ರಜಾವಾಣಿಯ ಹಿರಿಯ ವರದಿಗಾರ ಮಹೇಶ್ ಭಗೀರಥ, ಪಬ್ಲಿಕ್ ಟಿವಿ ಮೈಸೂರು ವರದಿಗಾರ ಕೆ.ಪಿ.ನಾಗರಾಜ್ ಹಾಗೂ ಪತ್ರಿಕೋದ್ಯಮ ವಿದ್ಯಾರ್ಥಿ ಎಚ್.ಪಿ. ಶಾಮಪ್ರಸಾದ್ ಅವರಿಗೆ "ಮಾಧ್ಯಮ ರತ್ನ" ಪ್ರಶಸ್ತಿ ನೀಡಲಾಗುವುದು. ನಂತರ ಕನ್ನಡ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮದಲ್ಲಿ ಡಾ. ವೈ.ಡಿ.ರಾಜಣ್ಣ, ಎನ್. ಬೆಟ್ಟೇಗೌಡ, ಡಾ. ದೇವಿಆನಂದ್ ಡಾ. ಎ.ಎಸ್.ಪೂರ್ಣಿಮಾ, ಶ್ರೀಲತಾ ಮನೋಹರ್, ಸಿ. ಎಸ್.ವಾಣಿ ಅವರು ಗಾಯನ ಪ್ರಸ್ತುತಪಡಿಸುವರು.

ಕಂಪ್ಯೂಟರ್ ಕಲಿಕಾ ಕಾರ್ಯಾಗಾರ

ಮೈಸೂರು,ಫೆ.23–ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಮೈಸೂರು ಶಾಖೆಯು ವಿದ್ಯಾರ್ಥಿಗಳಿಗೆ, ಪೋಷಕರಿಗೆ, ಮಹಿಳೆಯರಿಗೆ ಹಾಗೂ ಹಿರಿಯ ನಾಗರಿಕರಿಗಾಗಿ 30 ದಿನಗಳ ಕಂಪ್ಯೂಟರ್ ಕಲಿಕಾ ಕಾರ್ಯಾಗಾರ ಆಯೋಜಿಸಿದೆ. ಕಾರ್ಯಾಗಾರದಲ್ಲಿ ಕಂಪ್ಯೂಟರ್ ಫಂಡಮೆಂಟಲ್ಸ್, ಡೇಟಾ ಎಂಟ್ರಿ, ಟ್ಯಾಲಿ, ಕನ್ನಡ ನುಡಿ, ಸಿ, ಸಿ++, ಜಾವ ಪೈಥಾನ್ ಮುಂತಾದ ವಿಷಯಗಳನ್ನು ಪ್ರಾಯೋಗಿಕ ವಾಗಿ ನುರಿತ ತರಬೇತುದಾರರಿಂದ ಕಲಿಸಲಾಗುತ್ತದೆ. ಮಾರ್ಚ್ ಹಾಗೂ ಏಪ್ರಿಲ್ ತಿಂಗಳಿನಲ್ಲಿ ಎರಡು ಹಂತಗಳಲ್ಲಿ ತರಬೇತಿ ಶಿಬಿರ ನಡೆಯಲಿದ್ದು ಪ್ರವೇಶಾತಿ ಮುಂತಾದ ಮಾಹಿತಿಗಾಗಿ 8310306882 ಅಥವಾ 9964790442 ಅನ್ನು ಸಂಪರ್ಕಿಸಬಹುದು.

ವಿಧಾನ ಪರಿಷತ್‌ನಲ್ಲಿ ಮೈಸೂರು–ಅಯೋಧ್ಯೆ ಧಾಮ ರೈಲಿಗೆ ಬೆಂಕಿ ಹಾಕುವ ಬೆದರಿಕೆ ಪ್ರತಿಧ್ವನಿ

ಬೆಂಗಳೂರು, ಫೆ.23(ಕೆಎಂಶಿ)– ಮೈಸೂರು–ಅಯೋಧ್ಯೆ ಧಾಮ ರೈಲು ಸುಟ್ಟು ಹಾಕುವುದಾಗಿ ಬೆದರಿಸಿದ ಪ್ರಕರಣ ವಿಧಾನ ಪರಿಷತ್‌ನಲ್ಲಿಂದು ಪ್ರತಿಧ್ವನಿಸಿತು.

ಪರಿಷತ್ ಕಲಾಪ ಆರಂಭವಾಗುತ್ತಿದ್ದಂತೆ ಸಭಾಧ್ಯಕ್ಷ ಬಸವರಾಜ ಹೊರಟ್ಟಿ ಪ್ರಶ್ನೋತ್ತರ ಕಲಾಪ ಪ್ರಾರಂಭಿಸಲು ಮುಂದಾದರು. ಆಗ ಪ್ರತಿಪಕ್ಷದ ನಾಯಕ ಕೋಟಾ ಶ್ರೀನಿವಾಸ್ ಪೂಜಾರಿ ಈ ವಿಷಯ ಪ್ರಸ್ತಾಪಿಸಿದರು. ಹೊಸಪೇಟೆ ಬಳಿ ಅಯೋಧ್ಯೆ ರೈಲಿಗೆ ನುಗ್ಗಿದ ದುಷ್ಕರ್ಮಿಗಳು ರಾಮ ಭಕ್ತರಿಗೆ ಧಮಕಿ ಹಾಕಿದ್ದಾರೆ, ರೈಲಿಗೆ ಬೆಂಕಿ ಹಾಕುವುದಾಗಿ ಬೆದರಿಸಿದ್ದಾರೆ, ಈ ಕುರಿತು ಸರ್ಕಾರದಿಂದ ಈವರೆಗೆ ಯಾವುದೇ ಉತ್ತರ ಬಂದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ಗೋಧ್ರಾ ಹತ್ಯಾಕಾಂಡ ಬಗ್ಗೆ ಮಾತನಾಡಿದ್ದರು. ಈಗ ಈ ಘಟನೆ ನಡೆದಿದೆ, ಆರೋಪಿಗಳನ್ನು ಬಂಧಿಸಿದ್ದ ಪೊಲೀಸರು ಮತ್ತೆ ಬಿಟ್ಟು ಕಳುಹಿಸಿದ್ದಾರೆ ಎಂದು ಕಿಡಿಕಾರಿದರು. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಾತನಾಡಿ, ಕಲಾಪಕ್ಕೆ ನಿಯಮ ಇದೆ, ಯಾವ ನಿಯಮದಲ್ಲಿ ಪ್ರಶ್ನಿಸಬೇಕು ಎಂಬುದು ಗೊತ್ತಿಲ್ಲವೇ ಎಂದರು. ಈ ವೇಳೆ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ವಾಕ್ಸಮರ ನಡೆಯಿತು, ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶ ಕೊಡುವುದಾಗಿ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ ನಂತರ ಗದ್ದಲಕ್ಕೆ ತೆರೆ ಬಿದ್ದಿತು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಫೆ. 23– ಮೈಸೂರಿನ ಅನ್ನಪೂರ್ಣ ಕಣ್ಣಿನ ಆಸ್ಪತ್ತೆ ಮತ್ತು ಕ್ಲಿಯರ್ ಮೆಡಿ ರೇಡಿಯೆಂಟ್ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಫೆ. 25 ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 1 ರವರೆಗೆ ಹೂಟಗಳ್ಳಿ ಹೌಸಿಂಗ್ ಬೋರ್ಡ್ ಕಾಲೋನಿಯ ಸುದರ್ಶನ ವಿದ್ಯಾಸಂಸ್ಥೆ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮುಂದುವರೆದ ಅಹೋರಾತ್ರಿ ತೆರಿಗೆ ಹೋರಾಟ

ಮೈಸೂರು,ಫೆ.23(ಪಿಎಂ)– ಒಕ್ಕೂಟ ವ್ಯವಸ್ಥೆಯ ಭಾಗವಾಗಿದ್ದರೂ ಕರ್ನಾಟಕದಿಂದ ಭಾರತ ಸರ್ಕಾರಕ್ಕೆ ಪಾವತಿಸುವ ನಮ್ಮದೇ ತೆರಿಗೆಯಲ್ಲಿ ನಮ್ಮ ಪಾಲನ್ನು ನೀಡದೇ ಅನ್ಯಾಯ ಮಾಡಲಾಗುತ್ತಿದೆ ಎಂದು ಖಂಡಿಸಿ ಕರ್ನಾಟಕ ಜನರಂಗ ನೇತೃತ್ವದಲ್ಲಿ ವಿವಿಧ ಸಂಘಟನೆಗಳು ನಡೆಸುತ್ತಿರುವ 48 ಗಂಟೆಗಳ ಅಹೋರಾತ್ರಿ ಧರಣಿ–ಸತ್ಯಾಗ್ರಹ ಗುರುವಾರವೂ ಮುಂದುವರೆಯಿತು. ಕೇಂದ್ರ ಸರ್ಕಾರ ಪಂಚೇಂದ್ರೀಯಗಳನ್ನು ಕಳೆದುಕೊಂಡಂತೆ ನಿರ್ದಯಿಯಾಗಿ ವರ್ತಿಸುತ್ತಿದೆ. ಕರ್ನಾಟಕದಿಂದ ಆಯ್ಕೆಯಾದ ಬಿಜೆಪಿಯ 25 ಸಂಸದರು ತುಟಿ ಬಿಚ್ಚದೇ ಮೌನಕ್ಕೆ ಶರಣರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. 'ನಮ್ಮ ತೆರಿಗೆಯ ಹಣವನ್ನು ಹಿಂದಿರುಗಿಸಿ', 'ನಮ್ಮ ತೆರಿಗೆ ನಮ್ಮ ಹಕ್ಕು' ಎಂಬಿತ್ಯಾದಿ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬುಧವಾರ ಬೆಳಗ್ಗೆ 10ಕ್ಕೆ ಹೋರಾಟ ಆರಂಭಗೊಂಡಿದ್ದು, ಶುಕ್ರವಾರ ಬೆಳಗ್ಗೆ 10ರವರೆಗೆ ನಡೆಯಲಿದೆ. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಮುಖಂಡ ಬೆಲವತ್ತ ಶಿವಕುಮಾರ್ ಪಾಲ್ಗೊಂಡಿದ್ದಾರೆ.

ಅನುದಾನ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರಿನ ಗಾಂಧಿನಗರದ ಅಭಿವೃದ್ಧಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಿಟ್ಟ ಅನುದಾನ ನೀಡುವಂತೆ ಆಗ್ರಹಿಸಿ ಡಾ.ಬಿ.ಆರ್. ಅಂಬೇಡ್ಕರ್ ಗಾಂಧಿನಗರ ನಾಗರಿಕರ ಸಮಿತಿಯವರು ಮೈಸೂರು ನಗರ ಪಾಲಿಕೆ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಫೆ.23(ಬಿಎಲ್‌ಯು)– ಮೈಸೂರಿನ ಗಾಂಧಿನಗರದ ಅಭಿವೃದ್ಧಿಗೆ ಅನುದಾನ ನೀಡದೆ ಅನ್ಯಾಯ ಮಾಡುತ್ತಿರುವ ಮೈಸೂರು ನಗರ ಪಾಲಿಕೆ ವಿರುದ್ಧ ಡಾ.ಬಿ.ಆರ್.ಅಂಬೇಡ್ಕರ್ ಗಾಂಧಿನಗರ ನಾಗರಿಕರ ಸಮಿತಿಯವರು ನಗರ ಪಾಲಿಕೆ ಮುಂದೆ ಇಂದು ಪ್ರತಿಭಟನೆ ನಡೆಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಿಟ್ಟಿರುವ 2023–24 ನೇ ಸಾಲಿನ ಶೇಕಡ 24.10 ಅನುದಾನವನ್ನು ನೀಡದಿರುವ ನಗರ ಪಾಲಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ತಮ್ಮ ಬೇಡಿಕೆಗಳನ್ನು ಕೂಡಲೇ ಈಡೇರಿಸುವಂತೆ ನಗರ ಪಾಲಿಕೆ ಆಯುಕ್ತರ ಆಪ್ತ ಕಾರ್ಯದರ್ಶಿ ಸುರೇಶ್ ಅವರಿಗೆ ಪ್ರತಿಭಟನಾಕಾರರು ಮನವಿ ಸಲ್ಲಿಸಿದರು. ಸಮಿತಿ ಅಧ್ಯಕ್ಷ ಶರತ್, ಸತೀಶ್, ರವಿ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಶಿಕ್ಷಣ ಇಲಾಖೆ ಅಷ್ಟ ಸೂತ್ರ



ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಹೆಚ್.ಕೆ.ಪಾಂಡು ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಿರುವುದು

ಮೈಸೂರು, ಫೆ.23(ಜಿಎ)–ಮೈಸೂರು ಜಿಲ್ಲೆಯನ್ನು ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಈ ಬಾರಿ 5ನೇ ಸ್ಥಾನಕ್ಕೆ ತರಲು ಸಾರ್ವಜನಿಕ ಶಿಕ್ಷಣ ಇಲಾಖೆ ಕ್ರಮ ಕೈಗೊಂಡಿದ್ದು, ಫಲಿತಾಂಶ ಸುಧಾರಣೆಗೆ ಅಷ್ಟ ಸೂತ್ರಗಳನ್ನು ಅಳವಡಿಸಿಕೊಂಡಿದೆ.

ರಾಜ್ಯ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಂಡಳಿ(ಕೆಎಸ್‌ಇಇಬಿ) ವೇಳಾಪಟ್ಟಿ ಬಿಡುಗಡೆ ಮಾಡಿದ್ದು, 2024ರ ಮಾರ್ಚ್ 25ರಿಂದ ಏಪ್ರಿಲ್ 6ರವರೆಗೆ ಪರೀಕ್ಷೆ ನಿಗದಿಯಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯನ್ನು ಉತ್ತಮ ಸ್ಥಾನಕ್ಕೆ ಕೊಂಡೊಯ್ಯುವಲ್ಲಿ ಇಲಾಖೆ ಶ್ರಮಿಸುತ್ತಿದೆ.

ಮೈಸೂರು ಜಿಲ್ಲೆ ಕಳೆದ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.89.75 ರಷ್ಟು ಫಲಿತಾಂಶ ಪಡೆದು ರಾಜ್ಯದಲ್ಲಿ 16ನೇ ಸ್ಥಾನದಲ್ಲಿ ಗುರುತಿಸಿಕೊಂಡಿದ್ದ ಜಿಲ್ಲೆ, ಈ ಬಾರಿ ಫಲಿತಾಂಶ ಸುಧಾರಣೆಗೆ ನಿರ್ದಿಷ್ಟ ಗುರಿ ಆಧಾರಿತ ಯೋಜನೆಯನ್ನು ರೂಪಿಸಿದ್ದು, ಜಿಲ್ಲೆಯನ್ನು 5ನೇ ಸ್ಥಾನಕ್ಕೆ ಕರೆದೊಯ್ಯಲು ಪಣತೊಟ್ಟಿದೆ.

'ಈ ಬಾರಿ ಮೈಸೂರಿನ ಎಲ್ಲಾ ತಾಲೂಕುಗಳಿಂದ 40,333 ಮಕ್ಕಳು ಪರೀಕ್ಷೆಗೆ ಹಾಜರಾಗುತ್ತಿದ್ದು, ಅವರಲ್ಲಿ ಕಲಿಕೆಯಲ್ಲಿ ಹಿಂದುಳಿದ 5,198 ಮಕ್ಕಳನ್ನು ಗುರುತಿಸಿ ತರಬೇತಿ ನೀಡುತ್ತಿದ್ದೇವೆ. ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ಕಡಿಮೆ ಫಲಿತಾಂಶ ಬಂದ ಶಾಲೆಗಳ ಮುಖ್ಯ ಶಿಕ್ಷಕರಿಗೆ ಹಾಗೂ ವಿಷಯ ಶಿಕ್ಷಕರ ಸಭೆ ನಡೆಸಿ, ಫಲಿತಾಂಶ ಸುಧಾರಣೆ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತಿದೆ' ಎಂದು ಡಿಡಿಪಿಐ ಎಚ್.ಕೆ.ಪಾಂಡು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈ ಸಂಬಂಧ ತಾಲೂಕು ಮಟ್ಟದಲ್ಲಿ ಒಂದು ಸಂಪನ್ಮೂಲ ತಂಡವನ್ನು ರಚನೆ ಮಾಡಿಕೊಳ್ಳಲಾಗಿದೆ. ಆ ತಂಡದಲ್ಲಿ ಕನ್ನಡ, ಗಣಿತ, ಇಂಗ್ಲಿಷ್, ಹಿಂದಿ, ಸಮಾಜ ವಿಜ್ಞಾನ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದಂತೆ ಆರು ಮಂದಿ ಪರಿಣಿತರು ಇದ್ದಾರೆ. ಅವರು ಯಾವ ಶಾಲೆಯಲ್ಲಿ ಕಲಿಕೆ ಕುಂಠಿತವಾಗಿ ಶಿಕ್ಷಕರಿಗೆ ಅನುಮಾನವಿದೆ ಆ ಶಾಲೆಗೆ ತಂಡ ಭೇಟಿ ನೀಡಿ ಫಲಿತಾಂಶ ಉತ್ತಮಗೊಳಿಸಲು ಮುಂದಾಗಿದ್ದಾರೆ ಎಂದರು. 40,333 ಮಕ್ಕಳಲ್ಲಿ ವಿವಿಧ ಭಾಗಗಳಾಗಿ ವಿಂಗಡಿಸಿಕೊಂಡಿದ್ದು, ಅದರಲ್ಲಿ ಈ ಬಾರಿ ಮಕ್ಕಳು ಅತ್ಯುತ್ತಮ ಶ್ರೇಣಿಯಲ್ಲಿ 1,893, ಫಸ್ಟ್ ಕ್ಲಾಸ್ 26 ಸಾವಿರ, 8 ಸಾವಿರ ಸೆಕೆಂಡ್ ಕ್ಲಾಸ್, 5,393 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಮತ್ತು ಫೇಲ್ ಆಗುವ ಅಂತದಲ್ಲಿ 5,198 ವಿದ್ಯಾರ್ಥಿಗಳಿದ್ದು, ಇಂತಹ ವಿದ್ಯಾರ್ಥಿಗಳ ಮೇಲೆ ಬಿಇಓಗಳು ಮೇಲೆ ನಿಗವಹಿಸಿದ್ದು, ಅವರು ಎಷ್ಟು ಅಂಕದಲ್ಲಿ ಪಾಸ್ ಆಗುತ್ತಾರೆ ಎಂಬುದನ್ನು ನೋಡುತ್ತಿದ್ದಾರೆ. ಅದನ್ನು ತಿಳಿದುಕೊಂಡು ಅವರು ಪಾಸ್ ಆಗುವಂತೆ ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ವಿವರಿಸಿದರು. ಈಗಾಗಲೇ ಸಂಪನ್ಮೂಲ ಶಿಕ್ಷಕರೇ ಮಾದರಿ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಿದ್ದಾರೆ. ಅದನ್ನು ವಿದ್ಯಾರ್ಥಿಗಳಿಗೆ ನೀಡಲಾಗಿದೆ ಎಂತಹದೇ ಪ್ರಶ್ನೆಪತ್ರಿಕೆ ಸಿದ್ಧವಾಗಿ ಬಂದರೂ ಯಾವುದೇ ಪರಿಸ್ಥಿತಿಯಲ್ಲಿಯೂ ವಿದ್ಯಾರ್ಥಿಯೂ 40 ಅಂಕ ಗಳಿಸಲು ಸಾಧ್ಯವಾಗುವಂತೆ ಪ್ರಶ್ನೆ ಮತ್ತು ಉತ್ತರಗಳ ಗುಚ್ಛವನ್ನು ರಚಿಸಲಾಗಿದೆ. ಮತ್ತೊಂದು ಹಂತವಾಗಿ ಪರೀಕ್ಷೆಯಲ್ಲಿ ಫೇಲ್ ಆಗುವ ಹಂತದಲ್ಲಿರುವ ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ಅವರ ಪೋಷಕರಿಗೆ ತಮ್ಮ ಮಕ್ಕಳ ಬಗ್ಗೆ ತಿಳಿಸಲಾಗಿದ್ದು, ಅವರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತಿದ್ದು, ದೂರದಿಂದ ಸಂಚರಿಸುತ್ತಿರುವ ವಿದ್ಯಾರ್ಥಿಗಳಿಗೆ ಹಾಸ್ಟಲ್‌ನಲ್ಲಿ ಉಳಿದ್ದುಕೊಂಡು ಅಭ್ಯಾಸ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಇದ್ದರಿಂದ ಹಾಸ್ಟಲ್ ವಿದ್ಯಾರ್ಥಿಗಳಿಗೂ ಸಾಕಷ್ಟು ಅನುಕೂಲವಾಗಿದೆ ಎಂದರು.

> "ಈಗಾಗಲೇ ಎಲ್ಲಾ ತಾಲೂಕುಗಳ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮುಖ್ಯ ಶಿಕ್ಷಕರೊಂದಿಗೆ ಜೂಮ್ ಸಭೆ ಮಾಡಿ ಎಲ್ಲಾ ಶಾಲೆಗಳ ಬಗ್ಗೆ ಎರಡು ಗಂಟೆ ಚರ್ಚಿಸಲಾಗುತ್ತಿದೆ. ಹಾಗೇ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬಲು ಎಲ್ಲಾ ತಾಲೂಕಿನಲ್ಲಿ ವಿವಿಧ ಕ್ಷೇತ್ರದ ವ್ಯಕ್ತಿಗಳನ್ನು ಕರೆಸಿ ಪ್ರೇರಣಾ ಕಾರ್ಯಕ್ರಮ ನಡೆಸಲಾಗುತ್ತಿದೆ.
> –ಹೆಚ್.ಕೆ.ಪಾಂಡು ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ

ತಿ.ನರಸೀಪುರ ಟಿಎಪಿಸಿಎಂಎಸ್ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ, ಉಪಾಧ್ಯಕ್ಷರಾಗಿ ಮಲ್ಲಣ್ಣ ಆಯ್ಕೆ

ತಿ.ನರಸೀಪುರ, ಫೆ.23– ತಾಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘದ ಚುನಾವಣೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡರ ನೇತೃತ್ವದಲ್ಲಿ ಅಭೂತಪೂರ್ವ ಜಯ ಗಳಿಸಿದ್ದ ಟಿ.ಪಿ.ಸುಬ್ರಹ್ಮಣ್ಯ ಬಣ ಟಿಎಪಿಸಿಎಂಎಸ್ ಆಡಳಿತವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದ್ದು, ಶುಕ್ರವಾರ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಟಿ.ಪಿ.ಸುಬ್ರಹ್ಮಣ್ಯ, ಉಪಾಧ್ಯಕ್ಷರಾಗಿ ಡಣಾಯಕನಪುರ ಮಲ್ಲಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಟಿಎಪಿಸಿಎಂಎಸ್ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಟಿ.ಪಿ.ಸುಬ್ರಹ್ಮಣ್ಯ, ಉಪಾಧ್ಯಕ್ಷ ಸ್ಥಾನಕ್ಕೆ ಮಲ್ಲಣ್ಣ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹೆಚ್.ಕೆ.ಸತೀಶ್ ಘೋಷಿಸಿದರು.

ನಿರ್ದೇಶಕರಾದ ಟಿ.ವಾಸುದೇವ್, ಬಿ.ಎಸ್.ಮಹೇಶ್, ಡಿ.ಕೋಮಲ, ಮೂಗೂರು ಜಯಣ್ಣ ಎಂ.ಕೆ.ಮಹೇಶ್, ಎಸ್.ನಿರ್ಮಲ, ಕೆ.ಎಂ.ಸುನೀಲ್, ವೈ.ಎನ್.ರಾಮಸ್ವಾಮಿ ಹಾಗೂ ಎಂ.ಎಸ್.ಬಸವರಾಜು ಚುನಾವಣೆಯಲ್ಲಿ ಭಾಗಿಯಾಗಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ನೂತನ ಅಧ್ಯಕ್ಷ–ಉಪಾಧ್ಯಕ್ಷರ ಅವಿರೋಧ ಆಯ್ಕೆಯಾಗುತ್ತಿದ್ದಂತೆಯೇ ಸಂಘದ ಆವರಣದಲ್ಲಿ ನೆರೆದಿದ್ದ ನೂರಾರು ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಇತ್ತೀಚೆಗೆ ನಡೆದ ನಿರ್ದೇಶಕರ ಚುನಾವಣೆಯಲ್ಲಿ ಟಿ.ಪಿ.ಸುಬ್ರಹ್ಮಣ್ಯ ಹಾಗೂ ವೈ.ಎನ್.ಶಂಕರೇಗೌಡ ಬಣಗಳ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಕಳೆದ 20 ವರ್ಷಗಳಿಂದ ಟಿ.ಪಿ.ಸುಬ್ರಹ್ಮಣ್ಯ ತೆಕ್ಕೆಯಲ್ಲಿದ್ದ ಟಿಎಪಿಸಿಎಂಎಸ್ ಆಡಳಿತ ವಶಕ್ಕೆ ಪಡೆಯಲು ಶಂಕರೇಗೌಡರು ಇನ್ನಿಲ್ಲದ ಸಾಹಸ ಮಾಡಿದರಾದರೂ ಚುನಾವಣೆಯಲ್ಲಿ ತಮ್ಮ ಬಣದಿಂದ ಅವರೊಬ್ಬರೇ ಜಯ ಗಳಿಸಿದ್ದರು. ಇತ್ತ ಟಿ.ಪಿ.ಸುಬ್ರಹ್ಮಣ್ಯ ಬಣದ 11 ಮಂದಿ ಸದಸ್ಯರು ಭರ್ಜರಿ ಗೆಲುವು ದಾಖಲಿಸಿದ್ದರು.

ನೂತನ ಉಪಾಧ್ಯಕ್ಷ ಮಲ್ಲಣ್ಣ ಮಾತನಾಡಿ, ಇತ್ತೀಚೆಗೆ ನಡೆದ ಸಂಘದ ಚುನಾವಣೆಯಲ್ಲಿ ರೈತರು, ಸಾಮಾನ್ಯ ವರ್ಗದವರು, ಸಹಕಾರಿ ಬಂಧುಗಳು ನಮ್ಮ ನಡವಳಿಕೆ, ಪ್ರಾಮಾಣಿಕ ಆಡಳಿತ ಮೆಚ್ಚಿ ನಮಗೆ ಗೆಲುವು ನೀಡಿದ್ದರು. ಅವರ ಆಶಯಕ್ಕೆ ಮನ್ನಣೆ ನೀಡಿ ಸಹಕಾರ ಸಂಘದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದೇ ಅಧಿಕಾರ ನಡೆಸುತ್ತೇವೆ. ಕೋ–ಆಪರೇಟಿವ್ ಸಹಕಾರ ಸಂಘದಲ್ಲಿ ರಾಜಕೀಯ ಪ್ರವೇಶ ಮಾಡುವಂತಿಲ್ಲ. ಆದರೆ ಕೆಲವರು ಇಲ್ಲಿಗೂ ರಾಜಕೀಯ ತಂದು ಇಲ್ಲ ಸಲ್ಲದ ಕಿತಾಪತಿ ಮಾಡಿ 20 ವರ್ಷಗಳಿಂದ ಉತ್ತಮ ಆಡಳಿತ ನಡೆಸುತ್ತಾ ಬಂದಿರುವ ಅಧ್ಯಕ್ಷರ ಮೇಲೆ ಗೂಬೆ ಕೂರಿಸಲು ಪ್ರಯತ್ನ ಪಟ್ಟರು. ಜನ ಯಾವುದಕ್ಕೂ ಮನ್ನಣೆ ನೀಡದೇ ನಮಗೆ ಜಯ ನೀಡಿದ್ದಾರೆ. ಜನತೆ ನೀಡಿರುವ ಅಧಿಕಾರದಿಂದ ಸಂಘವನ್ನು ಮಾದರಿಯನ್ನಾಗಿಸಲು ಶ್ರಮಿಸುತ್ತೇವೆ.



ತಿ.ನರಸೀಪುರ ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಟಿ.ಪಿ.ಸುಬ್ರಹ್ಮಣ್ಯ ಉಪಾಧ್ಯಕ್ಷರಾಗಿ ಮಲ್ಲಣ್ಣ ಅವಿರೋಧವಾಗಿ ಆಯ್ಕೆಯಾದರು.

> ನಮ್ಮ ಮೇಲೆ ನಂಬಿಕೆ ಇಟ್ಟು ಗೆಲುವು ನೀಡಿದ ತಾಲೂಕಿನ ಜನತೆ ಕೃತಜ್ಞರಾಗಿರುತ್ತೇನೆ. ಸಂಘದಲ್ಲಿ ಯಾವುದೇ ದುರುಪಯೋಗ ನಡೆಯದಂತೆ ಉತ್ತಮ ಆಡಳಿತ ನೀಡುತ್ತೇನೆ.
> - ಟಿ.ಪಿ.ಸುಬ್ರಹ್ಮಣ್ಯ, ಟಿಎಪಿಸಿಎಂಎಸ್ ಅಧ್ಯಕ್ಷ.

ಸಂಘದ ಆಸ್ತಿ ಉಳಿಸಿಕೊಂಡು ಉತ್ತಮ ಸೇವಣೆಯೊಂದಿಗೆ ಸಂಘ ಮುನ್ನಡೆಸುತ್ತಾ ಬಂದಿದ್ದೇವೆ. ಮುಂದೆ ಹಂತ ಹಂತವಾಗಿ ಸಂಘವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ನೂತನ ಆಡಳಿತ ಮಂಡಳಿ ಯೋಜನಾಬದ್ಧವಾಗಿ ಕೆಲಸ ಮಾಡಲಿದೆ ಎಂದರು.

ಇದೇ ವೇಳೆ ಬಿಜೆಪಿ ಮುಖಂಡ ಡಾ.ರೇವಣ್ಣ ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಅಭಿನಂದಿಸಿದರು. ಸಹಕಾರ ಸಂಘದ ಕಾರ್ಯದರ್ಶಿ ರಘುನಂದನ್, ಪುರಸಭಾ ಸದಸ್ಯ ಕಿರಣ್, ಕಸಬಾ ಪಿಎಸಿಎಸ್ ನಿರ್ದೇಶಕ ಟಿ.ಸಿ.ಫಣೀಶ್ ಕುಮಾರ್, ತಾಪಂ ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಮಾಜಿ ಸದಸ್ಯ ಚಂದ್ರಶೇಖರ್, ಡೈರಿ ಗುರುಮೂರ್ತಿ, ಹೆಳವರಹುಂಡಿ ಮೂರ್ತಿ, ನಾಗೇಶ್, ಅಂಗಡಿ ಶೇಖರ್, ಫ್ಯಾನ್ಸಿ ಮೋಹನ್, ಬೆನಕನಹಳ್ಳಿ ವಿಜಯಕುಮಾರ್, ತಿರುಮಕೂಡಲು ಲಕ್ಷ್ಮಣ, ಕಾರ್ ಮಲ್ಲಪ್ಪ, ರಾಜೇಶ್, ಶಿವಪ್ರಸಾದ್, ಆಡಿಟರ್ ಮಂಜುನಾಥ್, ಡಿಕೆಶಿ ಅಭಿಮಾನಿ ಬಳಗದ ಅಧ್ಯಕ್ಷ ಚೇತು, ಬಿಲಿಗೆರೆಹುಂಡಿ ಮಹೇಶ್, ಮನ್ನೇಹುಂಡಿ ಪರಮೇಶ್, ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಮತ್ಸ್ಯಗಂಧ (ಕ)2 ಪ್ರದರ್ಶನಗಳು, ಪ್ರೇತ (ಕ) 2 ಪ್ರದರ್ಶನಗಳು	
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಫಾರ್ ರಿಜಿಸ್ಟ್ರೇಷನ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮತ್ಸ್ಯಗಂಧ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಆರ್ಟಿಕಲ್ 370 (ಹಿಂ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಧೈರ್ಯಂ ಸರ್ವತ್ರ ಸಾಧನಂ	4 ಪ್ರದರ್ಶನಗಳು
ತಿಬ್ಬಾದೇವಿ	
ಲಾಲ್ ಸಲಾಮ್ (ತ)	4 ಪ್ರದರ್ಶನಗಳು
ಪ್ರಭಾ	
ಕ್ರಾಕ್(ಹಿಂ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಶಾಖಾಹಾರಿ (ಕ): ಬೆ.10.15ಕ್ಕೆ, ಕೆಟಿಎಂ (ಕ): ಮ.1.10ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಸಂ.4.15ಕ್ಕೆ, ಅಬ್ಬಬ್ಬ (ಕ): ರಾ.7.05ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ.
ಸ್ಕ್ರೀನ್ 2	ತುಂಡು (ಮ): ಬೆ.10.50ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಮ.1.40ಕ್ಕೆ, ರಾ.10.10ಕ್ಕೆ, ಕುಚ್ ಖಟ್ಟಾ ಹೋ ಜಾಯ್ (ಹಿಂ): ಸಂ.4.20ಕ್ಕೆ, ಪ್ರೇಮಲು (ಮ): ರಾ.7ಕ್ಕೆ.
ಸ್ಕ್ರೀನ್ 3	ಮಂಡ್ಯ ಹೈದ (ಕ): ಬೆ.10.15ಕ್ಕೆ, ಸೈರನ್ (ತ): ಮ.1.15ಕ್ಕೆ, ಮೇಡಮ್ ವೆಬ್ (ಇಂ): ಸಂ.4.35ಕ್ಕೆ, ರಾ.10ಕ್ಕೆ, ಭ್ರಮಯುಗಂ (ಮ): ರಾ.7.10ಕ್ಕೆ.
ಸ್ಕ್ರೀನ್ 4	ಸಾರಾಂಶ (ಕ): ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.1.05ಕ್ಕೆ, ಫೈಟರ್ (ಹಿಂ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7.20ಕ್ಕೆ, ಊರು ಪೇರು ಭೈರವಕೋಣ (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮೇಡಮ್ ವೆಬ್ (ಇಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.40ಕ್ಕೆ, ಊರು ಪೇರು ಭೈರವಕೋಣ (ತೆ): ಮ.3.55ಕ್ಕೆ
ಸ್ಕ್ರೀನ್ 2	ಮೇಡಮ್ ವೆಬ್ (ಇಂ): ಬೆ.9.55ಕ್ಕೆ, ಸೈರನ್ 108 (ತ): ಸಂ.4ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಸೈರನ್ 108 (ತ): ಮ.12.15ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಸಂ.4.10ಕ್ಕೆ, ಪ್ರೇಮಲು (ಮ): ಸಂ.6.45ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.05ಕ್ಕೆ, ಸಂ.4.20ಕ್ಕೆ, ಅಬ್ಬಬ್ಬ (ಕ): ಮ.1.15ಕ್ಕೆ, ತುಂಡು (ಮ): ರಾ.7.30ಕ್ಕೆ, ಭ್ರಮಯುಗಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ)(ಹಿಂ): ಸಂ.6.35ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.30ಕ್ಕೆ, ಮ.3.55ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.3.25ಕ್ಕೆ, ಅನ್ವೇಷಿಪಿನ್ ಕಂಡೆತುಂ (ಮ): ಸಂ.4.05ಕ್ಕೆ, ಸಾರಾಂಶ (ಕ): ಮ.1.15ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.12.15ಕ್ಕೆ, ಸೈರನ್ 108 (ತ): ಬೆ.10.10ಕ್ಕೆ, ಸಂ.4.20ಕ್ಕೆ, ರಾ.10.30ಕ್ಕೆ, ಮೇಡಮ್ ವೆಬ್ (ಇಂ): ಬೆ.10.50ಕ್ಕೆ, ಮ.1.25ಕ್ಕೆ, ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, ಪ್ರೇಮಲು (ಮ): ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ, ಅಬ್ಬಬ್ಬ (ಕ): ಮ.2.55ಕ್ಕೆ, ವಾರನಂ ಆಯಿರಂ (ತ): ಸಂ.6ಕ್ಕೆ, ರವಿಕೆ ಪ್ರಸಂಗ (ಕ): ರಾ.9.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಂತೆಮಾಸ್ತಮ್ಮನವರ ಅದ್ದೂರಿ ಕೊಂಡೋತ್ಸವ



ಸರಗೂರಲ್ಲಿ ಶ್ರೀಸಂತೆ ಮಾಸ್ತಮ್ಮನವರ ಕೊಂಡ ಮಹೋತ್ಸವ ನಡೆಯಿತು.

ಸರಗೂರು, ಫೆ.23– ಪಟ್ಟಣದಲ್ಲಿ ಸಂತೆಮಾಸ್ತಮ್ಮನವರ ಕೊಂಡೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನಡೆಯಿತು.

ಕೊಂಡೋತ್ಸವ ಅಂಗವಾಗಿ ದೇವಾಲಯವನ್ನು ತಳಿರು ತೋರಣ, ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಮುಂಜಾನೆಯೇ ದೇವಾಲಯದಲ್ಲಿ ಹೋಮ ಹವನ, ಗಣಪತಿ ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ನವಗ್ರಹ ಹೋಮ, ದುರ್ಗಾ ಹೋಮ ಸೇರಿದಂತೆ ವಿವಿಧ ಧಾರ್ಮಿಕ ಕೈಂಕರ್ಯಗಳು ನೆರವೇರಿದವು. ಬಳಿಕ ಕಪಿಲಾ ನದಿಯಿಂದ ಪೂರ್ಣಕುಂಭದೊಂದಿಗೆ ಶಿವಪಾರ್ವತಿಯರ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ತಂದು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿ ಅಮ್ಮನವರಿಗೆ ಬೆಳ್ಳಿ ಮುಖವಾಡ ಧರಿಸಿ ವಿಶೇಷ ಪೂಜೆ ಸಲ್ಲಿಸಿ, ಮಹಾಮಂಗಳಾರತಿ ನೆರವೇರಿಸಿ ಪ್ರಸಾದ ವಿನಿಯೋಗಿಸಲಾಯಿತು. ಹರಕೆ ಹೊತ್ತ ಭಕ್ತರು ಈಡುಗಾಯಿ ಸೇವೆ ಸಲ್ಲಿಸಿದರೇ, ನೂರಾರು ಯುವಕರು ಕೆಂಡದ ಮೇಲೆ ನಡೆದು ಭಕ್ತಿ ಸಮರ್ಪಿಸಿದರು.

ಈ ವೇಳೆ ಪ್ರಧಾನ ಅರ್ಚಕರಾದ ವಿನಯ್ ಗುರೂಜಿ, ಮಹದೇವಪ್ಪ ರವಿಶಾಸ್ತ್ರಿ ಸುಬ್ಬಣ್ಣ, ವಿರುಪಾಕ್ಷಾ, ದೇವಾಯದ ಟ್ರಸ್ಟ್ ಮುಖ್ಯಸ್ಥರು, ಎಲ್ಲಾ ಸಮುದಾಯದ ಯಜಮಾನರು, ಭಕ್ತರು ಇದ್ದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಚರಂಡಿ ಡೆಕ್ ಕಾಮಗಾರಿಗೆ ಖಾಸಗಿ ವ್ಯಕ್ತಿ ಅಡ್ಡಿ: ಕಾಮಗಾರಿ ನಡೆಸುವಂತೆ

ನಗರಸಭಾ ಅಧಿಕಾರಿಗಳಿಗೆ ಸಾರ್ವಜನಿಕರಿಂದ ಘೇರಾವ್




ನಂಜನಗೂಡು, ಫೆ.23– ಚರಂಡಿಗೆ ಡೆಕ್ ಕಾಮಗಾರಿ ನಡೆಸಲು ಬಂದ ನಗರಸಭಾ ಅಧಿಕಾರಿಗಳ ಕಾರ್ಯಕ್ಕೆ ಖಾಸಗಿಯವರು ಅಡ್ಡಪಡಿಸಿದ ಪರಿಣಾಮ ಕಾಮಗಾರಿ ನಡೆಸಿಯೇ ತೆರಳುವಂತೆ ಆಗ್ರಹಿಸಿ ಸಾರ್ವಜನಿಕರು ನಗರಸಭಾ ಅಧಿಕಾರಿಗಳಿಗೆ ಘೇರಾವ್ ಮಾಡಿದ ಘಟನೆ ನಗರದಲ್ಲಿ ನಡೆಯಿತು.

ನಗರದ ಚಾಮಲಾಪುರ ಹುಂಡಿ ಬಡಾವಣೆಯಲ್ಲಿ ಕೋರೆಹುಂಡಿ ಮುಖ್ಯ ರಸ್ತೆಯಿಂದ ಚಾಮಲಾಪುರ ಬಡಾವಣೆಗೆ ಸಂಪರ್ಕ ಕಲ್ಪಿಸುವ ಬಂಡಿ ದಾರಿಯನ್ನು ನಗರಸಭೆ ಅಧಿಕಾರಿಗಳು ಅಭಿವೃದ್ಧಿಗೊಳಿಸುವ ಸಲುವಾಗಿ ಯುಜಿಡಿ ಕಾಮಗಾರಿ ಮಾಡಿದ್ದಾರೆ. ಜೊತೆಗೆ ಚರಂಡಿ, ರಸ್ತೆ ಕಾಮಗಾರಿಯನ್ನು ಅರ್ಧಕ್ಕೆ ಮಾಡಿ ನಿಲ್ಲಿಸಿದ್ದಾರೆ. ಅಲ್ಲದೇ ಮುಡಾದಿಂದಲೂ ಚರಂಡಿ ನಿರ್ಮಿಸಿದ್ದು, ಖಾಸಗಿ ವ್ಯಕ್ತಿಯೊಬ್ಬರೂ ಕಾಮಗಾರಿಗೆ ಅಡ್ಡಿಪಡಿಸಿದ್ದರಿಂದ ಚರಂಡಿಗೆ ಡೆಕ್ ನಿರ್ಮಿಸದೆ ಇರುವುದರಿಂದ ಸಂಪರ್ಕ ರಸ್ತೆ ಇಲ್ಲದೆ ಸಾರ್ವಜನಿಕರಿಗೆ ಅನಾನುಕೂಲವಾಗಿದೆ. ಆದ್ದರಿಂದ ಡೆಕ್ ನಿರ್ಮಿಸಿ ಕೊಡುವಂತೆ ನಗರ ಸಭಾ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಹಲವು ವರ್ಷ ಕಳೆದರೂ ಅಧಿಕಾರಿಗಳ ನಿರ್ಲಕ್ಷ್ಯ ದಿಂದ ಕಾಮಗಾರಿ ಸ್ಥಗಿತಗೊಂಡಿತ್ತು ಸಾರ್ವಜನಿಕರ ಒತ್ತಾಯದ ಮೇರೆಗೆ ಇಂದು ಕಾಮಗಾರಿ ನಡೆಸಲು ಮುಂದಾದ ವೇಳೆ ಖಾಸಗಿ ವ್ಯಕ್ತಿ ಮತ್ತೆ ಕಾಮಗಾರಿಗೆ ಅಡ್ಡಿಪಡಿಸಿದ ಹಿನ್ನಲೆಯಲ್ಲಿ ಕಾಮಗಾರಿ ನಡೆಸದೇ ವಾಪಸ್ ತೆರಳುತ್ತಿದ್ದ ನಗರಸಭಾ ಅಧಿಕಾರಗಳನ್ನು ತಡೆದ ಸಾರ್ವಜನಿಕರು ಕಾಮಗಾರಿ ಪೂರ್ಣ ಗೊಳಿಸುವಂತೆ ಘೇರಾವ್ ನಡೆಸಿದರು. ಈ ವೇಳೆ ಮಧ್ಯೆ ಪ್ರವೇಶಿಸಿದ ಪೊಲೀಸರು ಪರಿಸ್ಥಿತಿ ತಿಳಿಗೊಳಿಸಿದರು. ಖಾಸಗಿ ವ್ಯಕ್ತಿ ವಿರುದ್ಧ ದೂರು ನೀಡುವುದಾಗಿ ನಗರಸಭಾ ಅಧಿಕಾರಿಗಳು ಸಾರ್ವಜನಿಕರಿಗೆ ಭರವಸೆ ನೀಡಿ ಸ್ಥಳದಿಂದ ತೆರಳಿದರು.

ನಗರಸಭಾ ಎಇಇ ಮಹೇಶ್ ಮಾತನಾಡಿ, ಕೋರೆಹುಂಡಿ ಮುಖ್ಯರಸ್ತೆಯಿಂದ ಚಾಮಲಾಪುರಹುಂಡಿ ಸಂಪರ್ಕ ಕಲ್ಪಿಸುವ ರಸ್ತೆಗೆ ಮುಡಾದಿಂದ ಚರಂಡಿ ನಿರ್ಮಿಸಲಾಗಿತ್ತು ಸಾರ್ವಜನಿಕರ ಮನವಿ ಮೇರೆಗೆ ಹಾಗೂ ತಹಸೀಲ್ದಾರ್ ಮತ್ತು ಭೂಮಾಪನ ಇಲಾಖೆ ಅಧಿಕಾರಿಗಳು ನಕಾಶೆ ಇರುವುದಾಗಿ ದಾಖಲೆ ನೀಡಿರುವ ಹಿನ್ನೆಲೆಯಲ್ಲಿ ಚರಂಡಿಗೆ ಡೆಕ್ ನಿರ್ಮಿಸಲು ಬಂದ ವೇಳೆ ಸರ್ವೆ ನಂ.220ರ ವ್ಯಕ್ತಿ ಈ ರಸ್ತೆ ನಮ್ಮ ಖಾಸಗಿ ಸ್ವತ್ತು ಎಂದು ಹೇಳಿ ಕಾಮಗಾರಿಗೆ ಅಡ್ಡಿಪಡಿಸಿದ್ದಾರೆ. ಈ ಬಗ್ಗೆ ತಹಸೀಲ್ದಾರ್ ಮತ್ತು ಭೂಮಾಪನ ಇಲಾಖಾ ಅಧಿಕಾರಿಗಳೂ ಸಹ ಬಂಡಿದಾರಿ ಇರುವುದಾಗಿ ನಕ್ಷೆ ನೀಡಿದ್ದಾರೆ. ಆದರೂ ಸಹ ಖಾಸಗಿ ವ್ಯಕ್ತಿ ರಸ್ತೆ ಮುಚ್ಚಿ ಕಾಮಗಾರಿಗೆ ಅಡ್ಡಿಪಡಿಸಿದ್ದಾರೆ. ಈ ಬಗ್ಗೆ ಕಂದಾಯ ಅಧಿಕಾರಿಗಳಿಗೆ ಪತ್ರ ಬರೆದು ನಕಾಶೆ ಅನ್ವಯ ರಸ್ತೆ ಗುರ್ತಿಸಿ ಕೊಡುವಂತೆ ಮನವಿ ಸಲ್ಲಿಸಲಾಗುವುದು. ಅಲ್ಲದೆ ನಮ್ಮ ಕಾರ್ಯಕ್ಕೆ ಅಡ್ಡಿಪಡಿಸಿರುವ ಖಾಸಗಿ ವ್ಯಕ್ತಿ ವಿರುದ್ಧ ದೂರು ನೀಡಲಾಗುವುದು ಎಂದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಕಂದಾಯ ಅಧಿಕಾರಿ ವೆಂಕಟೇಶ್, ಗ್ರಾಮಸ್ಥರು ಇದ್ದರು.

ತಿ.ನರಸೀಪುರದಲ್ಲಿ ನೂರೆಂಟು ಸೂಕ್ತಿಗಳು ಪುಸ್ತಕ ಬಿಡುಗಡೆ



ಕೆ.ಆರ್.ಷಣ್ಮುಖಸ್ವಾಮಿಯವರ 'ನೂರೆಂಟು ಸೂಕ್ತಿಗಳು' ಪುಸ್ತಕ ಬಿಡುಗಡೆ ಮಾಡಲಾಯಿತು.

ತಿ.ನರಸೀಪುರ, ಫೆ.23– ಇತ್ತೀಚೆಗೆ ಸರ್ಕಾರ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ್ದರೂ ರಾಜ್ಯದಲ್ಲಿ ಸಂಭ್ರಮವಿಲ್ಲ. ಹಾಗಾಗಿ ಬಸವಣ್ಣ ಅವರನ್ನು ಯಾಕೆ ಸಾಂಸ್ಕೃತಿಕ ನಾಯಕ ಎಂದು ಸರ್ಕಾರ ಘೋಷಿಸಿದೆ ಎಂಬ ಬಗ್ಗೆ ಜಾಗೃತಿ ಮೂಡಿಸಲು ಮುಂದಾಗಬೇಕು ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ತಿಳಿಸಿದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಹಾಗೂ ತಾಲೂಕು ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಕೆ.ಆರ್.ಷಣ್ಮುಖಸ್ವಾಮಿ ಅವರ "ನೂರೆಂಟು ಸೂಕ್ತಿಗಳು" ಪುಸ್ತಕ ಬಿಡುಗಡೆ ಹಾಗೂ ವೀರ ಮಡಿವಾಳ ಮಾಚಿದೇವರ ಜಯಂತಿ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವಿವಿಧ ತಾಲೂಕಿನಲ್ಲಿ ವಿಶ್ವ ಗುರು ಬಸವಣ್ಣ ಎಂಬ ವಿಷಯದ ಬಗ್ಗೆ ಸರಣಿ ಉಪನ್ಯಾಸ ಪ್ರಾರಂಭಿಸಲಿದೆ. ಆ ಮೂಲಕ ವಿಶ್ವಕ್ಕೆ ಬಸವಣ್ಣನವರ ಕೊಡುಗೆ ಏನೆಂದು ತಿಳಿಸುವ ಪ್ರಯತ್ನ ಮಾಡಲಾಗುತ್ತದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಪ್ರೊ.ನಿ.ಗಿರಿಗೌಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಅಕ್ಷರ, ಅನ್ನ, ಆರೋಗ್ಯ ಇವು ವ್ಯಕ್ತಿತ್ವ ವಿಕಾಸದ ಮೂಲ ಕೃತಿಗಳಾಗಿದ್ದು, ಇದರಿಂದ ಮಾತ್ರ ಸಮಾಜದ ಸುಧಾರಣೆ ಸಾಧ್ಯ ಎಂದರು.

ಆರೋಗ್ಯ, ಅನ್ನ ಮತ್ತು ಆಯಸ್ಸು ಇದ್ದರೆ ಮಾತ್ರ ವ್ಯಕ್ತಿತ್ವ ವಿಕಾಸವಾಗುತ್ತದೆ. ಹಾಗಾಗಿ ಸಮಾಜದ ಉದ್ಧಾರ ಮಾಡಬೇಕಾದರೆ ಜನ ಸಾಮಾನ್ಯರಿಗೂ ಅರ್ಥವಾಗುವ ರೀತಿ ಕೆಲಸ ಮಾಡಬೇಕಾಗುತ್ತದೆ. ಅನೇಕ ಸಲ ನಾವು ತ್ರಿಪದಿಯಲ್ಲಿ ದಾಸ ಪಂಥ, ವ್ಯಾಸ ಪಂಥದ ಬಗ್ಗೆ ಉಲ್ಲೇಖ ಮಾಡುತ್ತೇವೆ. ದಾಸ ಪಂಥವನ್ನು ಕನಕ ದಾಸರು ಜನಸಾಮಾನ್ಯರಿಗೆ ಅರ್ಥವಾಗುವ ರೀತಿ ರಚನೆ ಮಾಡಿದ್ದಾರೆ. ಹಾಗೆಯೇ 2 ಪಂಥಗಳಲ್ಲಿ ಜನ ಸಾಮಾನ್ಯರನ್ನು ಆಕರ್ಷಣೆ ಮಾಡುವ ಪಂಥ ಎಂದರೆ ಅದು ದಾಸಪಂಥವಾಗಿದೆ. ಪುರಂದರ ದಾಸರು, ಕನಕದಾಸರು ಎಲ್ಲಾ ತ್ಯಾಗ ಮಾಡಿ ಜಾಗಟೆ ಹಿಡಿದು ಹಳ್ಳಿ ಹಳ್ಳಿಗೆ ಹೋಗಿ ಸಮಾಜ ಸುಧಾರಣೆ ಮಾಡುವ ಕೆಲಸ ಮಾಡಿದರು. ನಾವು ಎಷ್ಟೇ ದೊಡ್ಡವರಾದರೂ ಕೂಡ ಸಮಾಜದಲ್ಲಿ ಕಿರಿಯರಾಗಿ ಕಾಣಬೇಕೆಂದು ಸರ್ವಜ್ಞನ ವಚನ ಹೇಳುತ್ತದೆ ಎಂದರು.

ಇದೇ ವೇಳೆ ಕಸಾಪ ನಿಕಟಪೂರ್ವ ಅಧ್ಯಕ್ಷ ಎಂ.ರಾಜು ವೀರ ಮಡಿವಾಳ ಮಾಚಿದೇವರ ಜಯಂತಿ ಕುರಿತಂತೆ ಸುದೀರ್ಘ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಕಸಾಪ ಮಾಜಿ ಜಿಲ್ಲಾಧ್ಯಕ್ಷ ಎಂ.ಚಂದ್ರಶೇಖರ್, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಡಾ.ಮಂಗಳ ಮೂರ್ತಿ, ಡಾ.ಪ್ರದೀಪ್, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ತೊಂಟೇಶ್, ಪೂಜಿತ್ ಕುಮಾರ್, ಪಟೇಲ್ ಪರಮೇಶ್, ಉಪನ್ಯಾಸಕ ಕುಮಾರಸ್ವಾಮಿ, ವಕೀಲ ಜ್ಞಾನೇಂದ್ರ ಮೂರ್ತಿ, ಕೋಲಾರ ಜಿಲ್ಲೆ ಓಂಕಾರ ಪ್ರಿಯ, ಸಿದ್ದರಾಜು, ರಾಜೇಂದ್ರ, ಅಂಜನ್, ಮಹದೇವ್ ಶೆಟ್ಟಿ, ಜಾನಕಮ್ಮ, ಜೈಲಕ್ಷ್ಮಿ, ಕುಮಾರ್, ಮೂರ್ತಿ, ಸಿದ್ದಲಿಂಗಸ್ವಾಮಿ, ಪ್ರಭುಸ್ವಾಮಿ, ನಾಗಪ್ಪ, ಯೋಗೇಶ್, ಮಲ್ಲೇಶ್, ರಾಜಶೇಖರ್, ನಾಗೇಶ್, ಗುರುಪ್ರಸಾದ್ ಮತ್ತಿತರರಿದ್ದರು.

ಮಡುವಿನಹಳ್ಳಿ ಸರ್ಕಾರಿ ಶಾಲಾ ವಾರ್ಷಿಕೋತ್ಸವ



ಶಾಲಾ ವಾರ್ಷಿಕೋತ್ಸವದಲ್ಲಿ ಗ್ರಾಮಸ್ಥರನ್ನು ಸನ್ಮಾನಿಸಲಾಯಿತು

ಮಲ್ಲುಂಡಿ, ಫೆ.23– ಪೋಷಕರು ತಮ್ಮ ಮಕ್ಕಳಿಗೆ ಆಸ್ತಿ ಮಾಡುವ ಬದಲು ಗುಣಮಟ್ಟದ ಶಿಕ್ಷಣ ಕೊಡಿಸಲು ಮುಂದಾಗಬೇಕು ಎಂದು ಎಸ್‌ಡಿಎಂಸಿ ಅಧ್ಯಕ್ಷ ಸತೀಶ್ ಕಿವಿಮಾತು ಹೇಳಿದರು.

ಇಲ್ಲಿಗೆ ಸಮೀಪದ ಮಡುವಿನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ಸಂಪತ್ತಿಗಿಂತಲೂ ವಿದ್ಯೆ ಶ್ರೇಷ್ಠ ಸಂಪತ್ತು. ಮಕ್ಕಳಿಗೆ ವಿದ್ಯೆ ನೀಡಿದರೆ ಅವರೇ ಎಲ್ಲಾ ಸಂಪತ್ತುಗಳನ್ನು ಗಳಿಸಿಕೊಳ್ಳುತ್ತಾರೆ. ಅಂಕ ಗಳಿಕೆಗಾಗಿ ನಡೆಸುವ ಪೈಪೋಟಿ ಶಿಕ್ಷಣವಾಗುವುದಿಲ್ಲ. ಬದಲಿಗೆ ಜೀವನ ಮೌಲ್ಯ ಹಾಗೂ ಸಾಮಾಜಿಕ ಮೌಲ್ಯಗಳನ್ನು ಒಳಗೊಂಡ ಸಂಸ್ಕಾರಯುತ ಶಿಕ್ಷಣಕ್ಕೆ ಅರ್ಥ ಬರುತ್ತದೆ. ಖಾಸಗಿ ಶಾಲೆಗಳಿಗಿಂತ ಸರ್ಕಾರಿ ಶಾಲೆಯಲ್ಲಿ ಉತ್ತಮ ಶಿಕ್ಷಣ ದೊರೆಯುತ್ತದೆ. ಹೀಗಾಗಿ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕು ಎಂದು ಮನವಿ ಮಾಡಿದರು. ಇದೇ ವೇಳೆ ಗ್ರಾಮಸ್ಥರನ್ನು ಸನ್ಮಾನಿಸಲಾಯಿತು. ಈ ವೇಳೆ ಶಿಕ್ಷಣ ಸಂಯೋಜಕ ರಾಘವೇಂದ್ರ, ಸಿಆರ್‌ಪಿ ಸರ್ವೇಶ್, ಪರಮೇಶ್, ಪ್ರಕಾಶ್, ಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಂಜುನಾಥ್, ಮುಖಂಡರಾದ ಬಸವರಾಜಪ್ಪ, ಮಂಜಪ್ಪ, ಎಸ್‌ಡಿಎಂಸಿ ಸದಸ್ಯರಾದ ಸತೀಶ್, ಬಸವಣ್ಣ, ವೆಂಕಟೇಶ್, ಸುರೇಶ್, ನಾಗೇಶ್, ಕುಮಾರ, ಮುಖ್ಯ ಶಿಕ್ಷಕ ಪ್ರಸಾದ್ ಸೇರಿದಂತೆ ಶಿಕ್ಷಕ ವೃಂದ ಹಾಜರಿದ್ದರು.

ಡಾ.ಬಾಬೂಜಿ ಭವನದ ಕಾಂಪೌಂಡ್ ನೆಲಸಮ ಖಂಡಿಸಿ ಪ್ರತಿಭಟನೆ



ಡಾ.ಬಾಬು ಜಗಜೀವನರಾಂ ಭವನದ ಕಾಂಪೌಂಡ್ ನೆಲಸಮಗೊಳಿಸಿ ಖಾಸಗಿ ಕಟ್ಟಡ ನಿರ್ಮಾಣ ಖಂಡಿಸಿ ದಲಿತ ಹಕ್ಕುಗಳ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಹುಣಸೂರು, ಫೆ23– ನಗರದ ಡಾ.ಬಾಬು ಜಗಜೀವನರಾಂ ಭವನದ ಕಾಂಪೌಂಡ್ ನೆಲಸಮ ಮಾಡಿ ಒತ್ತುವರಿ ಮಾಡಿಕೊಂಡು ಖಾಸಗಿ ಕಟ್ಟಡ ನಿರ್ಮಿಸುತ್ತಿರುವ ಕ್ರಮ ಖಂಡಿಸಿ ಹಾಗೂ ಭವನದ ಸದ್ಬಳಕೆಗೆ ಅನುಕೂಲ ಕಲ್ಪಿಸಬೇಕು ಎಂದು ಒತ್ತಾಯಿಸಿ ದಲಿತ ಹಕ್ಕುಗಳ ಸಮಿತಿ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ತಾಲೂಕು ಕಚೇರಿ ಎದುರು ಜಮಾಯಿಸಿದ ಸಮಿತಿ ಕಾರ್ಯಕರ್ತರು ಸಮಾಜ ಕಲ್ಯಾಣ ಇಲಾಖೆ ವೈಫಲ್ಯ ಹಾಗೂ ತಾಲೂಕು ಆಡಳಿತದ ಕಾರ್ಯ ವೈಖರಿ ಖಂಡಿಸಿ ಮತ್ತು ಬಾಬೂಜಿ ಭವನದ ಕಾಂಪೌಂಡ್ ಹೊಡೆದು ಹಾಕಿ ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಸಂಚಾಲಕ ವೆಂಕಟೇಶ್ ಮಾತನಾಡಿ, ನಗರದ ಡಾ.ಬಾಬು ಜಗಜೀವನರಾಂ ಭವನ ನಿರ್ಮಾಣ ಕಾಮಗಾರಿಯನ್ನು ಸಾಕಷ್ಟು ವರ್ಷ ಹಿಂದೆಯೇ ಕೈಗೆತ್ತಿ ಕೊಂಡರೂ, ಇನ್ನೂ ಭವನ ಸಾರ್ವ ಜನಿಕರ ಉಪಯೋಗಕ್ಕೆ ಬಾರದಿರುವುದು ಸಮಾಜ ಕಲ್ಯಾಣ ಇಲಾಖೆ ಆಡಳಿತ ವೈಫಲ್ಯವನ್ನು ಎತ್ತಿ ತೋರಿಸುತ್ತದೆ ಎಂದು ಆರೋಪಿಸಿದರು.

ಆದಿಜಾಂಬವ ಸಂಘದ ತಾಲೂಕು ಅಧ್ಯಕ್ಷ ಜೆ.ಮಹದೇವು ಮಾತನಾಡಿ, ಸರ್ಕಾರ ಲಕ್ಷಾಂತರ ರೂ. ಖರ್ಚು ಮಾಡಿ ಭವನ ನಿರ್ಮಿಸಿದರೂ, ಈವರೆಗೂ ಬಳಕೆಯಾಗದೇ ಪಾಳುಬಿದ್ದ ಕೊಂಪೆಯಾಗಿ ಅವ್ಯವಸ್ಥೆಯ ಆಗರವಾಗಿದೆ. ಡಾ.ಬಾಬು ಜಗಜೀವನರಾಂ ಭವನಕ್ಕೆ ನಿರ್ಮಿಸಿದ್ದ ಕಾಂಪೌಂಡ್ ಅನ್ನು ಖಾಸಗಿಯವರು ಒಡೆದು ಹಾಕಿ ಆ ಜಾಗದಲ್ಲಿ ಕಟ್ಟಡ ನಿರ್ಮಿಸಲು ಪಿಲ್ಲರ್‌ಗಳನ್ನು ನಿರ್ಮಿಸಿದರೂ ಸಂಬಂಧ ಪಟ್ಟ ಅಧಿಕಾರಿಗಳು ಯಾವುದೇ ಕ್ರಮ ವಹಿಸದಿರುವುದು ಖಂಡನೀಯ. ಹೀಗಾಗಿ ತಾಲೂಕು ಆಡಳಿತ ಇನ್ನಾದರೂ ಎಚ್ಚೆತ್ತುಕೊಂಡು ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ನಗರಸಭೆ ಮಾಜಿ ಅಧ್ಯಕ್ಷ ಲಕ್ಷ್ಮಣ್ ಮಾತನಾಡಿ, ಭವನದ ಕಾಂಪೌಂಡ್ ಒಡೆದು ಹಾಕಿರುವುದನ್ನು ತಾಲೂಕು ಆಡಳಿತ ಗಂಭೀರವಾಗಿ ಪರಿಗಣಿಸಿ ಡಾ.ಬಾಬು ಜಗಜೀವನರಾಂ ಭವನದ ರಕ್ಷಣೆಗೆ ಮುಂದಾಗಬೇಕು. ಅಲ್ಲದೇ ಕಾಂಪೌಂಡ್ ಒಡೆದು ಹಾಕಿರುವವರ ಹಾಗೂ ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಕ್ರಮ ಕೈಗೊಂಡು ಆಗಿರುವ ಹಾನಿಯನ್ನು ಅವರಿಂದಲೇ ಭರಿಸಬೇಕು. ಇಲ್ಲದಿದ್ದರೇ ಉಗ್ರಹೋರಾಟ ನಡೆಸಲಾಗುವುದು ಎಂದರು.

ಈ ವೇಳೆ ರಾಜ್ಯ ಪೌರ ಕಾರ್ಮಿಕರ ಯುವ ಅಭಿವೃದ್ಧಿ ಮಹಾ ಸಂಘದ ಕೆ.ನಂಜಪ್ಪ, ಸಿಪಿಎಂ ಮುಖಂಡ ವಿ.ಬಸವರಾಜು, ತಾಲೂಕು ಅಧ್ಯಕ್ಷ ಮಹದೇವ, ಉಪಾಧ್ಯಕ್ಷ ಶಿವರಾಮು, ಸ್ವಾಮಿ, ಕಾಂತರಾಜು, ನಗರ ಕಾರ್ಮಿಕರ ಸಂಘದ ಅಧ್ಯಕ್ಷ ಚಂದ್ರೇಗೌಡ ಸೇರಿದಂತೆ ಇನ್ನಿತರರಿದ್ದರು.

ಬೆಟ್ಟದತುಂಗ ಡೈರಿಗೆ ರಾಮೇಗೌಡ ಅಧ್ಯಕ್ಷ, ಪುಷ್ಪಕಲಾ ಉಪಾಧ್ಯಕ್ಷೆ



ಬೆಟ್ಟದಪುರ, ಫೆ.23– ಇಲ್ಲಿಗೆ ಸಮೀಪದ ಮಾಜಿ ಸಿಎಂ ದಿ.ಡಿ.ದೇವರಾಜ ಅರಸು ಅವರ ಹುಟ್ಟೂರು ಬೆಟ್ಟದತುಂಗ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಟಿ.ಎಲ್.ರಾಮೇಗೌಡ, ಉಪಾಧ್ಯಕ್ಷೆಯಾಗಿ ಪುಷ್ಪಕಲಾ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಮೇಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ಪುಷ್ಪಕಲಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸೈಯದ್ ಉಸ್ಮಾ ಘೋಷಿಸಿದರು.

ನೂತನ ಅಧ್ಯಕ್ಷ ಉಪಾಧ್ಯಕ್ಷರು ಅವಿರೋಧ ಆಯ್ಕೆಯಾಗುತ್ತಿದ್ದಂತೆಯೇ ಸಂಘದ ಆವರಣದಲ್ಲಿ ನೆರೆದಿದ್ದ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿಹಂಚಿ ಸಂಭ್ರಮಿಸಿದರು.

ಈ ವೇಳೆ ಕಾಂಗ್ರೆಸ್ ಮುಖಂಡ ಶ್ರೀನಾಥ್ ರಾಜ್ ಅರಸು, ನಿರ್ದೇಶಕರಾದ ವಿನಯ ರಾಜೇ ಅರಸ್, ಮಲ್ಲೇಶ್, ಟಿ.ನಟರಾಜು, ಉಮೇಶ್, ಸುಮಾ, ಕೆ.ರಾಮೇಗೌಡ, ಮುಖಂಡರಾದ ಶ್ರೀನಿವಾಸ್ ರಾಜೇ ಅರಸ್, ಗುಂಡಣ್ಣ, ವಿಜಯ್ ದೇವರಾಜ ಅರಸ್, ವಿಎಸ್‌ಎಸ್‌ಎನ್ ನಿರ್ದೇಶಕ ಬಲರಾಮೇಗೌಡ, ಸರ್ಕಾರದ ನಾಮ ನಿರ್ದೇಶಕ ಶೇಖರ್ ಗೌಡ, ಕೃಷ್ಣೇಗೌಡ, ರಾಜು, ಚೆಲುವಯ್ಯ, ಸಣ್ಣಯ್ಯ, ಕಾರ್ಯದರ್ಶಿ ಸವಿತಾ, ಸಿಬ್ಬಂದಿ ಶಾಂತ ಅರಸ್, ಸ್ವಾಮಿ ಉಪಸ್ಥಿತರಿದ್ದರು.

ಸುಂದ್ರಮ್ಮ ನಿಧನ



ಕೆ.ಆರ್.ನಗರ, ಫೆ.23– ಪಟ್ಟಣದ ವಿದ್ಯಾನಗರದ ನಿವಾಸಿ ಲೇ.ಶ್ರೀನಿವಾಸರಾವ್ ಅವರ ಪತ್ನಿ ಸುಂದ್ರಮ್ಮ(83) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಮೂವರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎರಡನೇ ವರ್ಷದ ಸವಿನೆನಪು

ಜೊತೆಗಿರದ ಜೀವ ಎಂದೆಂದಿಗೂ ಜೀವಂತ




ಶ್ರೀ ಪೊಯಾಟ್ಟಿರ ಬೋಪಣ್ಣ (ಮುಕುಂದ್)

ಜನನ: 13.04.1959, ಮರಣ: 24.02.2022

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಪತ್ನಿ ಶೈಲಾ ಬೋಪಣ್ಣ, ಮಕ್ಕಳು ಮತ್ತು ಕುಟುಂಬವರ್ಗದವರು

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ಹೆಚ್.ಹನುಮಂತು

(ಲೇ.ನಿಂಗಮ್ಮ & ಲೇ. ಶ್ರೀ ಅಂಗಡಿ ಹನುಮಯ್ಯರವರ ಮಗ)

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಪತ್ನಿ ಶ್ರೀಮತಿ ಚಿಕ್ಕದೇವಮ್ಮ, ಶ್ರೀಮತಿ ರುಕ್ಮಿಣಿ ಮತ್ತು ಶ್ರೀ ತಿಮ್ಮೇಗೌಡ, ಶ್ರೀಮತಿ ಚೈತ್ರ ಮತ್ತು ಶ್ರೀ ವೆಂಕಟೇಶ್, ಹನುಮಯ್ಯನವರ ಕುಟುಂಬವರ್ಗದವರು ಹಾಗೂ ಬಂಧು-ಮಿತ್ರರು.

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ

ಜೆ.ಎಲ್.ಬಿ. ರಸ್ತೆ, ಅಶೋಕ ವೃತ್ತದ ಹತ್ತಿರ, ಲಕ್ಷ್ಮೀಪುರಂ, ಮೈಸೂರು–570 004

J.L.B Road, Near Ashoka Circle, Lakshmipuram, Mysuru - 570 004

Email : musicuniversitymys@gmail.com, Website: https://www.musicuniversity.ac.in

Ph.Office(ದೂರವಾಣಿ): 0821-2332703

ಸಂಖ್ಯೆ: ಕೆಎಸ್‌ಜಿಎಚ್/ಸಂಪ್ರಕವಿ/1202/2023–24, ದಿನಾಂಕ: 19.02.2024

ಟೆಂಡರ್ ಪ್ರಕಟಣೆ (E-Procurement Portal ಮುಖಾಂತರ ಮಾತ್ರ)

Website : https://kppp.karnataka.gov.in

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯದ ಕಛೇರಿಗೆ ಅಗತ್ಯವಿರುವ ಡೇಟಾ ಎಂಟ್ರಿ ಆಪರೇಟರ್ಸ್, ಡಿ ದರ್ಜೆ ನೌಕರರು, ಹಾಗೂ ಭದ್ರತಾ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು / ಒದಗಿಸುವ ಸಂಬಂಧ ಇ-ಪ್ರಕ್ಯೂರ್‌ಮೆಂಟ್ (E-Procurement) ತಂತ್ರಾಂಶದಲ್ಲಿ **ಟೆಂಡರ್‌ಅನ್ನು ದಿನಾಂಕ: 20–02–2024 ರಂದು ಹೊರಡಿಸಲಾಗಿದ್ದು, ಟೆಂಡರ್‌ಅನ್ನು ಸಲ್ಲಿಸಲು ಕೊನೆಯ ದಿನಾಂಕ:01–03–2024 ಸಂಜೆ 5.30 ಗಂಟೆಯವರೆಗೆ ಮತ್ತು ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 02–03–2024 ರಂದು ಬೆಳಿಗ್ಗೆ 11.00 ಗಂಟೆಗೆ (ರಜಾ ದಿನಗಳನ್ನು ಹೊರತುಪಡಿಸಿ)** ಕುಲಪತಿಗಳು ಹಾಗೂ ಕುಲಸಚಿವರು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಇವರ ಸಮಕ್ಷಮದಲ್ಲಿ ಟೆಂಡರ್ ಅನ್ನು ತೆರೆಯಲಾಗುವುದು.

Tender Indent Number: **KSGHMPAU/2023-24/SE0001**

ಹೆಚ್ಚಿನ ವಿವರಗಳಿಗೆ : Website: https://www.musicuniversity.ac.in ಅನ್ನು ವೀಕ್ಷಿಸುವುದು. ಅಥವಾ ದೂರವಾಣಿ ಸಂಖ್ಯೆ: **0821–2402114, 0821–2332703.** ಅನ್ನು ಸಂಪರ್ಕಿಸುವುದು.

ಸಹಿ/–
ಕುಲಸಚಿವರು

ಒಂದನೇ ವರ್ಷದ ಪುಣ್ಯಸ್ಮರಣೆ




ಶ್ರೀ ಗೋವಿಂದರಾಜು

ಮರಣ: 24.02.2023 ವಿಜಯಶ್ರೀಪುರ

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷವಾದರೂ ಸದಾ ನಿಮ್ಮ ನೆನಪಿನಲ್ಲೇ ಇರುವ ಕುಟುಂಬವರ್ಗದವರು

4ನೇ ವರ್ಷದ ಪುಣ್ಯಸ್ಮರಣೆ



ಚಿ||ಆರ್.ರಘುವೀರ್ B.E

ಜನನ: 16-09-1992
ಮರಣ: 24-02-2020

ನೀನು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ನಿನ್ನ ಸವಿನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ

ಸದಾ ನಿನ್ನ ನೆನಪಿನಲ್ಲಿರುವ:
ತಂದೆ: ಹೆಚ್.ಜೆ.ರಾಮಕೃಷ್ಣ
ತಾಯಿ: ಭಾಗ್ಯಮ್ಮ ವಿ.
ಅಕ್ಕಂದಿರು: ಪವಿತ್ರ ಮತ್ತು ಸುಮಿತ್ರ
ಸ್ನೇಹಿತರು ಹಾಗೂ ಬಂಧುಗಳು, ಮೈಸೂರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ದಿ|| ಶ್ರೀ ರಮೇಶ್

ಜನನ: 01–09–1973
ಮರಣ: 14–02–2024

ಇವರು ದಿನಾಂಕ: 14.02.2024 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ **ಉತ್ತರ ಕ್ರಿಯಾದಿ ಕಾರ್ಯವನ್ನು** ದಿನಾಂಕ 24.02.2024 ಶನಿವಾರ ಬೆಳಿಗ್ಗೆ 10.30ಕ್ಕೆ ಹೆಬ್ಬಾಳ್ ರುದ್ರಭೂಮಿಯಲ್ಲಿ ಏರ್ಪಡಿಸಿರುವುದರಿಂದ

ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.

ಭೋಜನ: ಮಧ್ಯಾಹ್ನ 1.00 ಗಂಟೆಗೆ
ಸ್ಥಳ: ಮಂಚೇಗೌಡನ ಕೊಪ್ಪಲು ಸಮುದಾಯ ಭವನ ಮಯೂರ ಸರ್ಕಲ್ ಹತ್ತಿರ, ಹೆಬ್ಬಾಳ್, ಮೈಸೂರು

ದುಃಖತಪ್ತರು: ತಾಯಿ ಶ್ರೀಮತಿ ಪದ್ಮ, ಮಕ್ಕಳು ಹಾಗೂ ಬಂಧುಮಿತ್ರರು